
Editor: **S.Y.GURUSHANTH** Publisher: **G.N.NAGARAJ** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE


ಸಂಪುಟ-19 | ಸಂಚಿಕೆ-38 | ಸೆಪ್ಟೆಂಬರ್ 15-21, 2025 | ಪುಟ 16 | ರೂ.10
Volume-19 | Issue-38 | September 15-21, 2025 | Pages 16 | Price 10/-




ಮದ್ದೂರು: ಕಿಡಿಯನ್ನೇ ಕಾಡ್ಗಿಚ್ಚಾಗಿಸಿದ ಬಿಜೆಪಿ

ನೇಪಾಳದಲ್ಲಿ ಜೆನ್-ಝಿ ಕ್ರಾಂತಿ

ಏನಾಗುತ್ತಿದೆ? ಯಾಕಾಗುತ್ತಿದೆ?






ಭಾಗವತರ ಒಗಟುಗಳು

ವರದಕ್ಷಿಣೆ : ಅದೊಂದು ನಾಚಿಕೆಗೇಡು ಮತ್ತು ಅಪರಾಧ

ಭಾಗ 36



ಜೆ.ಎಸ್ ಕಾಲಂ

ಅನುಭವ, ಅಧ್ಯಯನದಿಂದ ಅರಳಿದ ಕಾರ್ಮಿಕ ವರ್ಗದ ಸ್ವತಂತ್ರ ಪ್ರಜ್ಞೆ

"ಸಂಸ್ಕೃತಿಯ ಹೆಸರಿಂದೆ
ಶ್ರೀಮಂತರೊಡ್ಡುವಾ ಬಲೆ
ನಿಮಗೆ ಮೃತ್ಯು."
– ಕುವೆಂಪು

"ಮೊದಲ ಗುಂಡು ತಗುಲಬೇಕಾದ್ದು
ನಮ್ಮ ತಲೆಗೇ! ತಲೆ...ತಲೆ....ತಲೆ
ಮೊದಲು ನಮ್ಮ ತಲೆಯಲ್ಲಿರುವ
ಮೆದುಳನ್ನು ಕ್ಲೀನ್ ಮಾಡಬೇಕು."
– ಕುವೆಂಪು.

ಹತ್ತೊಂಬತ್ತನೆಯ ಆದಿಭಾಗದ ಕಾರ್ಮಿಕ ಚಳುವಳಿಯ ಚರಿತ್ರೆ ಬಗ್ಗೆ ಬರೆಯುವಾಗ ಕುವೆಂಪುರವರ ಮಾತುಗಳ ಈ ಉಲ್ಲೇಖವೇಕೆ ಎಂಬ ಪ್ರಶ್ನೆ ಏಳುವುದು ಸಹಜ. ಇದಕ್ಕೆ ವಿವರಣೆ ಇರುವುದು ಎಂಗೆಲ್ಸ್‌ರವರು ಚಾರ್ಟಿಸ್ಟರಲ್ಲಿ ಸ್ವತಂತ್ರವಾಗಿ ಕಾರ್ಮಿಕ ಪ್ರಜ್ಞೆ ರೂಪುಗೊಂಡ ಬಗ್ಗೆ ಮಾಡಿದ ವಿಶ್ಲೇಷಣೆಯಲ್ಲಿ. 1640ರ ದಶಕದಿಂದ ಆರಂಭಿಸಿ 1840ರ ದಶಕದವರೆಗಿನ ಎರಡು ಶತಮಾನಗಳ ಕಾಲ ಬಂಡವಾಳಶಾಹಿಗಳ ಹಿಮ್ಮೇಳವಾಗಿದ್ದ ದುಡಿಯುವ ವರ್ಗ, ಕಾರ್ಮಿಕ ವರ್ಗ ಸ್ವತಂತ್ರ ರಾಜಕೀಯ ಶಕ್ತಿಯಾಗಿ ಸಂಘಟಿತವಾದದ್ದು, ಬಂಡವಾಳಶಾಹಿಗೆ ಸವಾಲು ಹಾಕಲು ಸಾಧ್ಯವಾಗಿದ್ದು ಶ್ರೀಮಂತರೊಡ್ಡುವಾ ಬಲೆ ನಮಗೆ ಮೃತ್ಯು ಎಂದು ಕಂಡುಕೊಂಡದ್ದರಿಂದ, ತಮ್ಮ ತಲೆಗೇ ಗುಂಡು ಹೊಡೆದುಕೊಂಡು ತಮ್ಮದೇ ಮೆದುಳನ್ನು ಬಂಡವಾಳಶಾಹಿ ವಿಚಾರಗಳಿಂದ ಕ್ಲೀನ್ ಮಾಡಿಕೊಂಡದ್ದರಿಂದ. ಕಾರ್ಮಿಕರು ಬಹು ಗಣನೀಯ ಪ್ರಮಾಣದಲ್ಲಿ ಧಾರ್ಮಿಕ ವಿಚಾರಗಳ ಹಿಡಿತಕ್ಕೆ ಮಾತ್ರವಲ್ಲ, ಚರ್ಚ್‌ನ ಹಾಗು ಅದರ ಪಾದ್ರಿಗಳ ದೈವ ಭಕ್ತಿಯ ಹಿಡಿತಕ್ಕೆ ಸಿಕ್ಕಿ ಬಿದ್ದಿದ್ದರು. ರಾಜನನ್ನು ವಧಿಸಿ ಪ್ರಜಾಪ್ರಭುತ್ವ ಕ್ರಾಂತಿ ಮಾಡಿದರೂ ಮತ್ತೆ ರಾಜರನ್ನು ಕರೆತಂದು ಸಿಂಹಾಸನದಲ್ಲಿ ಕುಳ್ಳಿರಿಸಿ, ಲಾರ್ಡ್ಸ್‌ಗಳೆಂಬ ರಾಜಮಾನ್ಯರಿಗೆ ಮಣೆ ಹಾಕಿ ದುಡಿಯುವ ಜನರ, ಕಾರ್ಮಿಕರಲ್ಲಿ ಇನ್ನೂ ಉಳಿದಿರುವ ರಾಜ ಭಕ್ತಿಯ ಪ್ರಭಾವದ ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಧಾರ್ಮಿಕ ಸುಧಾರಣೆಗಳು, ಪ್ರಜಾಪ್ರಭುತ್ವ ಕ್ರಾಂತಿಯ ಕಾರಣವಾಗಿ ಕುಗ್ಗಿರಬಹುದಾದ ದೈವ ಭಕ್ತಿ, ರಾಜ ಭಕ್ತಿಯ ಸ್ಥಾನವನ್ನು ಪಾರ್ಲಿಮೆಂಟ್ ಭಕ್ತಿ, ಪೋಲೀಸ್ ಮತ್ತು ಸೈನ್ಯದ ದೌರ್ಜನ್ಯ ಬಲದಿಂದ ಹೇರಿದ ಕಾನೂನಿನ ಭಯ ಇವುಗಳಿಂದ ತುಂಬಿದ್ದರು. ಆಡಳಿತಾಧಿಕಾರಕ್ಕೆ ಸಂಬಂಧಿಸಿದ ಈ ಅಂಶಗಳ ಜೊತೆಗೆ ಅಂದು ಬಂಳವಾಳಶಾಹಿ ಉತ್ಪಾದನಾ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತ್ತು. ಜನ ದಟ್ಟಣೆಯ ನಗರಗಳು, ಅದರಲ್ಲಿ ಸ್ಲಂಗಳೆಂಬ ಕೊಳಚೆ ಪ್ರದೇಶಗಳಲ್ಲಿ ಕಾರ್ಮಿಕರು ಬದುಕುವುದು ಅನಿವಾರ್ಯವನ್ನಾಗಿ ಮಾಡಿತ್ತು.

ಸಂಕುಚಿತ ಸ್ವಾರ್ಥ, ಪರಸ್ಪರ ತುಳಿಯುವುದೇ ಪ್ರಧಾನ ತತ್ವ

ಎಂಗೆಲ್ಸ್‌ರವರು ಅಂತಹ ಪರಿಸ್ಥಿತಿಯನ್ನು ವಿವರಿಸಿದ್ದು ಹೀಗೆ: ಸಮಾಜದಲ್ಲಿ ಪ್ರಧಾನವಾದ ಸ್ಪರ್ಧಾತ್ಮಕ, ಸಂಕುಚಿತ ಸ್ವಾರ್ಥದ ಮನಸ್ಥಿತಿ ಸಮಾಜದ ಪ್ರಧಾನ ತತ್ವ ಎಂಬಂತೆ ಎಲ್ಲೆಡೆಯೂ ತುಂಬಿ ತುಳುಕುತ್ತಿತ್ತು. ನಗರಗಳಲ್ಲಿ ಪರಸ್ಪರ ತಾಕುತ್ತಾ ಸಾಗಿದರೂ ಒಬ್ಬರನ್ನೊಬ್ಬರು ಕಣ್ಣೆತ್ತಿಯೂ ನೋಡದ ನಿರ್ದಯ ಉಪೇಕ್ಷೆ; ಪರಸ್ಪರ ಮಾನವ ಭಾವನೆಯೇ ಇಲ್ಲದಂತಹ ಒಂಟಿತನ, ಎಷ್ಟು ಹೆಚ್ಚು ಜನರು ಒಂದೇ ಜಾಗದಲ್ಲಿ ದಟ್ಟವಾಗಿ ಬದುಕುತ್ತಿದ್ದಾರೋ ಅಷ್ಟು ಹೆಚ್ಚು ಮನಸ್ಸಿಗೆ ನೋವುಂಟು ಮಾಡುತ್ತಿತ್ತು. ಅಸಹನೀಯವಾಗಿತ್ತು." "ಪ್ರತಿಯೊಬ್ಬರೂ ಉಳಿದೆಲ್ಲರೊಡನೆ ಬಹಿರಂಗ ಯುದ್ಧ ಸಾರಿದಂತಿತ್ತು. ಪ್ರತಿಯೊಬ್ಬರೂ ಇನ್ನೊಬ್ಬರನ್ನು ಶೋಷಿಸುತ್ತಾರೆ. ಇವೆಲ್ಲದರ ಕೊನೆಯ ಘಟ್ಟವಾಗಿ ಸಬಲರು ದುರ್ಬಲರನ್ನು ಕಾಲ ಕೆಳಗೆ ಹಾಕಿಕೊಂಡು ತುಳಿಯುತ್ತಾರೆ." "ಮಾನವ ಸ್ವಭಾವದ ಅತ್ಯಂತ ಉತ್ತಮ ಗುಣಗಳನ್ನು ಬಿಟ್ಟು ಹಾಕಲೇಬೇಕಾದ ಒತ್ತಾಯಕ್ಕೆ ಒಳಗಾಗಿದ್ದಾರೆ. ಅವರೊಳಗೆ ಹುದುಗಿರುವ ನೂರು ಸಾಮರ್ಥ್ಯಗಳು, ಇಲ್ಲಿಯವರೆಗೆ ನಿಷ್ಕ್ರಿಯವಾಗಿಯೇ ಉಳಿದಿದ್ದಂತಹವು, ಕೆಲವರದೇ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲೆಂದು ಇನ್ನೂ ಕೂಡ ತುಳಿಯಲ್ಪಟ್ಟಿವೆ."

ಶಿಕ್ಷಣವಲ್ಲದ ಶಿಕ್ಷಣ :

"ಇಂತಹ ವಾತಾವರಣದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಕಾರ್ಮಿಕರು ತನ್ನ ಸೇವೆ ಮಾಡಲು ಎಷ್ಟು ಬೇಕೋ ಅಷ್ಟು ಮಾತ್ರ ಶಿಕ್ಷಣವನ್ನು ನೀಡುತ್ತಿದೆ. ಸಾರ್ವಜನಿಕ ಶಿಕ್ಷಣ (19ನೆಯ ಶತಮಾನದ ಮೊದಲ ಭಾಗದಲ್ಲಿ) ಕನಿಷ್ಠ ಮಟ್ಟದಲ್ಲಿದೆ. ಪ್ರಭುತ್ವ ಮಾನ್ಯತೆ ಪಡೆದ ಚರ್ಚ್ ಹಾಗೂ ವಿವಿಧ ಕ್ರಿಶ್ಚಿಯನ್ ಪಂಥಗಳ ಪ್ರತ್ಯೇಕ ಶಾಲೆಗಳು ಪ್ರಧಾನವಾಗಿ ಧಾರ್ಮಿಕ ಶಿಕ್ಷಣ ನೀಡುತ್ತವೆ. ಅದೂ ಕೂಡಾ ಕ್ರಿಸ್ತನ ಬಗ್ಗೆ ಅದರ ತಾತ್ವಿಕ ಚರ್ಚೆಗಳ ಬಗ್ಗೆ ಅಲ್ಲ. ಮಕ್ಕಳ ಮೆದುಳಿಗೆ ಉಪಯೋಗವಿಲ್ಲದ ಕುರುಡು ಸೂತ್ರಗಳು, ಕ್ರಿಶ್ಚಿಯನ್ ಪಂಥೀಯ ಜಗಳಗಳು, ದ್ವೇಷವನ್ನು ತುಂಬಲಾಗುತ್ತದೆ." "ಬಂಡವಾಳಶಾಹಿಗಳ ಲಾಭಕ್ಕೆ ಅಗತ್ಯವಾದಷ್ಟು ಮಾತ್ರ ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಕಲಿಸಲಾಗುತ್ತದೆ. ಆದರೆ ತಾನು ವಾಸಮಾಡುವ ನಗರದಲ್ಲಿ, ತನ್ನ ದೀರ್ಘಾವಧಿಯ ಶ್ರಮಪೂರಿತ ದುಡಿಮೆಯ ಕಾರಣವಾಗಿ ಪ್ರಕೃತಿಯ ಕ್ಷಣ ಮಾತ್ರ ದರ್ಶನವೂ ಲಭ್ಯವಾಗದಿರುವ ಪರಿಸ್ಥಿತಿಯಲ್ಲಿ ಅದು ಅವರಿಗೆ ವಿಜ್ಞಾನದ ಈ ಸೀಮಿತ ಶಿಕ್ಷಣ ನಿಷ್ಪ್ರಯೋಜಕವಾಗಿದೆ." "ಅವರಿಗೆ ಸಿಗುವ ರಾಜಕೀಯ ಅರ್ಥಶಾಸ್ತ್ರದ ಶಿಕ್ಷಣ ಎಂದು ಮುಕ್ತ ಸ್ಪರ್ಧೆಯ ಬಗ್ಗೆ ಮಾತ್ರ ಹೇಳಿಕೊಡಲಾಗುತ್ತದೆ. ಹಸಿದುಕೊಂಡಿರುವುದನ್ನು ಬಿಟ್ಟರೆ, ಅದನ್ನು ನಿವಾರಿಸಲು ವೈಜ್ಞಾನಿಕವಾಗಿ ಏನನ್ನೂ ಮಾಡಲು ಸಾಧ್ಯವಿಲ್ಲ ಎಂಬುದಷ್ಟೇ ಅವರಿಗೆ ಕಲಿಸುವುದರ ಸಾರ." ಪಾರ್ಲಿಮೆಂಟರಿ ಭ್ರಮೆ, ಕಾನೂನಿಗೆ ವಿಧೇಯತೆ ಮತ್ತು ಸೈನ್ಯದ ಬಲ, ಪರಸ್ಪರ ತುಳಿಯುವ ಸ್ಪರ್ಧೆ, ಸಂಕುಚಿತ ಸ್ವಾರ್ಥ, ಬಲಶಾಲಿಗಳ ದರ್ಪ, ಬಂಡವಾಳಶಾಹಿಗಳ ರಾಜಕೀಯ ಮತ್ತು ಧರ್ಮಕ್ಕೆ ಸೇವೆ ಸಲ್ಲಿಸುವಂತೆ ಪಳಗಿಸುವ ಸತ್ವಹೀನ ಶಿಕ್ಷಣ, ಕಾರ್ಮಿಕ ವರ್ಗವನ್ನು ವಿಧೇಯತೆ, ನಿಷ್ಕ್ರಿಯತೆ ಇದೇ ನಮ್ಮ ಹಣೆಬರಹ ಎಂದು ಹಣೆ ಚಚ್ಚಿಕೊಳ್ಳುವ ಮನಸ್ಥಿತಿಯನ್ನು ರೂಪಿಸಿದ ಇಂತಹ ವಾತಾವರಣವನ್ನು ಚಾರ್ಟಿಸ್ಟ್ ಚಳುವಳಿ ಬೇಧಿಸಿ ಸಿಡಿದೆದ್ದ ಬಗೆ ಹೇಗೆ? ಒಂದು ಕಡೆ ಅನುಭವ ಮತ್ತೊಂದು ಕಡೆ ಓದು, ಅಧ್ಯಯನಗಳನ್ನು ಒಟ್ಟಾಗಿಸಿಕೊಂಡು ಮೂಡಿದ ಅರಿವಿನಿಂದ. ಕಾರ್ಮಿಕರಾಗಿ ಬದುಕಿನ ಅನುಭವ, ದಶಕಗಳ ಕಾಲದ ರಾಜಕೀಯ, ಆರ್ಥಿಕ ಹೋರಾಟಗಳ ಅನುಭವ, ಒಂದು ಕಡೆ ಚಳುವಳಿಯ ಪತ್ರಿಕೆಯ ವರದಿ, ಲೇಖನಗಳ, ಕಿರುಪುಸ್ತಿಕೆಗಳ ಓದು, ತತ್ವಶಾಸ್ತ್ರದ ಪುಸ್ತಕಗಳ ಅಧ್ಯಯನ ಜೊತೆಗೆ ಕಾವ್ಯ, ಕಾದಂಬರಿಗಳ ಓದು, ವಿಮರ್ಶೆ, ಸ್ವತಃ ಕವನ, ಹಾಡು, ಕಾದಂಬರಿಗಳ ರಚನೆ ಇತ್ಯಾದಿಗಳು ಮತ್ತೊಂದು ಕಡೆ. ಎರಡು ನೂರು ವರ್ಷಗಳ ಹಿಂದೆ, 19ನೆಯ ಶತಮಾನದ ಆರಂಭದ ಅಂದು ಗೇಣಿದಾರರು, ಬಡ ರೈತರು, ಕೂಲಿಕಾರರಾಗಿದ್ದವರನ್ನು ಅವರ ಭೂಮಿಯಿಂದ ಓಡಿಸಿ ಹಸಿವು, ಕಾನೂನು, ಹಿಂಸೆ, ದೌರ್ಜನ್ಯ ಎಂಬ ಸಾಧನಗಳ ಮೂಲಕ ಒತ್ತಾಯದಿಂದ ಕಾರ್ಮಿಕರಾಗಿ ಪರಿವರ್ತಿಸಿದ ಕಾಲ. ಅಂದು ಕಾರ್ಮಿಕರ ತಿಳುವಳಿಕೆಯ ಬೆಳವಣಿಗೆ ಹೇಗಿರಬಹುದು?

ಅನುಭವಗಳ ಜಗತ್ತು: ಬದುಕಿನ ಅನುಭವ

ಕಾರ್ಮಿಕರ ನಿರುದ್ಯೋಗ, ಅತ್ಯಂತ ಕಡಿಮೆ ಕೂಲಿ, ಸ್ಲಂನ ಅಮಾನವೀಯ ಬದುಕು ಮತ್ತು ಚರ್ಚ್‌ಗಳಲ್ಲಿ ಮಾಡುತ್ತಿದ್ದ ಉಪದೇಶಗಳ ನಡುವಿನ ವೈರುಧ್ಯಗಳು, ಪಾದ್ರಿಗಳು ಯಾವಾಗಲೂ ಕಾಣಿಕೆಗಳಿಗಾಗಿ ಪೀಡಿಸುತ್ತ ಉದ್ದುದ್ದ ಮಾತುಗಳನ್ನಾಡುತ್ತಾ, ಶ್ರೀಮಂತ ಭೂಮಾಲೀಕರು, ಬಂಡವಾಳಶಾಹಿಗಳ ಜೊತೆ ಕುಡಿದು ಮೋಜು ಮಾಡುತ್ತಿದ್ದದ್ದು ಕಣ್ಣಿಗೆ ಹೊಡೆಯುವಂತೆ ಕಾಣುತ್ತಿತ್ತು. ಶತಮಾನಗಳ ಹಿಂದೆ ಕ್ಯಾಥೊಲಿಕ್ ಚರ್ಚ್‌ನ ದಬ್ಬಾಳಿಕೆ, ಆಡಂಬರಗಳ ವಿರುದ್ಧ ಅರಿವು ಮೂಡಿಸಿದ್ದ ವಿವಿಧ ಧಾರ್ಮಿಕ ಪಂಥಗಳು ಈಗ ಕೇವಲ ಆಚರಣೆಗಳ, ಸೂತ್ರಗಳ ಕಲಹಗಳ ಮಟ್ಟಕ್ಕೆ ಇಳಿದಿದ್ದವು. ಈ ಎಲ್ಲವೂ ಅವರಲ್ಲಿ ಧಾರ್ಮಿಕ ಪೂರ್ವಾಗ್ರಹಗಳನ್ನು ಕುಗ್ಗಿಸಿತು. ಅವರಿಗೆ ಧಾರ್ಮಿಕ ಶಿಕ್ಷಣವನ್ನೂ ಸರಿಯಾಗಿ ನೀಡದಿದ್ದದ್ದು ಒಳ್ಳೆಯದೇ ಆಯಿತು. ವಿವಿಧ ಪಂಥಗಳ ಕಲಹಗಳು ಬಂಡವಾಳಶಾಹಿಗಳ ನಡುವೆ ಮೂಡಿಸಿದ್ದ ಶತೃತ್ವ ಕಾರ್ಮಿಕರನ್ನು ಕಾಡಲಿಲ್ಲ. ವಿವಿಧ ಪಂಥಗಳಿಗೆ ಸೇರಿದ ಕಾರ್ಮಿಕರು ಒಂದೆಡೆ ಕೆಲಸ ಮಾಡುವ, ಜನ ದಟ್ಟಣೆಯಲ್ಲಿ ಒಂದೆಡೆಯೇ ಬದುಕು ಅವರು ಹೆಚ್ಚು ಸಾಮರಸ್ಯದಿಂದ ಬದುಕುವುದನ್ನು ಕಲಿಸಿತು. ಅಷ್ಟೇ ಅಲ್ಲ, ಬಹು ದೊಡ್ಡ ಕೈಗಾರಿಕಾ ನಗರವಾದ ಮ್ಯಾಂಚೆಸ್ಟರ್ ತಮ್ಮ ಕಳಪೆ ಜೀವನ, ಬಂಡವಾಳಶಾಹಿಗಳ ವೈಭವದ ಜೀವನ ಅವರಲ್ಲಿ ವರ್ಗ ವಿಭಜನೆಯ ಬಗೆಗೆ ತಿಳುವಳಿಕೆ ಮೂಡಿಸಿತು.

ರಾಜಕೀಯ ಅನುಭವ

ಈ ಬಗ್ಗೆ ಹಿಂದಿನ ಲೇಖನಗಳಲ್ಲಿ ವಿವರವಾಗಿ ಬರೆಯಲಾಗಿದೆ. ಚುನಾವಣಾ ಸುಧಾರಣೆಗಳಿಗಾಗಿ ಬಂಡವಾಳಶಾಹಿಯ ಬೆಂಬಲಕ್ಕೆ ನಿಂತು ಎರಡು ದಶಕಗಳ ಕಾಲ ಹಲವು ಹೋರಾಟ, ದಂಗೆಗಳಲ್ಲಿ ಭಾಗವಹಿಸಿ ಬಂಧನ, ಗಲ್ಲು, ನೋವು ಅನುಭವಿಸಿದ ನಂತರವೂ ತಮಗೆ ಒಂದಿಷ್ಟೂ ಪ್ರಯೋಜನವಾಗದಿದ್ದುದು ರಾಜಕೀಯ ಪಕ್ಷಗಳ ಬಂಡವಾಳಶಾಹಿ ವಂಚಕ ಮುಖವನ್ನು ಬಯಲುಗೊಳಿಸಿತು. ಚಾರ್ಟಿಸ್ಟ್ ಸಂಘಟನೆ ರೂಪುಗೊಂಡ ಮೇಲೆ ಯಾವ ಎಂಪಿ ಮತ್ತು ಮತದಾರರು ಕಾರ್ಮಿಕರ ಮತದಾನದ ಹಕ್ಕನ್ನು ಬೆಂಬಲಿಸುವುದಿಲ್ಲವೋ ಅವರ ವ್ಯವಹಾರ, ಅಂಗಡಿ ಮುಂಗಟ್ಟುಗಳನ್ನು ಪಿಕೆಟಿಂಗ್ ಮಾಡಿದರು. ಇದರಲ್ಲಿ ಕಾರ್ಮಿಕರ ಕುಟುಂಬದವರೂ ಪಾಲ್ಗೊಂಡರು. ಆಗ ಚುನಾವಣೆಗಳು ಗುಪ್ತ ಮತದಾನದ ಮೂಲಕ ನಡೆಯುತ್ತಿರಲಿಲ್ಲ. ಬಹಿರಂಗ ಸಭೆಗಳಲ್ಲಿ ಮತದಾರರು ಕೈ ಎತ್ತುವ ಮೂಲಕ ಆಯ್ಕೆ. ಈ ಆಯ್ಕೆ ಹೇಗೆ ಪುಟ್ಟಂಪೂರಾ ಭೂಮಾಲಕರ, ಬಂಡವಾಳಶಾಹಿ ಒಡೆಯರ ಪರವಾಗಿದೆ ಎಂದು ನಿರೂಪಿಸಲು, ಜನರಿಗೆ ಮನವರಿಕೆ ಮಾಡಲು ಹಲವೆಡೆ ಚುನಾವಣೆಗಳಲ್ಲಿ ಸ್ಪರ್ಧಿಸಿದರು. ಒಬ್ಬ ನಾಯಕ ಎಂಪಿಯಾಗಿ ಕೂಡಾ ಆಯ್ಕೆಯಾದರು. ಕೆಲವರು ಮುನಿಸಿಪಾಲಿಟಿಗಳಲ್ಲಿ ಸ್ಥಾನ ಪಡೆದರು. ಈ ಅನುಭವವೂ ಅವರ, ಸಾರ್ವತ್ರಿಕ ಹಾಗೂ ಗುಪ್ತ ಮತದಾನ ಮತ್ತು ಇತರ ಒತ್ತಾಯಗಳನ್ನು ರೂಪಿಸಲು ಸಹಾಯಕವಾಯಿತು. ಭೂಮಾಲಕ, ಬಂಡವಾಳಶಾಹಿ ವರ್ಗಗಳು ಸಂಸತ್ತನ್ನು ತಮ್ಮ ಮುಷ್ಟಿಯಲ್ಲಿ ಇರಿಸಿಕೊಂಡ ಬಗೆಯನ್ನು ಕಂಡುಕೊಂಡರು. ಅವರ ಪ್ರಭಾವದಿಂದ ಬಿಡಿಸಿಕೊಳ್ಳಲು ಸಹಾಯಕವಾಯಿತು.

ಕಾರ್ಮಿಕ ಸಂಘಗಳ, ಹೋರಾಟದ ಅನುಭವ

ಉದ್ಯೋಗಕ್ಕಾಗಿ ಒಂದು ಪ್ರದೇಶದ ಕಾರ್ಮಿಕರ ನಡುವೆ ಸ್ಪರ್ಧೆ, ವಿವಿಧ ಪ್ರದೇಶಗಳ ಕಾರ್ಮಿಕರ ನಡುವೆ ಸ್ಪರ್ಧೆ ತಮಗೆ ಉದ್ಯೋಗ, ವೇತನ ಮತ್ತು ಶ್ರಮದ ಅವಧಿ ಎಲ್ಲಕ್ಕೂ ಕಂಟಕ ಎಂಬುದನ್ನು ಅನುಭವದಿಂದ ಕಂಡುಕೊಂಡರು. ಆಧುನಿಕ ಯಂತ್ರಗಳು ಕೂಡಾ ಕಂಟಕ ಎಂದು ಕಂಡುಕೊಂಡರು. ಯಂತ್ರಗಳನ್ನು ನಾಶಮಾಡುವ ತಮ್ಮ ಪ್ರಯತ್ನಗಳು ವಿಫಲವಾದ ಮೇಲೆ ತಮ್ಮ ತಮ್ಮಲ್ಲೇ

ಪುಟ 11 ನೋಡಿ

ಸಂಪಾದಕೀಯ

ಭಾವೈಕ್ಯ ಪರಂಪರೆಯ ರಕ್ಷಣೆಯ ಅಗತ್ಯವಿದೆ

ಕೋಮು ದಂಗೆ ಹಚ್ಚುವವರಿಗೆ ಶಿಕ್ಷೆ ಮತ್ತು ಕೋಮುವಾದ ನಿಯಂತ್ರಣ ಕಾಯ್ದೆಯ ಅಗತ್ಯವಿದೆ

ಮದ್ದೂರಿನಲ್ಲಿ ಪೂರ್ವಯೋಜಿತವಾಗಿ ಗಣೇಶ ವಿಸರ್ಜನೆಯ ಮೆರವಣಿಗೆಯ ಸಂದರ್ಭದಲ್ಲಿ ಕಲ್ಲು ತೂರಿಬಂದ ನೆಪದಲ್ಲಿ ಕೋಮು ಪ್ರಚೋದನೆಯ ಅಪಾಯಕಾರಿ ದುಷ್ಕೃತ್ಯಗಳು ಘಟಿಸಿವೆ. ಇದು ಅಕಸ್ಮಿಕವೇ ಅಥವ ಪೂರ್ವಯೋಜಿತವೇ ಎಂಬುದು ತನಿಖೆಯಾಗಬೇಕಿದೆ. ಸೆಪ್ಟೆಂಬರ್ 7ರಂದು ಮದ್ದೂರಿನ ಚನ್ನೆಗೌಡ ಬಡಾವಣೆಯಲ್ಲಿ ಕೂರಿಸಲಾದ ಗಣೇಶ ವಿಸರ್ಜನೆಯ ಮೆರವಣಿಗೆಯು ಮಸೀದಿಯ ಮುಂದೆ ಸಾಗುವಾಗ ಕಲ್ಲೊಂದು ತೂರಿ ಬಂದಿದ್ದು, ಅದರ ನೆಪದಲ್ಲಿ ಮಸೀದಿಯ ಮೇಲೆ ಕಲ್ಲಿನ ಮಳೆಗರೆದಿರುವುದನ್ನು ಗಮನಿಸಿದರೆ, ಇದೊಂದು ಪೂರ್ವಯೋಜಿತ ಕೃತ್ಯವೆನಿಸುತ್ತದೆ. ಕಲ್ಲು ಬಂದಿದ್ದು ಮಸೀದಿಯಿಂದಲ್ಲ ಎಂದು ದಕ್ಷಿಣ ವಲಯದ ಐಜಿಪಿ ಬೋರಲಿಂಗಯ್ಯನವರು ಹೇಳಿದ್ದಾರೆ. ಆದರೆ ಕಲ್ಲು ಬಂದಿದ್ದೇ ತಡ ಮುಸ್ಲಿಂ ಮುಲ್ಲಾಗಳ ಬಂಧನಕ್ಕೆ ಆಗ್ರಹ, ಮುಸ್ಲಿಂ ವಿರೋಧಿ ಭಾಷಣ-ಘೋಷಣೆ-ನಿಂದನೆ, ಅಲ್ಪಸಂಖ್ಯಾತರ ಧಾರ್ಮಿಕ ಬಾವುಟ ಬಂಟಿಂಗ್ಸ್‌ಗಳನ್ನು ಕಿತ್ತುಹಾಕಿ ಆಕ್ರೋಶ ವ್ಯಕ್ತಪಡಿಸಲಾಯಿತು. ಕೂಡಲೇ ಮದ್ದೂರು ಬಂದ್‌ಗೆ ಕರೆ ಕೊಟ್ಟರು. ಬಿಜೆಪಿಯ ಮುಖಂಡರೆನಿಸಿಕೊಂಡ ಆರ್. ಅಶೋಕ, ಸಿ.ಟಿ. ರವಿ, ಅಶ್ವತ್ಥನಾರಾಯಣ ಮತ್ತು ಸಂಸದೆ ಸುಮಲತಾ, ವಿಜಯೇಂದ್ರ, ನಿಖಿಲ ಕುಮಾರಸ್ವಾಮಿ, ಪ್ರತಾಪಸಿಂಹ ಮುಂತಾದವರು ಇಡೀ ಸಮೂಹವನ್ನು ಕೋಮುಪ್ರಚೋದನೆಗೊಳಿಸುವಂತೆ ಭಾಷಣ ಮಾಡಿದರು. 'ಅಗತ್ಯ ಬಿದ್ದರೆ ತೊಡೆ ತಟ್ಟಲೂ ಸಿದ್ಧ ತಲೆ ತೆಗೆಯಲೂ ಸಿದ್ಧ' ಎಂಬ ಹಿಂಸಾಮತೀಯ ಮಾತು ಆಡಿದ್ದು ಬಿಜೆಪಿಯ ಸಿ.ಟಿ. ರವಿ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಮತ್ತು ಬಿಜೆಪಿಯೊಂದಿಗೆ ಸೇರಿಕೊಂಡಿರುವ ಜೆಡಿಎಸ್ ಎರಡೂ ಪಕ್ಷಗಳಿಗೂ ಈ ಪ್ರಕರಣವನ್ನು ಕೋಮುದಂಗೆ ಪ್ರಚೋದನೆಯ ದಿಕ್ಕಿನಲ್ಲಿ ಬೆಳೆಸುವ ಅಗತ್ಯವೇನಿತ್ತು? ಕಲ್ಲು ತೂರಿದ್ದು ತಪ್ಪು. ತೂರಿದ್ದವರನ್ನು ಪತ್ತೆ ಹಚ್ಚಿ ಶಿಕ್ಷಿಸಿ ಎಂದು ಹೋರಾಟ ನಡೆಸಿದಲ್ಲಿ ನ್ಯಾಯಯುತವಾದ ನಡೆಯಾಗುತ್ತಿತ್ತು. ಅಲ್ಪಸಂಖ್ಯಾತ ಸಮುದಾಯವನ್ನು ಮತ್ತು ಮಸೀದಿಯನ್ನು ಗುರಿಯಾಗಿಸಿ ಗಣೇಶ ವಿಸರ್ಜನೆಯ ಮೆರವಣಿಗೆಯು ಆಯೋಜಿಸಲಾಗಿತ್ತೇ ಎಂಬ ಅನುಮಾನ ಸಹಜವಾಗಿದೆ. ಏಕೆಂದರೆ ಈದ್ ಮಿಲಾಪ್ ಸಂದರ್ಭದಲ್ಲಿ ಮಸೀದಿಗೆ ದೀಪಾಲಂಕಾರ ಮಾಡದಂತೆ ತಡೆಯೊಡ್ಡಲಾಗಿದೆ ಮತ್ತು ಮೆರವಣಿಗೆಗೂ ಆಕ್ಷೇಪಿಸಲಾಗಿದೆ ಎಂದು ಕೇಳಿಬಂದಿದೆ. ಇದರ ಹಿಂದೆ ಗೌರಿಲಂಕೇಶ ಹತ್ಯೆಯ ಆರೋಪಿಯೊಬ್ಬನ ಕೈವಾಡವಿದೆಯೆ ಎಂಬುದನ್ನು ಸರಕಾರವು ತನಿಖೆಯ ಮೂಲಕ ಬಯಲುಗೊಳಿಸಬೇಕಿದೆ.

ಗಣೇಶ ವಿಸರ್ಜನೆಯ ಪ್ರಕರಣವು ಇಷ್ಟೊಂದು ಅಪಾಯಕಾರಿಯಾಗಿ ಬೆಳೆಸುವಲ್ಲಿ ಪೋಲಿಸ್ ಇಲಾಖೆಯ ಪಾತ್ರವಿರಲಿಲ್ಲವೆ? ಸುಪ್ರಿಂ ಕೋರ್ಟನ ನಿರ್ದೇಶನದಂತೆ ದ್ವೇಷ ಭಾಷಣ ಮಾಡುವಂತಿಲ್ಲ. ಮದ್ದೂರಿನಲ್ಲಿನ ದ್ವೇಷ ಭಾಷಣಗಳು ಹದ್ದು ಮೀರಿವೆ. ಈ ಪ್ರಕರಣದಲ್ಲಿ ಮಾತ್ರವಲ್ಲ, ಬಿಜೆಪಿಯವರು ಅತ್ಯಂತ ನಿರ್ಭಯದಿಂದ ದ್ವೇಷಭಾಷಣ ಮಾಡುವಲ್ಲಿ ನಿಸ್ಸೀಮರು. ಅವರಿಗೆ ಕಾನೂನು ಪರಿಪಾಲಿಸುವ ಜವಾಬ್ದಾರಿ ಇಲ್ಲವೆ? ತಲೆ ತೆಗೆಯುವಂತಹ ಮಾತುಗಳನ್ನು ಆಡಿದ ಸಿ.ಟಿ. ರವಿಯವರ ಮೇಲೆ ಒಂದು ಎಫ್‌ಐಆರ್ ದಾಖಲಾಗಿದೆ. ಸರಕಾರವು ಬಂಧಿಸುವ ಧೈರ್ಯವನ್ನು ತೋರುವುದಿಲ್ಲ. ಇಂತಹ ತೋರಿಕೆಯ ಕ್ರಮಗಳಿಂದ ಮಾತ್ರವೇ ದ್ವೇಷ ಭಾಷಣ ನಿಲ್ಲಿಸಿದ ಉದಾಹರಣೆಗಳು ಎಲ್ಲಿವೆ? ನಾಗರೀಕರ ಹಕ್ಕೊತ್ತಾಯಗಳ ಮೆರವಣಿಗೆಗೆ ನೂರು ಷರತ್ತು ವಿಧಿಸುವ ಪೋಲಿಸ್ ಇಲಾಖೆಯು ಕೋಮುಪ್ರಚೋದನಕಾರಿ ಮೆರವಣಿಗೆಯು ಮಸೀದಿಯ ಮುಂದೆ ತಾಸುಗಟ್ಟಲೆ ಕುಣಿದು ಕುಪ್ಪಳಿಸಲು ಯಾಕೆ ಅವಕಾಶ ಕಲ್ಪಿಸಿತು? ಕರಾವಳಿ ಪ್ರದೇಶದಲ್ಲಿ ಈ ಬಾರಿ ಡಿಜೆ ಬಳಸಲು ಜಿಲ್ಲಾಡಳಿತವು ಪರವಾನಿಗಿ ಕೊಟ್ಟಿಲ್ಲ. ಕೋರ್ಟು ಡಿಜೆ ಬಳಕೆ ನಿಷೇಧಿಸಿದೆ. ಆದರೆ ಈ ಮೆರವಣಿಗೆಯಲ್ಲಿ ಡಿಜೆ ಬಳಸಲು ಪೋಲಿಸ್ ಇಲಾಖೆಯು ಪರವಾನಿಗಿ ಕೊಟ್ಟಿದೆ ಏಕೆ? ಡಿಜೆ ಬಳಸುವುದನ್ನು ತಡೆಯಬಹುದಿತ್ತಲ್ಲವೆ? ಮೆರವಣಿಗೆಯು ಕ್ರಮಿಸಬೇಕಾದ ದಾರಿಯನ್ನು ಕೋಮುಪ್ರಚೋದನೆಗೆ ಅವಕಾಶವಿಲ್ಲದೆಂತೆ ರೂಪಿಸಬಹುದಿತ್ತು. ಅತ್ಯಂತ ಕೋಮುಸೌಹಾರ್ದತೆಯ ನೆಲವಾಗಿರುವ ಮಂಡ್ಯ ಜಿಲ್ಲೆಯಲ್ಲಿ ಈಚೆಗಿನ ವರ್ಷಗಳಿಂದ ಕೋಮುದಂಗೆಯ ಚಟುವಟಿಕೆಗಳು ನಡೆಯುತ್ತಿರುವುದನ್ನು ಪೋಲಿಸ್ ಇಲಾಖೆಯು ಗಂಭೀರವಾಗಿ ಯಾಕೆ ಪರಿಗಣಿಸಲಿಲ್ಲ? ನಾಗಮಂಗಲ, ಶ್ರೀರಂಗಪಟ್ಟಣ, ಕೆರೆಗೋಡುಗಳಲ್ಲಿ ಗಲಭೆ ಮತ್ತು ಉದ್ವಿಘ್ನ ವಾತಾವರಣ ಸೃಷ್ಟಿಸಿದ್ದು ಸರಕಾರಕ್ಕೂ ಪೋಲಿಸ್ ಇಲಾಖೆಗೂ ಅರಿವಿರಬೇಕಿತ್ತಲ್ಲವೆ? ಜಿಲ್ಲೆಯ ಶಾಂತಿ ಸೌಹಾರ್ದತೆ ಕಾಪಾಡುವ ಹೊಣೆ ಇಲಾಖೆಗಿರಬೇಕಿತ್ತಲ್ಲವೆ? ಚರಿತ್ರೆಯನ್ನು ತಿರುಚುವ ಪ್ರಕ್ರಿಯೆಯು ಹಸಿಹಸಿಯಾಗಿ ಪ್ರಕಟವಾಗಿದ್ದು ಮಂಡ್ಯ, ಮೈಸೂರು ಭಾಗದಲ್ಲಿ. ಟಿಪ್ಪು ಸುಲ್ತಾನ್ ಬಗ್ಗೆ ಸುಳ್ಳುಗಳನ್ನು ಬಿತ್ತರಿಸಿದ್ದು, ಉರಿಗೌಡ ನಂಜೆಗೌಡ ಎಂಬ ಸುಳ್ಳು ಪಾತ್ರಗಳನ್ನು ಸೃಷ್ಟಿಸಿದ್ದು ಎಲ್ಲವುಗಳ ಹಿಂದೆ ಆಳವಾದ ಯೋಜನಾಬದ್ಧ ಕೋಮು ಅಜೆಂಡಾ ಇರುವುದನ್ನು ಯಾರಿಗಾದರೂ ಗೊತ್ತಾಗುವಂತಹದ್ದು.

ದಸರಾ ಉತ್ಸವವನ್ನು ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರಿಂದ ನೆರವೇರಿಸುವ ಸರಕಾರದ ನಿರ್ಣಯವನ್ನು ಟೀಕಿಸಿ ಬಿಜೆಪಿಯು ಅಲ್ಪಸಂಖ್ಯಾತ ಸಮುದಾಯವನ್ನೇ ಪರಕೀಯ ಎಂಬಂತೆ ನಡೆದುಕೊಳ್ಳುತ್ತಿದೆ. ದಸರಾ ಎಂಬ ನಾಡಿನ ಹೆಮ್ಮೆಯ ಸಾಂಸ್ಕೃತಿಕ ಹಬ್ಬವನ್ನು ಒಂದು ಕೋಮಿನ ಗುತ್ತಿಗೆ ಎಂದು ಭಾವಿಸಿದೆ. ಬಿಜೆಪಿಯ ಈ ನಡೆಯು ಸಹ ಕೋಮುಭಾವನೆಯಿಂದ ಕೂಡಿದ್ದು ಸರಕಾರವು ಗಂಭಿರವಾಗಿ ಪರಿಗಣಿಸಿದ್ದಲ್ಲಿ ಮದ್ದೂರು ಪ್ರಕರಣವನ್ನು ಗಂಭೀರವಾಗಿ ನಿಗ್ರಹಿಸಲು ನಿರ್ವಹಿಸಲು ಸಾಧ್ಯವಿತ್ತು.

ಎಬಿವಿಪಿ ಕಾರ್ಯಕ್ರಮದಲ್ಲಿ ಗೃಹ ಮಂತ್ರಿ ಭಾಗಿ

ನಾಡಿನ ಭಾವೈಕ್ಯ ಪರಂಪರೆಯನ್ನು ಸಂರಕ್ಷಿಸುವ ಹೊಣೆಗಾರಿಕೆ ಇರುವ ಕಾಂಗ್ರೆಸ್ ಸರಕಾರವು ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿಲ್ಲ. ಸ್ವತ: ಗೃಹ ಮಂತ್ರಿಗಳಾದ ಪರಮೇಶ್ವರ್ ಅವರು ಎಬಿವಿಪಿಯ ಕಾರ್ಯಕ್ರಮದಲ್ಲಿ ಭಾಗವಹಿಸಿರುವರು. ದಾರಿಯಲ್ಲಿ ಹೋಗುವಾಗ ಮೆರವಣಿಗೆ ಕಂಡು ರಾಣಿ ಅಬ್ಬಕ್ಕ ದೇವಿಗೆ ಪುಷ್ಪಸಮರ್ಪಣೆ ಮಾಡಿದ್ದೇನಷ್ಟೆ ಎಂದು ಹೇಳಿ ನುಣುಚಿಕೊಂಡಿದ್ದಾರೆ. ಕಾಂಗ್ರೆಸ್‌ನ ಮುಖ್ಯ ಸ್ಥಾನದಲ್ಲಿರುವವರ ಇಂತಹ ದ್ವಂದ್ವ ನಡೆಯು ಸಂದೇಹಾಸ್ಪದವೇ. ಈಗಾಗಲೇ ಉಪಮುಖ್ಯಮಂತ್ರಿ ಡಿಕೆಶಿಯವರು ಅಧಿವೇಶನ ದಲ್ಲಿಯೇ ಆರ್‌ಎಸ್‌ಎಸ್ ಗೀತೆ ಹಾಡಿದ್ದು ಕರ್ನಾಟಕದ ಜನತೆಯು ಮರೆತಿಲ್ಲ. ಕಾಂಗ್ರೆಸ್‌ನ ಈ ದ್ವಂದ್ವ ನಿಲುವು ಬಲಪಂಥೀಯ ಶಕ್ತಿಗೆ ಬಲ ತುಂಬುವಂತಹದ್ದಾಗಿದೆ. ಇದೇ ಸಂದರ್ಭದಲ್ಲಿ ಅಲ್ಪಸಂಖ್ಯಾತ ಸಮುದಾಯವನ್ನು ಆತಂಕಕ್ಕೆ ತಲ್ಲಣಕ್ಕೆ ತಳ್ಳುವಂತಹದ್ದಾಗಿದೆ. ಸರಕಾರವೇ ಇಂತಹ ಸಮಯಸಾಧಕ ರಾಜಕಾರಣಕ್ಕೆ ಒಡ್ಡಿಕೊಂಡರೆ ನಾಡಿನ ಜನತೆಯ ರಕ್ಷಣೆ, ಸಂವಿಧಾನ ಮೌಲ್ಯಗಳ ಜಾರಿ ಯಾರ ಹೊಣೆ?

ಮದ್ದೂರು ಪ್ರಕರಣವನ್ನು ಗಣೇಶ ವಿಸರ್ಜನೆಯ ಮೆರವಣಿಗೆಯ ಪ್ರಕರಣವೆಂದು ಮಾತ್ರ ನೋಡಲಾಗುವುದಿಲ್ಲ. ಏಕೆಂದರೆ ಮಂಡ್ಯ ಮೈಸೂರು ಪ್ರದೇಶಗಳಲ್ಲಿ ಮಲೆ ಮಹಾದೇಶ್ವರ, ಮಂಟೆಸ್ವಾಮಿ, ಸಿದ್ದಪ್ಪಾಜಿ ಮುಂತಾದ ಬಹುಸಾಂಸ್ಕೃತಿ ಭಾವೈಕ್ಯ ಪರಂಪರೆಯು ಗಟ್ಟಿ ನೆಲೆ ಹೊಂದಿದೆ. ಈಗ ಇಲ್ಲಿ ಯೋಜನಾಬದ್ಧವಾದ ಕೋಮು ಚಟುವಟಿಕೆಗಳು ಘಟಿಸುತ್ತಿವೆ. 2025ಕ್ಕೆ ಆರ್‌ಎಸ್‌ಎಸ್ ಸ್ಥಾಪನೆಗೊಂಡು ನೂರು ವರ್ಷ. ನೂರು ವರ್ಷದಲ್ಲಿ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡುವ ಗುರಿ ಅದಕ್ಕಿದೆ ಎಂಬುದನ್ನು ಆರ್‌ಎಸ್‌ಎಸ್ ಸರಸಂಘಸಂಚಾಲಕ ಮೋಹನ ಭಾಗವತ್ ಅವರು ಹೇಳುತ್ತಲೇ ಬಂದಿದ್ದಾರೆ. ಉತ್ತರ ಭಾರತದಲ್ಲಿ ಸೈದ್ಧಾಂತಿಕವಾಗಿ ಒಂದಿಷ್ಟು ನೆಲೆ ಕಂಡಿರುವ ಅದು, ಕಳೆದ ಕೆಲವು ವರ್ಷಗಳಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ತನ್ನ ಸೈದ್ಧಾಂತಿಕ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಲು ಯೋಜನೆ ಮಾಡಿದೆ. ಇದರ ಭಾಗವಾಗಿಯೇ ಮೂರು ವರ್ಷಗಳ ಹಿಂದೆ ಕಲ್ಯಾಣ ಕರ್ನಾಟಕದ ಕಲಬುರಗಿಯಲ್ಲಿ ದಕ್ಷಿಣ ರಾಜ್ಯಗಳ ಕಾರ್ಯಕರ್ತರ ಬೈಠಕ್ ಅನ್ನು ನಡೆಸಲಾಗಿತ್ತು. ಮತ್ತು ಹಿಂದೂ ರಾಷ್ಟ್ರ ಘೋಷಣೆ ಮಾಡುವ ನಿರ್ಧಾರವನ್ನೂ ಪ್ರಕಟಿಸಲಾಗಿತ್ತು. ಆರ್‌ಎಸ್‌ಎಸ್‌ನ ರಾಜಕೀಯ ವಿಭಾಗವಾಗಿರುವ ಬಿಜೆಪಿ ಈ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಎಲ್ಲೆಲ್ಲಿ ಭಾವೈಕ್ಯ ಪರಂಪರೆ ಇದೆಯೋ ಅಲ್ಲೆಲ್ಲ ಕೋಮುಪ್ರಚೋದನೆಯ ಚಟುವಟಿಕೆಗಳನ್ನು ನಡೆಸಲು ನೀಲನಕ್ಷೆ ಸಿದ್ದಪಡಿಸಲಾಗಿದೆ ಎಂದು ರಾಜಕೀಯ ವಿಶ್ಲೇಷಕರು ಅಂದಾಜಿಸುತ್ತಿರುವುದು ನಿಜವೆಂಬುದು ಮದ್ದೂರು ಪ್ರಕರಣದಿಂದ ದೃಢವಾಗುತ್ತದೆ. ಕಾರ್ಯಕರ್ತರನ್ನು ತರಬೇತಿಗೊಳಿಸಿ ಅಖಾಡಕ್ಕೆ ಇಳಿಸಲಾಗುತ್ತಿದೆ ಎಂಬುದಕ್ಕೆ ಮೆರವಣಿಗೆಯ ಸಂದರ್ಭದಲ್ಲಿ ಯುವತಿಯೋರ್ವಳ ಹೈಡ್ರಾಮಾ ಗಮನಿಸಬಹುದು. ಕೋಮುವಾದ ಮತ್ತು ಕಾರ್ಪೋರೆಟ್ ಸಖ್ಯತೆಯು ಭಾರತಕ್ಕೆ ಗಂಭಿರವಾದ ಅಪಾಯವನ್ನು ಒಡ್ಡುತ್ತಿದೆ ಎಂಬುದು ಆರ್ಥಿಕ ವಿಶ್ಲೇಷಕರ ಅಭಿಪ್ರಾಯದಲ್ಲಿ ಸತ್ಯಾಂಶವಿದೆ. ಮಂಡ್ಯ ಪ್ರದೇಶದ ಭೂಗರ್ಭದಲ್ಲಿ ಲೀಥಿಯಂ ನಿಕ್ಷೇಪ ಇರುವುದನ್ನು ಪತ್ತೆಯಾಗಿದ್ದು ಈ ಸಂಪತ್ತಿನ ಮೇಲೆ ಅದಾನಿಯ ಕಣ್ಣಿದೆಯಾದ್ದರಿಂದ ಜನಬದುಕನ್ನು ಅಲ್ಲೋಲ ಕಲ್ಲೋಲಗೊಳಿಸಿ, ಕೋಮುದಂಗೆಯಲ್ಲಿ ಮುಳುಗಿಸಲಾಗುತ್ತಿದೆ ಎಂಬ ಅನುಮಾನಗಳೂ ಏಳುತ್ತಿವೆ. ಕಾಶ್ಮೀರ, ಮಣಿಪುರ ಮುಂತಾದ ಪ್ರದೇಶಗಳು ಫಲಿತಾಂಶಗಳು ಇದಕ್ಕೆ ಉಪಷ್ಟಂಭಕವಾಗಿ ಉದಾಹರಿಸಲಾಗುತ್ತಿದೆ. ಇದನ್ನೂ ಸರಕಾರವು ಗಂಭೀರವಾಗಿ ಪರಿಗಣಿಸಬೇಕಿದೆ. ಕೋಮುವಾದ ತಡೆ ಕಾಯ್ದೆಯ ಅಗತ್ಯತೆಯ ಬಗ್ಗೆ ಸರಕಾರವು ಚಿಂತಿಸಬೇಕಿದೆ.

ಮದ್ದೂರು ಪ್ರಕರಣದಲ್ಲಿ ಒಂದೆಡೆ ಜನತೆಯ ನೆಮ್ಮದಿಯ ಬದುಕಿಗೆ ಧಕ್ಕೆಯಾದರೆ ಇನ್ನೊಂದೆಡೆ ಆರ್ಥಿಕವಾಗಿ ತೀವ್ರತರವಾದ ಬಿಕ್ಕಟ್ಟು ಎದುರಾಗುತ್ತದೆ. ಇದರಿಂದ ದುಡಿದುಣ್ಣುವ ಜನತೆಯ ಸಂಕಟಗಳು ಹೆಚ್ಚಲಿವೆ. ಇದೇ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯದಲ್ಲಿ ದುರ್ಬಲವಾಗಿದ್ದ ಬಿಜೆಪಿಯು ಜಾತ್ಯಾತೀತ ಎಂದು ಹೇಳಿಕೊಳ್ಳುವ ಜೆಡಿಎಸ್ ಅನ್ನು ಬಳಸಿಕೊಂಡು ಕೋಮುವಾದಿ ಅಜೆಂಡಾ ಜಾರಿಗೊಳಿಸಿ ಬಲಿಷ್ಠಗೊಳ್ಳಲು ಹೊರಟಿದೆ. ತಕ್ಷಣದ ಅಧಿಕಾರ ಲಾಲಸೆಗೆ ಬಲಿಯಾಗಿ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಸ್ವಯಂ ಸರ್ವನಾಶಕ್ಕೆ ಮುನ್ನುಡಿ ಬರೆದುಕೊಳ್ಳುತ್ತಿದೆ. ತನ್ಮೂಲಕ ಜನರ ಬದುಕನ್ನೂ ಬಲಿಗೊಡಲು ಹೊರಟಿದೆ. ಜೆಡಿಎಸ್ ನಾಶವನ್ನು ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಬಯಸುವುದು ಸಹಜವಾಗಿದೆ. ಜಾತ್ಯಾತೀತ ಪಕ್ಷವೆಂದು ಹೇಳಿಕೊಂಡ ಜೆಡಿಎಸ್ ತನ್ನ ಅಸ್ತಿತ್ವವನ್ನೇ ಬಲಿಗೊಟ್ಟು ಏನು ಸಾಧಿಸಲಿದೆ? ಒಟ್ಟಿನಲ್ಲಿ ಕೋಮುಬೆಂಕಿಯು ಕರಾವಳಿಯಿಂದ ಸಕ್ಕರೆಯ ನಾಡು ಮಂಡ್ಯಕ್ಕೆ ಚಾಚಿಕೊಂಡಿದೆ ಮತ್ತು ಇಡೀ ಕರ್ನಾಟಕವನ್ನೇ ಆಪೋಷನಗೈಯುವ ಮೊದಲು ಸರಕಾರವೂ ಜನತೆಯೂ ಎಚ್ಚೆತ್ತುಕೊಳ್ಳಬೇಕಿದೆ.

ವರದಕ್ಷಿಣೆ ಒಂದು ನಾಚಿಕೆಗೇಡು ಮತ್ತು ಅದೊಂದು ಅಪರಾಧ!

ವರದಕ್ಷಿಣೆಯ ಆಧಾರವೇನು ಎಂಬುದನ್ನು ನಾವು ನೋಡಬೇಕು. ಸಾಮಾನ್ಯವಾಗಿ, ಸಮಸ್ಯೆಗಳ ಕಾರಣಗಳನ್ನು ಮೇಲ್ನೋಟಕ್ಕೆ ಗುರುತಿಸಲು ಸಾಧ್ಯವಿಲ್ಲ. ಇದರಲ್ಲಿ ಆಳವಾದ ಸಾಮಾಜಿಕ–ಆರ್ಥಿಕ ಹಿನ್ನೆಲೆ ಇರುತ್ತದೆ. ಅಂತಹ ಅಂಶಗಳನ್ನು ಹುಡುಕುವ ಮೂಲಕ ಮಾತ್ರ, ಅದನ್ನು ಬೇರು ಸಹಿತ ಕಿತ್ತೆಸೆಯಬಹುದು. ವರದಕ್ಷಿಣೆ ಅಂತಹ ಪದ್ದತಿಗಳಲ್ಲಿ ಒಂದಾಗಿದೆ. ವರದಕ್ಷಿಣೆಯು ಹಿಂಸೆಗೆ ಮೂಲ ಕಾರಣ ಎಂದು ಹೇಳುವ ಬದಲು, ವರದಕ್ಷಿಣೆಯು ಹೆಣ್ಣಿನ ದಾಸ್ಯ ಪದ್ಧತಿಯ ಮುಖ್ಯ ದ್ಯೋತಕ ಎಂಬುದನ್ನು ನಾವು ನೋಡಬೇಕು. ಹೆಣ್ಣಿನ ದಾಸ್ಯ ಪದ್ಧತಿಯ ಉಗಮಕ್ಕೆ ಕಾರಣವಾದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ನೋಡಬೇಕು.

ಯು. ವಾಸುಕಿ



ಇತ್ತೀಚಿನ ದಿನಗಳಲ್ಲಿ ವರದಕ್ಷಿಣೆ ಸಾವುಗಳು ಮತ್ತೆ ಸುದ್ದಿಯಾಗುತ್ತಿವೆ. ಆಘಾತಕಾರಿಯಾಗಿ ವಿವರಗಳು ಹೊರಹೊಮ್ಮುತ್ತಿವೆ. ವರದಕ್ಷಿಣೆಯೊಂದಿಗೆ ಇತರ ಕೆಲವು ಅಂಶಗಳೂ ಹೊರಹೊಮ್ಮುವುದನ್ನು ಕಾಣಬಹುದು. ಉದಾಹರಣೆಗೆ, ಪತಿಯಿಂದ ಲೈಂಗಿಕ ದೌರ್ಜನ್ಯ, ಪತ್ನಿ ಇನ್‌ಸ್ಟಾಗ್ರಾಮ್ ನಲ್ಲಿ ಪೋಸ್ಟ್ ಮಾಡಿದ್ದು, ಸಣ್ಣಪುಟ್ಟ ಉದ್ಯಮ ಆರಂಭಿಸಿ ಸ್ವಂತ ಕಾಲಿನ ಮೇಲೆ ನಿಲ್ಲಬಾರದು ಎಂಬ ಧೋರಣೆ. 'ಉದ್ಯೋಗಂ ಪುರುಷ ಲಕ್ಷಣಂ' ಎಂದು ಹೇಳುವಂತೆ ವ್ಯಾಪಾರವೂ ಪುರುಷ ಲಕ್ಷಣವೇ? ಸೋಷಿಯಲ್ ಮೀಡಿಯಾವೇ ಸರಿಯಲ್ಲ ಎಂದು ಅವರು ಹೇಳುತ್ತಿಲ್ಲ. ತನ್ನ ಹೆಂಡತಿ ಮಾತ್ರ ಅದನ್ನು ಬಳಸಬಾರದು ಎಂದು ಅವರು ಆದೇಶಿಸುತ್ತಾರೆ. ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಮಹಿಳೆಯರು ಮೊಬೈಲ್ ಫೋನ್ ಬಳಸಬಾರದು ಎಂದು ಜಾತಿ ಪಂಚಾಯತಿಗಳು ಫತ್ವಾ ಹೊರಡಿಸುವುದಕ್ಕಿಂತ ಇದು ಭಿನ್ನವೇನಲ್ಲ. ಸೋಷಿಯಲ್ ಮೀಡಿಯಾದಲ್ಲಿ ಸ್ನೇಹ ಬರುತ್ತದೆಯೆಂದರೆ, ಅದರಲ್ಲಿ ಪುರುಷನೂ ಭಾಗಿಯಾಗಿರುತ್ತಾನೆ, ಅದನ್ನು ಕುರಿತು ಚರ್ಚೆಯಾಗುತ್ತಿಲ್ಲವೇಕೆ?

ವರದಕ್ಷಿಣೆಯ ಆಧಾರವೇನು?

ವರದಕ್ಷಿಣೆಯ ಆಧಾರವೇನು ಎಂಬುದನ್ನು ನಾವು ನೋಡಬೇಕು. ಸಾಮಾನ್ಯವಾಗಿ, ಸಮಸ್ಯೆಗಳ ಕಾರಣಗಳನ್ನು ಮೇಲ್ನೋಟಕ್ಕೆ ಗುರುತಿಸಲು ಸಾಧ್ಯವಿಲ್ಲ. ಇದರಲ್ಲಿ ಆಳವಾದ ಸಾಮಾಜಿಕ–ಆರ್ಥಿಕ ಹಿನ್ನೆಲೆ ಇರುತ್ತದೆ. ಅಂತಹ ಅಂಶಗಳನ್ನು ಹುಡುಕುವ ಮೂಲಕ ಮಾತವೇ ಅದನ್ನು ಬೇರು ಸಹಿತ ಕಿತ್ತೆಸೆಯಬಹುದು. ಅಂತಹ ಪದ್ದತಿಗಳಲ್ಲಿ ವರದಕ್ಷಿಣೆಯೂ ಒಂದು. ವರದಕ್ಷಿಣೆ ಹಿಂಸೆಗೆ ಮೂಲ ಕಾರಣ ಎಂದು ಹೇಳುವ ಬದಲು, ವರದಕ್ಷಿಣೆಯು ಹೆಣ್ಣಿನ ಗುಲಾಮಗಿರಿಯ ಮುಖ್ಯ ದ್ಯೋತಕ ಎಂಬುದನ್ನು ನಾವು ನೋಡಬೇಕು.

ಮಾರ್ಕ್ಸ್‌ವಾದಿ ದೃಷ್ಟಿಕೋನ

ಇಂತಹ ಸಮಸ್ಯೆಗಳು ಕೆಲವು ಕುಟುಂಬಗಳಲ್ಲಿ ಮಾತ್ರ ಎಂದೋ, ಇದು ಗಂಡ–ಹೆಂಡತಿ ಅಥವಾ ಅತ್ತೆ–ಸೊಸೆ ಸಮಸ್ಯೆ ಎಂದೋ ಸಂಕುಚಿತವಾಗಿ ನೋಡುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಎಂಗೆಲ್ಸ್ ಅವರ "ಕುಟುಂಬ, ಖಾಸಗಿ ಆಸ್ತಿ ಮತ್ತು ರಾಜ್ಯದ ಮೂಲ" (The Origin of the Family, Private Property and the State) ಎಂಬ ಪುಸ್ತಕವು ಮಹಿಳಾ ಗುಲಾಮಗಿರಿಯ ಉಗಮಕ್ಕೆ ಕಾರಣವಾದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ವಿವರಿಸುತ್ತದೆ. ವರ್ಗ ಸಾಮಾಜಿಕ ರಚನೆ ಮತ್ತು ಮಹಿಳೆಯ ಗುಲಾಮಗಿರಿಯು ಏಕಕಾಲದಲ್ಲಿ ಕಾಣಿಸಿಕೊಂಡವು, ಆಸ್ತಿಯ ಖಾಸಗಿ ಮಾಲೀಕತ್ವವು ಇದಕ್ಕೆ ವೇದಿಕೆಯನ್ನು ಒದಗಿಸಿತು, ಕಾಲಾನಂತರದಲ್ಲಿ, ಪೌರಾಣಿಕ ದಂತಕಥೆಗಳು, ಸಾಂಸ್ಕೃತಿಕ ಸಿದ್ಧಾಂತಗಳ ಮೂಲಕ ಮಹಿಳೆಯರ ಗುಲಾಮಗಿರಿಯನ್ನು ಸಮರ್ಥಿಸಿಕೊಂಡು, ಸಾಂಸ್ಥಿಕಗೊಂಡಿದೆ ಎಂಬುದೆಲ್ಲವನ್ನೂ ಅದು ಸೂಚಿಸುತ್ತದೆ. ಮಹಿಳಾ ವಿಮೋಚನೆಯು ಖಾಸಗಿ ಆಸ್ತಿಯ ನಿರ್ಮೂಲನೆಗೆ ಸಂಬಂಧಿಸಿದೆ ಎಂದು ಪ್ರಸ್ತಾಪಿಸಲಾಗಿದೆ.

ಎಲ್ಲವೂ ತಕ್ಷಣವೇ ಬದಲಾಗುವುದಿಲ್ಲ

ಅದೇ ಸಮಯದಲ್ಲಿ, ಖಾಸಗಿ ಆಸ್ತಿಯನ್ನು ರದ್ದುಗೊಳಿಸಿದ ಸಮಾಜದಲ್ಲಿ ಎಲ್ಲವೂ ತಕ್ಷಣವೇ ಬದಲಾಗುವುದಿಲ್ಲ; ರಾಜಕೀಯ, ಸಾಮಾಜಿಕ–ಸಾಂಸ್ಕೃತಿಕ ಮಧ್ಯಸ್ಥಿಕೆಗಳ ಬಲವಾದ ನಿರಂತರತೆಯ ಅಗತ್ಯವಿರುತ್ತದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕ್ರಮವು, 'ಬಂಡವಾಳಶಾಹಿ, ಭಾರತೀಯ ಸಂದರ್ಭದಲ್ಲಿ ಊಳಿಗಮಾನ್ಯ ಪದ್ಧತಿಯನ್ನು ನಿರ್ಮೂಲನೆ ಮಾಡುವ ಬದಲು ರಾಜಿ ಮಾಡಿಕೊಳ್ಳಲಾಗಿದೆ' ಎಂದು ಹೇಳುತ್ತದೆ. ಅಂದರೆ, ಅದಕ್ಕಿಂತ ಹಿಂದಿನ ಸಾಮಾಜಿಕ ಅವಶೇಷಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಿಲ್ಲ. ಹಿಂದಿನ ಉತ್ಪಾದನಾ ಸಂಬಂಧಗಳಲ್ಲಿ, ಸಾಮಾಜಿಕ ರಚನೆಯ ಕೆಲವು ಅಂಶಗಳು – ಜಾತಿ, ಪಿತೃಪ್ರಾಧಾನ್ಯತೆ ಇತ್ಯಾದಿಗಳು ಮುಂದುವರೆದವು. ಅವರು ಸೃಷ್ಟಿಸಿದ ಅಗ್ಗದ ಶ್ರಮವನ್ನು ಬಂಡವಾಳಶಾಹಿ ಶೋಷಿಸಿತು. ಸಾಮಾನ್ಯ ವೇತನ ರಚನೆಯನ್ನು ಕನಿಷ್ಠ ಮಟ್ಟದಲ್ಲಿ ಇರಿಸಿಕೊಳ್ಳಲು ಅದು ಅವರನ್ನು ಬಳಸಿಕೊಳ್ಳುತ್ತದೆ; ಮಹಿಳೆಯರ ಉಚಿತ ಮನೆಕೆಲಸವು ಬಂಡವಾಳಶಾಹಿಗೆ ಹೆಚ್ಚಿನ ಪ್ರಯೋಜನವನ್ನು ನೀಡುತ್ತದೆ. ಇದೇ ಕೆಲಸಗಳನ್ನು ವಾಣಿಜ್ಯಿಕವಾಗಿ ಮಾಡಿದಾಗ, ಅವು ಹಣಕಾಸಿನ ಮೌಲ್ಯವನ್ನು ಪಡೆಯುತ್ತವೆ. ಮಹಿಳೆಯ ಸಾಮಾಜಿಕ ಮೌಲ್ಯ ಕಡಿಮೆ ಇರುವುದರಿಂದ, ಮನೆಯಲ್ಲಿ ಅವಳು ಮಾಡುವ ಕೆಲಸವೂ ಅಪಮೌಲ್ಯವಾಗುತ್ತದೆ. ಹೀಗೆ ಕಾಲಕ್ರಮೇಣ ಹೆಣ್ಣಿನ ದಾಸ್ಯ ಪದ್ಧತಿಯ ರೂಪಗಳೂ ಬದಲಾಗಿರಬಹುದು; ಆದರೆ ಅದರ ವಿಷಯವು ಹಾಗೆಯೇ ಮುಂದುವರಿದಿವೆ. ನ್ಯಾಯವನ್ನು ಸಂಸ್ಕೃತಿಯ ಹೆಸರಿನಲ್ಲಿ ಕಲಿಸಲಾಗುತ್ತದೆ. ಅದಕ್ಕಾಗಿಯೇ ಕಾನೂನುಗಳನ್ನು ರಚಿಸಿದರೂ, ಸಮಾಜವು ಅದನ್ನು ಅಪರಾಧವೆಂದು ಒಪ್ಪಿಕೊಳ್ಳಲು ನಿರಾಕರಿಸುತ್ತದೆ.

ವರದಕ್ಷಿಣೆಯ ಮೂಲ

ಆಸ್ತಿ ಹೊಂದಿರುವ ಕುಟುಂಬಗಳಲ್ಲಿ, ಮೇಲ್ಜಾತಿಯ ಕುಟುಂಬಗಳಲ್ಲಿ ಕುಟುಂಬದ ಆಸ್ತಿಯ ಒಂದು ಭಾಗವನ್ನು, ಮಗಳ ಮದುವೆಯ ಸಮಯದಲ್ಲಿ ಸ್ವಾಭಾವಿಕವಾಗಿ ಮಗಳಿಗೆ ನೀಡುವ ಪದ್ಧತಿ ಇತ್ತು. ಆ ಆಸ್ತಿಯು ಗಂಡನ ಮನೆಯಲ್ಲಿ ತಮ್ಮ ಮಗಳಿಗೆ ರಕ್ಷಣೆ ನೀಡುತ್ತದೆ ಎಂದು ನಂಬಲಾಗಿತ್ತು. ಆದರೆ ಪ್ರಾಯೋಗಿಕವಾಗಿ ಮಹಿಳೆಯರಿಗೆ ಆಸ್ತಿಯ ಮೇಲಿನ ನಿಯಂತ್ರಣ ಕಳೆದುಹೋಯಿತು. ಹೆಣ್ಣು ತರುವುದೆಲ್ಲವೂ ತಮ್ಮದೇ ಎಂಬ ಟ್ರೆಂಡ್‌ನಿಂದಾಗಿ ಕ್ರಮೇಣ ಆ ಆಸ್ತಿ ಅಳಿಯನ ಮನೆಯವರ ಹಿಡಿತಕ್ಕೆ ಬಂತು. ಮೇಲ್ಜಾತಿಯ ಈ ಪದ್ಧತಿಯು ನಂತರ ಎಲ್ಲಾ ಜಾತಿ ಸಮುದಾಯಗಳಿಗೆ ಹರಡಿತು. ಇದಕ್ಕೆ ಸಂಸ್ಕೃತೀಕರಣವನ್ನು ಒಂದು ಕಾರಣವೆಂದು ಪ್ರಸ್ತುತಪಡಿಸಲಾಗಿದೆ. ನವ ಉದಾರವಾದದ ಪರಿಣಾಮವಾಗಿ ಉದ್ಭವಿಸಿರುವ ಗ್ರಾಹಕ ಸಂಸ್ಕೃತಿಯ ಸಂದರ್ಭದಲ್ಲಿ, ವರದಕ್ಷಿಣೆ ಸಾಮಾಜಿಕ ಸ್ಥಾನಮಾನವನ್ನು ಪಡೆದುಕೊಳ್ಳುತ್ತದೆ. ಇದು ವಸ್ತುಗಳ ಪಟ್ಟಿಯಲ್ಲಿ ಪ್ರತಿಫಲಿಸುತ್ತದೆ. ಚಿನ್ನ, ಬೆಳ್ಳಿ, ವಜ್ರಗಳು ಮತ್ತು ಪ್ಲಾಟಿನಂ ಶ್ರೇಣಿಗೆ ಏರಿದೆ.ಐಷಾರಾಮಿ ಕಾರುಗಳು, ಅದ್ದೂರಿ ವಿವಾಹದ ಸಿದ್ಧತೆಗಳಿಂದ ಪ್ರಾರಂಭವಾಗಿ, ಮದುವೆಯ ನಂತರವೂ ಅದು ಮುಂದುವರಿಯುತ್ತದೆ. ವರನ ವ್ಯವಹಾರದಿಂದ ಹಿಡಿದು ನಾದಿನಿಯ ಮದುವೆಯ ಖರ್ಚು, ಮೈದುನನ ವಿದ್ಯಾಭ್ಯಾಸದ ಖರ್ಚಿನಿಂದ ಹಿಡಿದು ಎಲ್ಲದಕ್ಕೂ ಹೆಣ್ಣಿನ ಮನೆಯವರಿಗೆ ಕಿರುಕುಳ ನೀಡುವುದು, ಹೆಂಡತಿಗೆ ಹೊಡೆದು ಅವಳ ತವರು ಮನೆಗೆ ಓಡಿಸುವುದು, ಹೆರಿಗೆಯ ವೆಚ್ಚ, ಮಗುವಿಗೆ ಆಭರಣ ಹಾಕುವುದು, ನಾಮಕರಣ ಸಮಾರಂಭದಿಂದ ಹಿಡಿದು ಮೊದಲ ಹುಟ್ಟುಹಬ್ಬದವರೆಗೆ ಎಲ್ಲದರಲ್ಲೂ ಹೆಣ್ಣಿನ ಕುಟುಂಬ ತೊಂದರೆ ಅನುಭವಿಸುತ್ತದೆ. ಕೇಳಿದರೆ, ನೀವು ಅದನ್ನು ನಿಮ್ಮ ಸ್ವಂತ ಮಗಳಿಗಾಗಿ ಮಾಡುತ್ತೀರಿ ಎನ್ನುತ್ತಾರೆ!

ಮಹಿಳಾ ಸಂಘದ ಅಧ್ಯಯನ



2003ರಲ್ಲಿ ದೇಶಾದ್ಯಂತ 10,000 ಪೋಷಕರು ಮತ್ತು ಅವಿವಾಹಿತ ಮಹಿಳೆಯರಲ್ಲಿ ನಡೆಸಿದ ಅಧ್ಯಯನವನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘದ ಪರವಾಗಿ ಸಂಗ್ರಹಿಸಿ ಪ್ರಕಟಿಸಲಾಗಿದೆ. ಇದರಲ್ಲಿ ವರದಕ್ಷಿಣೆಯ ಹಲವು ಆಯಾಮಗಳು ಬಹಿರಂಗಗೊಂಡಿವೆ. ಕಾರ್ಯಕ್ರಮದಲ್ಲಿ ಮಾತನಾಡಿದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷೆ ನ್ಯಾಯಮೂರ್ತಿ ಸುಜಾತಾ ಮನೋಹರ್ ಅವರು, "ವರದಕ್ಷಿಣೆ ಎಂಬುದು ಮಾನವ ಹಕ್ಕುಗಳ ಅತ್ಯಂತ ಕೆಟ್ಟ ಉಲ್ಲಂಘನೆಯಾಗಿದೆ, ಮಹಿಳೆಯರನ್ನು ಸಮಾನವಾಗಿ ನಡೆಸಿಕೊಳ್ಳದ ಪರಿಸ್ಥಿತಿಯನ್ನು ಇದು ಸಮರ್ಥಿಸುತ್ತದೆ ಮತ್ತು ಸಾಂಸ್ಥಿಕೀಕರಣಗೊಳ್ಳುತ್ತಿದೆ" ಎಂದೂ ಅವರು ಗಮನಸೆಳೆದರು.

ಮಹಿಳೆಯ ಸೌಂದರ್ಯದ ಬಗ್ಗೆ ಪುರುಷನ ದೃಷ್ಟಿಕೋನ, ಆ ಮಾನದಂಡದ ಪ್ರಕಾರ, ಎತ್ತರ, ಮೈಬಣ್ಣ, ದೇಹದ ಲಕ್ಷಣಗಳು ಇತ್ಯಾದಿಗಳಿಗೆ ಅನುಗುಣವಾಗಿ ವರದಕ್ಷಿಣೆ ಹೆಚ್ಚಾಗುತ್ತದೆ ಅಥವಾ ಕಡಿಮೆಯಾಗುತ್ತದೆ. ದೊಡ್ಡ ಮೊತ್ತದ ವರದಕ್ಷಿಣೆ ಪಡೆದು ಮದುವೆಯಾದ ನಂತರ ಅಪಹಾಸ್ಯ ಮತ್ತು ದೌರ್ಜನ್ಯಕ್ಕೆ ಒಳಗಾಗುವ ಕ್ರೌರ್ಯವೂ ಇದೆ. ಮದುವೆಯೇ ಮಹಿಳೆಯ ಜೀವನದ ಗುರಿ ಎಂಬ ಅಂಶವು ವರದಕ್ಷಿಣೆ ಬೆಳೆಯಲು ದಾರಿ ಮಾಡಿಕೊಡುತ್ತದೆ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಶಾಶ್ವತ ಎಟಿಎಂ


ಬ್ಯಾಂಕ್ ಖಾತೆಯಲ್ಲಿ ಹಣವಿದ್ದರೆ ಮಾತ್ರ ನೀವು ಅದನ್ನು ಹಿಂಪಡೆಯಬಹುದು. ಆದರೆ ಹೆಣ್ಣಿನ ಮನೆಯನ್ನು ಎಂದೆಂದಿಗೂ ಹಣ ನೀಡುವ ಯಂತ್ರವೆಂದು ಪರಿಗಣಿಸಲಾಗುತ್ತದೆ. ಹೆಣ್ಣಿನ ಮನೆಯ ಆಸ್ತಿ, ಹಣ ಎಲ್ಲವೂ ತನ್ನದು ಎಂದು ವರನ ಮನೆಯವರು ಸಹಜವಾಗಿಯೇ ಭಾವಿಸಿರುವುದರ ಹಿಂದೆ ಪುರುಷಪ್ರಧಾನ ಸಾಮಾಜಿಕ ಚಿಂತನೆಗಳು ಇಲ್ಲದೇ ಇರುತ್ತದೆಯೇ? ಸಾಮಾಜಿಕ ಸ್ಥಾನಮಾನಕ್ಕೆ ಅನುಗುಣವಾಗಿ ಮದುವೆಯ ವೆಚ್ಚಗಳು, ಊಟ, ಕಲ್ಯಾಣ ಮಂಟಪ, ಐಷಾರಾಮಿ ಕಾರುಗಳ ಪರಿಸ್ಥಿತಿಯನ್ನು ಸೃಷ್ಟಿಸಿದ ನಂತರ, ಹೆಣ್ಣಿನ ಮನೆಯವರೇ ಸ್ವಯಂಸೇವಕರಾದದ್ದನ್ನು ನಾವು ಕೇಳಿದ್ದೇವೆ. ಇದು ವರದಕ್ಷಿಣೆ ಸಮಸ್ಯೆ ಅಲ್ಲವೇ ಅಲ್ಲ ಎಂದೇ ಹೇಳಬೇಕು. ಇದೇ ಇಂದಿನ ಟ್ರೆಂಡ್!

ಉದಾಹರಣೆಗೆ, ತಿರುಪ್ಪೂರ್‌ನ ರಿಥನ್ಯಾ, ಕನ್ಯಾಕುಮಾರಿ ಜಿಲ್ಲೆಯ ಜೆಬೀಲಾ ಮತ್ತು ತಿರುವಳ್ಳೂರು ಜಿಲ್ಲೆಯ ಲೋಕೇಶ್ವರಿ ಅವರ ಆತ್ಮಹತ್ಯೆಗಳನ್ನು ನಾವು ತೆಗೆದುಕೊಂಡರೆ, ಬಹುಶಃ ಅವರಲ್ಲಿ ಕೆಲವರು ವರದಕ್ಷಿಣೆಯಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆಂದು ಬರೆದಿರದೇ ಇರಬಹುದು; ರಿಥನ್ಯಾ ತನ್ನ ತಂದೆಗೆ ಕಳುಹಿಸಿದ 9 ಧ್ವನಿ ಸಂದೇಶಗಳಲ್ಲಿ ವರದಕ್ಷಿಣೆಯಿಂದ ತನಗೆ ಹಿಂಸೆಯಾಗಿದೆ ಎಂದು ಹೇಳದೇ ಇರಬಹುದು; ಹಾಗಾದರೆ ಇದನ್ನು ವರದಕ್ಷಿಣೆ ಸಮಸ್ಯೆ ಎಂದು ಪರಿಗಣಿಸಬಾರದು ಎಂಬ ತೀರ್ಮಾನಕ್ಕೆ ಬರುವುದು ಹೇಗೆ?

500 ಸವರನ್ ಆಭರಣಗಳು, ಎರಡೂವರೆ ಕೋಟಿ ರೂಪಾಯಿ ಮದುವೆ ವೆಚ್ಚಗಳು, 70 ಲಕ್ಷ ರೂಪಾಯಿ ಮೌಲ್ಯದ ಐಷಾರಾಮಿ ಕಾರು ಇವೆಲ್ಲವನ್ನು ಒತ್ತಾಯದಿಂದ ಮಾಡಲಾಗಿದೆಯೋ ಅಥವಾ ಹೆಣ್ಣಿನ ಕುಟುಂಬವು ಸ್ವಯಂಪ್ರೇರಿತವಾಗಿ ಕೊಟ್ಟಿದೆಯೋ ಎಂಬುದು ಪ್ರಶ್ನೆಯಲ್ಲ. ಇಷ್ಟೊಂದು ಮಾಡಬೇಕು ಎಂಬುದಕ್ಕೆ ಕಾರಣವಾದ ಮೂಲ ಏನು ಎಂಬುದೇ ಮುಖ್ಯ ಪ್ರಶ್ನೆಯಾಗಿದೆ. ಅದೂಕೂಡ, ಹೆಣ್ಣು ಹೆತ್ತವರೇ ಅದನ್ನು ಏಕೆ ಮಾಡಬೇಕು? 350 ಸವರನ್ ಚಿನ್ನವನ್ನು ಮಾತ್ರ ಹಾಕಲು ಸಾಧ್ಯವಾಯಿತು. ಉಳಿದ 150 ಸವರನ್ ಚಿನ್ನ ಹಾಕುವಂತೆ ಒತ್ತಾಯಿಸಲಾಯಿತು. ವರನು ತನ್ನ ವ್ಯವಹಾರದಲ್ಲಿ ಹೂಡಿಕೆ ಮಾಡಲು ಹಣ ಕೇಳಿದರೆ, ಅದು ವರದಕ್ಷಿಣೆ ಎಂದು ಪರಿಗಣಿಸುವುದಿಲ್ಲವೇ?

ಪುಟ 15 ನೋಡಿ

ಭಾರತದ ಜಾತ್ಯತೀತ, ಬಹುತ್ವವಾದಿ ಅಡಿಪಾಯಗಳನ್ನು ಕೆಡವಿ ಅದನ್ನು ಕೋಮುವಾದಿ, ಬಹುಸಂಖ್ಯಾಕವಾದೀ "ಹಿಂದೂ ರಾಷ್ಟ್ರ"ವನ್ನಾಗಿ ಬದಲಾಯಿಸುವ ಸಂಘ ಪರಿವಾರದ ಫ್ಯಾಸಿಸ್ಟ್ ದಾಳಿಯ ವಿರುದ್ಧದ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಸೀತಾರಾಂ ಯೆಚುರಿ ನಮನ್ನಗಲಿ ಒಂದು ವರ್ಷವಾಗುತ್ತಿರುವ ಸಂದರ್ಭದಲ್ಲಿ ಅವರ ನಿಕಟ ಸಹಯೋಗಿ ಮತ್ತು ಅವರ ನಂತರ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯಾಗಿರುವ ಎಂ.ಎ. ಬೇಬಿ ಅವರಿಂದ ಒಂದು ಸ್ಮರಣೆ



ಪ್ರತಿಯೊಂದು ಹೋರಾಟದಲ್ಲೂ ಜೀವಂತರಾಗಿರುವ ಸೀತಾರಾಂ ಯೆಚುರಿ

ಕಾಮ್ರೇಡ್ ಸೀತಾರಾಮ್ ಯೆಚೂರಿ ನಮ್ಮನ್ನಗಲಿ ಒಂದು ವರ್ಷವಾಗಿದೆ. ಆದರೆ ಇಂದಿಗೂ, ಅವರ ನಿರ್ಗಮನದಿಂದ ಸೃಷ್ಟಿಯಾದ ಆಳವಾದ ಶೂನ್ಯದಿಂದ ನಾವು ಸಂಪೂರ್ಣವಾಗಿ ಹೊರಬಂದಿಲ್ಲ. ಅವರ ಅನುಪಸ್ಥಿತಿಯು ಚಳುವಳಿಯಲ್ಲಿ ಪ್ರತಿಧ್ವನಿಸುತ್ತಲೇ ಇದೆ, ಅವರಲ್ಲಿ ಸಾಕಾರಗೊಂಡಿದ್ದ ಸ್ಪಷ್ಟತೆ, ಬದ್ಧತೆ ಮತ್ತು ಕ್ರಾಂತಿಕಾರಿ ಉತ್ಸಾಹವನ್ನು ನಮಗೆ ನೆನಪಿಸುತ್ತಲೇ ಇದೆ.

ಮೇಲ್ಜಾತಿಯ, ಸವಲತ್ತು ಪಡೆದ ಕುಟುಂಬದಲ್ಲಿ ಜನಿಸಿದ ಕಾಮ್ರೇಡ್ ಯೆಚೂರಿ ಪ್ರಜ್ಞಾಪೂರ್ವಕವಾದ ಮತ್ತು ಅಚಲವಾದ ಒಂದು ಆಯ್ಕೆಯನ್ನು ಮಾಡಿದರು. ಅದೇಂದರೆ, ಭಾರತದ ತುಳಿತಕ್ಕೊಳಗಾದವರು, ಶೋಷಿತರು, ಬಾಯಿ ಮುಚ್ಚಿಸಲ್ಪಟ್ಟವರು ಮತ್ತು ದುಡಿಯುವ ಜನರೊಂದಿಗೆ ನಿಲ್ಲುವುದು. ಅವರ ಬದುಕು ವರ್ಗ ಮತ್ತು ಜಾತಿ ದಬ್ಬಾಳಿಕೆ ಪರಸ್ಪರ ತಳುಕು ಹಾಕಿಕೊಂಡಿದೆ ಮತ್ತು ಅವುಗಳ ವಿರುದ್ಧ ಒಟ್ಟಿಗೆ ಹೋರಾಡಬೇಕು ಎಂಬ ಮಾರ್ಕ್ಸ್ವಾದಿ ತಿಳುವಳಿಕೆಯ ದೃಢೀಕರಣವಾಗಿತ್ತು. ಭಾರತದಲ್ಲಿ ಬಂಡವಾಳಶಾಹಿಯ ವಿರುದ್ಧದ ಹೋರಾಟವನ್ನು ಜಾತಿ ಶ್ರೇಣೀಕರಣ ಮತ್ತು ಸಾಮಾಜಿಕ ಬಹಿಷ್ಕಾರದ ವಿರುದ್ಧದ ಹೋರಾಟದಿಂದ ಬೇರ್ಪಡಿಸಲು ಸಾಧ್ಯವಿಲ್ಲ ಎಂಬ ಸಿಪಿಐ(ಎಂ)ನ ಸ್ಪಷ್ಟ ದೃಷ್ಟಿಕೋನವನ್ನು ಅವರು ಎತ್ತಿಹಿಡಿದರು.

"ಎಲ್ಲೆಲ್ಲಿ ಒಂದು ಕಾರ್ಖಾನೆಯ ಚಿಮಣಿಯಿಂದ ಹೊಗೆ ಏಳುತ್ತದೆಯೋ, ಅದರೊಂದಿಗೇ ಕಾರ್ಮಿಕರ ಕೆಂಬಾವುಟವೂ ಏರಬೇಕು. ಎಲ್ಲೆಲ್ಲಿ ಅಸ್ಪೃಶ್ಯತೆ ಜನರಿಗೆ ಹಳ್ಳಿಯ ಬಾವಿಯಿಂದ ನೀರನ್ನು ನಿರಾಕರಿಸುತ್ತದೆಯೋ, ಅಲ್ಲಿಯೂ ಒಂದು ಪ್ರತಿರೋಧದ ಕೆಂಬಾವುಟ ಹಾರಾಡಬೇಕು" ಎಂದು ಕಾಮ್ರೇಡ್ ಬಿ.ಟಿ. ರಣದಿವೆ ಯವರು ಮತ್ತೆ–ಮತ್ತೆ ಹೇಳುತ್ತಿದ್ದುದನ್ನು ಕಾಮ್ರೇಡ್ ಯೆಚೂರಿ ನಿರಂತರವಾಗಿ ನಮಗೆ ನೆನಪಿಸುತ್ತಿದ್ದರು.

ಕ್ರಾಂತಿಕಾರಿ ತುರ್ತಿನಿಂದ ಕೂಡಿದ್ದ ಈ ಮಾತುಗಳನ್ನು ಕಾಮ್ರೇಡ್ ಯೆಚೂರಿ ಆಗಾಗ್ಗೆ ಉಲ್ಲೇಖಿಸುತ್ತಿದ್ದುದು ವಾಕ್ಚತುರತೆಯ ಪ್ರದರ್ಶನಕ್ಕಾಗಿಯಲ್ಲ, ಬದಲಾಗಿ ಕ್ರಿಯೆಗೆ ಒಂದು ಕರೆಯಾಗಿ.

ಪ್ರಸ್ತುತ ಆರ್‌ಎಸ್‌ಎಸ್ ನಿಯಂತ್ರಿತ ಬಿಜೆಪಿ ಸರ್ಕಾರದ ಆಳ್ವಿಕೆಯಲ್ಲಿ, ಭಾರತವು ಹಿಂದೆಂದೂ ಕಾಣದ ಒಂದು ಫ್ಯಾಸಿಸ್ಟ್ ಬೆದರಿಕೆಯನ್ನು ಎದುರಿಸುತ್ತಿದೆ. ಭಾರತದ ಜಾತ್ಯತೀತ, ಬಹುತ್ವವಾದಿ ಅಡಿಪಾಯಗಳನ್ನು ಕೆಡವಿ ಅದನ್ನು ಕೋಮುವಾದಿ, ಬಹುಸಂಖ್ಯಾಕವಾದೀ "ಹಿಂದೂ ರಾಷ್ಟ್ರ"ವನ್ನಾಗಿ ಬದಲಾಯಿಸುವ ಸಂಘ ಪರಿವಾರದ ದೀರ್ಘ ಕಾಲದ ಯೋಜನೆಯು ನಮ್ಮ ಕಣ್ಣ ಮುಂದೆಯೇ ತೆರೆದುಕೊಳ್ಳುತ್ತಿದೆ. ಇದು ಕೇವಲ ರಾಜಕೀಯ ವಿಚಲನವಲ್ಲ – ಇದು ನಾಗರಿಕತೆಯ ಮೇಲೆ ಮನುಸ್ಮೃತಿ ಮತ್ತು ಹಿಂದುತ್ವ ಸಿದ್ಧಾಂತದಲ್ಲಿ ಬೇರೂರಿರುವ ಒಂದು ದಾಳಿಯಾಗಿದೆ.

ಈ ಫ್ಯಾಸಿಸ್ಟ್ ದಾಳಿಯ ವಿರುದ್ಧದ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟದಲ್ಲಿ ಕಾಮ್ರೇಡ್ ಯೆಚೂರಿ ಪ್ರಮುಖ ಪಾತ್ರ ವಹಿಸಿದ್ದಾರೆ. ಆರೆಸ್ಸೆಸ್‌ನ ನಿಜಮುಖವನ್ನು, ಅದರ ಪ್ರತಿಗಾಮಿ, ಪಿತೃಪ್ರಧಾನ, ಜಾತಿವಾದಿ ಅಜೆಂಡಾವನ್ನು ಕರಾರುವಾಕ್ಕಾಗಿ ಬಯಲಿಗೆಳೆದ ಯೆಚುರಿಯವರು ಅದನ್ನು ಪ್ರತಿರೋಧಿಸಲು ಮತ್ತು ಸೋಲಿಸಲು ಜಾತ್ಯತೀತ, ಪ್ರಜಾಪ್ರಭುತ್ವವಾದಿ ಮತ್ತು ಎಡಶಕ್ತಿಗಳ ಒಂದು ಸಂಯುಕ್ತ ರಂಗಕ್ಕೆ ನಿರಂತರವಾಗಿ ಕರೆನೀಡುತ್ತ ಬಂದರು.

ಸೋವಿಯತ್ ಒಕ್ಕೂಟದ ಮತ್ತು ಪೂರ್ವ ಯುರೋಪಿನಲ್ಲಿನ ಸಮಾಜವಾದಿ ಪ್ರಯೋಗಗಳ ಪತನದ ನಂತರದ ಸೈದ್ಧಾಂತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ, ಪ್ರಪಂಚದಾದ್ಯಂತದ ಅನೇಕ ಕಮ್ಯುನಿಸ್ಟ್ ಪಕ್ಷಗಳು ಭ್ರಮನಿರಸನ ಮತ್ತು ಹಿಂಜರಿತವನ್ನು ಎದುರಿಸಿದವು. ಆದರೆ ಸಿಪಿಐ(ಎಂ) ಗಂಭೀರ ಆಂತರಿಕ ಚರ್ಚೆ ಮತ್ತು ಸೈದ್ಧಾಂತಿಕ ಸ್ಪಷ್ಟತೆಯೊಂದಿಗೆ ಆ ಬಿರುಗಾಳಿಯನ್ನು ದೃಢ ನಿರ್ಧಾರದಿಂದ ಎದುರಿಸಿ ಮುನ್ನಡೆಯಿತು. ಕಾಮ್ರೇಡ್ ಇಎಂಎಸ್ ನಂಬೂದಿರಿಪಾಡ್, ಜ್ಯೋತಿ ಬಸು, ಹರ್ಕಿಶನ್ ಸಿಂಗ್ ಸುರ್ಜೀತ್ ಮತ್ತು ಎಂ.ಬಸವಪುನ್ನಯ್ಯನವರು ಇದರ ನೇತೃತ್ವ ವಹಿಸಿದ್ದರು. ಮತ್ತು ಆಗ ಯುವ ಮತ್ತು ಕ್ರಿಯಾಶೀಲ ಒಡನಾಡಿಯಾಗಿದ್ದ ಕಾಮ್ರೇಡ್ ಯೆಚೂರಿ ಅವರಿಗೆ ಸಿಪಿಐ(ಎಂ)ನ 14ನೇ ಮಹಾಧಿವೇಶನವನ್ನು ರೂಪಿಸಿದ ಕರಡು ಸೈದ್ಧಾಂತಿಕ ಠರಾವಿನ ಸಹ–ಲೇಖನದ ಜವಾಬ್ದಾರಿಯನ್ನು ವಹಿಸಲಾಯಿತು.

ಇದು ಒಂದು ಐತಿಹಾಸಿಕ ಕಾರ್ಯವಾಗಿತ್ತು. ಆ ಠರಾವು ಸೋವಿಯೆತ್ ಒಕ್ಕೂಟದ ಪತನವನ್ನು ಒಪ್ಪಿಕೊಂಡಿತು, ಅದರ ಕಾರಣಗಳನ್ನು ವಿಶ್ಲೇಷಿಸಿತು ಮತ್ತು ಸೋಲು ಸಮಾಜವಾದದಿಂದಾಗಿಯೇನೂ ಅಲ್ಲ, ಬದಲಾಗಿ ಸಮಾಜವಾದಿ ನಿರ್ಮಾಣದ ಪ್ರಕ್ರಿಯೆಯಲ್ಲಿನ ಗಂಭೀರ ವಿಕೃತಿಗಳು ಮತ್ತು ದೋಷಗಳಿಂದ ಉಂಟಾಗಿದೆ ಎಂದು ತೀರ್ಮಾನಿಸಿತು. ಸಮಯ–ಸಮಯದಲ್ಲಿ ಅಧಿಕಾರಶಾಹಿ ಮತ್ತು ಸಂರಚನಾತ್ಮಕ ವಿರೂಪಗಳನ್ನು ಸರಿಪಡಿಸುವಲ್ಲಿ ವಿಫಲತೆ ಮತ್ತು ಮಾರ್ಗ ಸರಿಪಡಿಕೆಯಲ್ಲಿ ತೊಡಗಿಸಿಕೊಳ್ಳಲು ನಿರಾಕರಿಸಿರುವುದು ಪತನಕ್ಕೆ ಪ್ರಮುಖ ಕಾರಣಗಳೆಂದು ಗುರುತಿಸಲಾಯಿತು.

ಕಾಮ್ರೇಡ್ ಯೆಚೂರಿ ಅವರು ಪಕ್ಷದ ಮಹಾಧಿವೇಶನದ ಮುಂದೆ ಈ ಸೈದ್ಧಾಂತಿಕ ಠರಾವನ್ನು ಮಂಡಿಸಿದ್ದು ಮತ್ತು ಅದರ ಮೇಲಿನ ಚರ್ಚೆಗಳಲ್ಲಿ ಅವರು ಸಂಪೂರ್ಣವಾಗಿ ತೊಡಗಿಸಿಕೊಂಡದ್ದು, ಭಾರತೀಯ ಕಾರ್ಮಿಕ ವರ್ಗದ ಒಬ್ಬ ಪ್ರಬುದ್ಧ ಮತ್ತು ಶಿಸ್ತಿನ ಮಾರ್ಕ್ಸ್‌ವಾದಿ ನಾಯಕರಾಗಿ ಅವರ ಉದಯವನ್ನು ತೋರ್ಪಡಿಸಿತು.

2004ರ ಲೋಕಸಭಾ ಚುನಾವಣೆಯಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎ ಸೋಲಿನ ನಂತರ, ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಿತು. ಕಾಮ್ರೇಡ್ ಯೆಚೂರಿ ಕಾರ್ಮಿಕ ವರ್ಗವನ್ನು ರಕ್ಷಿಸುತ್ತಲೇ ಮತ್ತು ನೀತಿ ಸುರಕ್ಷತೆಗಳನ್ನು ಖಚಿತಪಡಿಸಿಕೊಳ್ಳುತ್ತಲೇ ಯುಪಿಎಗೆ ಎಡ ಬೆಂಬಲವನ್ನು ಸಂಯೋಜಿಸುವಲ್ಲಿ ಕಾಮ್ರೇಡ್ ಸುರ್ಜೀತ್ ಅವರೊಂದಿಗೆ ನಿಕಟವಾಗಿ ಕೆಲಸ ಮಾಡಿದರು. ಯುಪಿಎಯ ನೀತಿ ಚೌಕಟ್ಟಾದ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ವನ್ನು ರೂಪಿಸುವಲ್ಲಿ ಕಾಮ್ರೇಡ್ ಯೆಚೂರಿ ಮತ್ತು ಪಿ.ಚಿದಂಬರಂ ಸಕ್ರಿಯವಾಗಿ ಭಾಗವಹಿಸಿದರು. ಆ ಅವಧಿಯಲ್ಲಿ ಅವರು ಗಳಿಸಿದ ಅನುಭವವು ಅವರ ರಾಜಕೀಯ ಕುಶಾಗ್ರತೆಯನ್ನು, ವಿಶೇಷವಾಗಿ ಕೋಮುವಾದಿ ಬಲಪಂಥಕ್ಕೆ ವಿಶಾಲವಾದ ಪ್ರತಿರೋಧವನ್ನು ನಿರ್ಮಿಸುವಲ್ಲಿ ಆಳಗೊಳಿಸಿತು.

ಇಂದು, ಪ್ರಸಕ್ತ ಆಳ್ವಿಕೆಯ ಅಡಿಯಲ್ಲಿ, ಭಾರತವು ಸಂಘ ಪರಿವಾರದ ನವ–ಫ್ಯಾಸಿಸ್ಟ್ ಶಕ್ತಿಗಳ ಮುತ್ತಿಗೆಗೆ ಒಳಗಾಗಿದೆ. ಸಿಪಿಐ(ಎಂ)ನ 24ನೇ ಮಹಾಧಿವೇಶನವು ಈ ಸರ್ವಾಧಿಕಾರಶಾಹೀ ಬೆದರಿಕೆಯ ವಿರುದ್ಧ ವಿಶಾಲ ಮತ್ತು ಸಮರಶೀಲ ಪ್ರತಿರೋಧವನ್ನು ನಿರ್ಮಿಸುವುದು ಮತ್ತು ದೇಶಾದ್ಯಂತ ಪಕ್ಷದ ಸ್ವತಂತ್ರ ಶಕ್ತಿಯನ್ನು ವಿಸ್ತರಿಸುವುದು ಪ್ರಧಾನ ಕಾರ್ಯಭಾರ ಎಂದು ಸ್ಪಷ್ಟವಾಗಿ ಗುರುತಿಸಿದೆ:

ಇಂದು ಕಾರ್ಯನಿರತ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರವನ್ನು ಹೊಂದಿರುವ ಭಾರತದ ಏಕೈಕ ರಾಜ್ಯವಾಗಿ, ಕೇರಳವು ಭರವಸೆಯ ತೋರು ದೀಪವಾಗಿ, ಒಂದು ಪರ್ಯಾಯ ದಾರಿ ಸಾಧ್ಯ ಎಂಬುದಕ್ಕೆ ಒಂದು ಜೀವಂತ ಉದಾಹರಣೆಯಾಗಿ ನಿಂತಿದೆ. ಕೇಂದ್ರದ ನಿರಂತರ ದಾಳಿಗಳನ್ನು ಎದುರಿಸಿಯೂ ಆಡಳಿತವು ಜನಪರ, ಜಾತ್ಯತೀತ ಮತ್ತು ಅಭಿವೃದ್ಧಿ–ಆಧಾರಿತವಾಗಿರಲು ಸಾಧ್ಯವಿದೆ ಎಂದು ಕಾಮ್ರೇಡ್ ಪಿಣರಾಯಿ ವಿಜಯನ್ ಅವರ ನೇತೃತ್ವದಲ್ಲಿ, ಎಲ್‌ಡಿಎಫ್ ಸರ್ಕಾರ ಪ್ರದರ್ಶಿಸಿದೆ.

ಕೇರಳದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳು ಮತ್ತು ವಿಧಾನಸಭಾ ಚುನಾವಣೆಗಳು ನಿರ್ಣಾಯಕವಾಗಿವೆ. ಎಲ್‌ಡಿಎಫ್‌ನ ಉಪಸ್ಥಿತಿಯನ್ನು ಕಾಪಾಡಿಕೊಳ್ಳುವುದು ಮತ್ತು ವಿಸ್ತರಿಸುವುದು ಕೇವಲ ರಾಜ್ಯ ಮಟ್ಟದ ರಾಜಕೀಯ ಗುರಿಯಷ್ಟೇ ಅಲ್ಲ, ಅದು ರಾಷ್ಟ್ರೀಯ ಅವಶ್ಯಕತೆಯೂ ಆಗಿದೆ. ಎಲ್‌ಡಿಎಫ್‌ನ ನಿರಂತರ ಯಶಸ್ಸು ಭಾರತದಾದ್ಯಂತ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಶಕ್ತಿ ಮತ್ತು ವಿಶ್ವಾಸವನ್ನು ನೀಡುತ್ತದೆ. ಭಾರತದಲ್ಲಿ ಸಮಾಜವಾದ ಮತ್ತು ಪ್ರಜಾಪ್ರಭುತ್ವದ ಸಮರದಲ್ಲಿ ಎಲ್‌ಡಿಎಫ್‌ನ ಮಹತ್ವವನ್ನು ಗುರುತಿಸಿ, ಕಾಮ್ರೇಡ್ ಯೆಚೂರಿ ಯಾವಾಗಲೂ ಅದರೊಂದಿಗೆ ಸದಾ ದೃಢವಾಗಿ ನಿಂತರು.

ತಮಿಳುನಾಡು, ಬಂಗಾಳ, ಅಸ್ಸಾಂ, ಪುದುಚೇರಿ ಮತ್ತು ಬಿಹಾರದ ಚುನಾವಣೆಗಳು ಕೂಡ ಭಾರತದ ರಾಜಕೀಯ ಭವಿಷ್ಯವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಬಿಜೆಪಿಯ ಸೋಲು ಮತ್ತು ಎಡ ಮತ್ತು ಪ್ರಗತಿಪರ ಶಕ್ತಿಗಳ ಮುನ್ನಡೆ ನಮ್ಮ ತಕ್ಷಣದ ರಾಜಕೀಯ ಗುರಿಯಾಗಿರಬೇಕು. ಇದನ್ನು ಸಾಧಿಸಲು, ಸಿಪಿಐ(ಎಂ)ನ ಸಂಪೂರ್ಣ ಶಕ್ತಿಯನ್ನು – ಅದರ ಒಂದು ದಶಲಕ್ಷಕ್ಕೂ ಹೆಚ್ಚು ಸದಸ್ಯರನ್ನು – ಸಜ್ಜುಗೊಳಿಸಬೇಕು. ಎಲ್ಲಾ ಸಾಮೂಹಿಕ ರಂಗಗಳು ಚೈತನ್ಯಶೀಲವಾಗಬೇಕು. ನಮ್ಮ ರಾಜಕೀಯ ಹೋರಾಟಗಳು ಸಾಂಸ್ಕೃತಿಕ ಪ್ರಜ್ಞೆ, ಸೃಜನಶೀಲತೆ ಮತ್ತು ಸ್ಪಷ್ಟತೆಯಿಂದ ತುಂಬಿರಬೇಕು.

ಸೈದ್ಧಾಂತಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿ ಸಾಗಿರುವ ಸಮರದಲ್ಲಿ ಕಾಮ್ರೇಡ್ ಯೆಚೂರಿಯವರು ಹಾಕಿಕೊಟ್ಟ ಪರಂಪರೆಯು ಮಾರ್ಗದರ್ಶಕ ಬೆಳಕಾಗಿರುತ್ತದೆ. ಅವರ ಬದ್ಧತೆ, ಅವರ ತೀಕ್ಷ್ಣ ಬೌದ್ಧಿಕತೆ, ಅವರ ಅವಿಶ್ರಾಂತ ಕೆಲಸ ಮತ್ತು ಜನಸಮೂಹಗಳೊಂದಿಗೆ ಅವರ ಆಳವಾದ ಸಂಪರ್ಕ ಈ ಗುಣಗಳನ್ನು ನಾವು ಮುಂದೊಯ್ಯಬೇಕಾಗಿದೆ.

ಕಾಮ್ರೇಡ್ ಸೀತಾರಾಮ್ ಯೆಚೂರಿಯವರ ಕ್ರಾಂತಿಕಾರಿ ಜೀವನದಿಂದ ಪ್ರೇರಿತರಾಗಿ ನಾವು ಸಿದ್ಧರಾಗೋಣ. ಶೋಷಣೆಯನ್ನು ಕಿತ್ತೊಗೆಯುವ, ಜಾತಿ ಮತ್ತು ಕೋಮು ದಬ್ಬಾಳಿಕೆಯನ್ನು ಕೊನೆಗಾಣಿಸುವ ಮತ್ತು ಒಂದು ಸಮಾಜವಾದಿ ಭಾರತವನ್ನು ನಿರ್ಮಿಸುವ ನಮ್ಮ ಐತಿಹಾಸಿಕ ಕಾರ್ಯವನ್ನು ಮುಂದೊಯ್ಯುವಲ್ಲಿ ಅವರು ನಮಗೆ ತೋರಿಸಿದ ಅಚಲ, ರಾಜಿಯಾಗದ ಮತ್ತು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಚಿಂತನೆಯಲ್ಲಿ ಬೇರೂರಿರುವ ದಾರಿಗೆ ನಾವು ಬದ್ಧರಾಗೋಣ.

ಮಾನವಕುಲ ಪರಿಗಣಿಸಬೇಕಾದ ಹಂತದಲ್ಲಿ ಗಾಜಾ

ನೀಲೋತ್ಪಲ್ ಬಸು

ಕನ್ನಡಕ್ಕೆ: **ವಿಶ್ವ**



ಇಡೀ ಮಾನವಕುಲ ಪರಿಗಣಿಸಬೇಕಾದ ಮಹತ್ವದ ಹಂತದಲ್ಲಿ ಗಾಜಾ ನಿಂತಿದೆ. ನಿರಂತರವಾಗಿ ಜನಾಂಗೀಯ ಹಿಂಸಾಚಾರ ಮತ್ತು ವಿನಾಶ ಹಾಗೂ ನರಹತ್ಯೆ ನಡೆಸುತ್ತಿರುವ ವಸಾಹತು ಪ್ರಭುತ್ವವನ್ನು ನಾಶಮಾಡುವ ಶಕ್ತಿಯುಳ್ಳ ಪ್ಯಾಲೆಸ್ತೀನಿ ಜನರನ್ನು ಗುರುತಿಸಬೇಕಾದ ಕಾಲ ಒದಗಿ ಬಂದಿದೆ. ವೆನಿಸ್ ಚಿತ್ರೋತ್ಸವದಲ್ಲಿ ಪ್ರೀಮಿಯರ್ ಪ್ರದರ್ಶನಗೊಂಡ 'ವಾಯ್ಸ್ ಆಫ್ ಹಿಂದ್ ರಜಬ್' ಸಿನಿಮಾಕ್ಕೆ 23 ನಿಮಿಷಗಳ ಕಾಲ ಎದ್ದು ನಿಂತು ಚಪ್ಪಾಳೆ ತಟ್ಟಿ (ಸ್ಟ್ಯಾಂಡಿಂಗ್ ಒವೇಶನ್) ಗೌರವ ಸೂಚಿಸಿದ್ದು ಆ ಕ್ಷಣಕ್ಕೆ ದೊಡ್ಡ ಸೂಚನೆಯಾಗಿದೆ. ಟ್ಯುನೀಷಿಯಾದ ನಿರ್ದೇಶಕ ಕೌಥರ್ ಬೆನ್ ಹನಿಯಾ, ಆರು ವರ್ಷ ಪ್ರಾಯದ ಹಿಂದ್ ರಜಬ್‌ಳ ಕಥೆಯನ್ನು ಮರುಸೃಷ್ಟಿಸಿದ್ದಾರೆ. ತನ್ನ ಸೋದರ ಸಂಬಂಧಿಗಳು, ಚಿಕ್ಕಮ್ಮ, ಚಿಕ್ಕಪ್ಪ ಮತ್ತು ಅವರೆಲ್ಲರ ನೆರವಿಗೆ ಬಂದ ಇಬ್ಬರು ಅರೆವೈದ್ಯಕೀಯ ಸಿಬ್ಬಂದಿಯೊಂದಿಗೆ ರಜಬ್ ಕೂಡ ಮೃತಪಟ್ಟಿದ್ದಳು. 2024ರ ಜನವರಿಯಲ್ಲಿ ಇಸ್ರೇಲ್‌ನ ಪಡೆಗಳು ಹಿಂದ್ ರಜಬ್ ಕುಟುಂಬವಿದ್ದ ಕಾರಿನ ಮೇಲೆ ಗುಂಡಿನ ಮಳೆಗರೆದಾಗ ಈ ಅಮಾನವೀಯ ಘಟನೆ ನಡೆದಿತ್ತು. ಕಾರಿನಲ್ಲಿ ಕುಟುಂಬ ಸದಸ್ಯರ ಶವಗಳ ನಡುವೆ ಸಿಕ್ಕಿಹಾಕಿಕೊಂಡಿದ್ದ ಹಿಂದ್‌ಳನ್ನು ಬದುಕಿಸಲು ಹಲವು ಗಂಟೆ ಕಾಲ ಪ್ರಯತ್ನಿಸಿದ್ದ ರೆಡ್ ಕ್ರೆಸೆಂಟ್ ಸೊಸೈಟಿಯ ರೆಕಾರ್ಡಿಂಗ್‌ಗಳನ್ನು ಆಧರಿಸಿ ಈ ಡಾಕ್ಯುಡ್ರಾಮಾವನ್ನು ನಿರ್ಮಿಸಲಾಗಿದೆ. 2024 ಜನವರಿ 29ರ ಮೂಲ ರೆಕಾರ್ಡಿಂಗ್‌ನಲ್ಲಿ ಹಿಂದ್ ಬಿಕ್ಕಿಬಿಕ್ಕಿ ಅಳುತ್ತಿರುವುದು ಹಾಗೂ ರಕ್ಷಣಾ ಕಾರ್ಯಕರ್ತರೊಂದಿಗೆ ಮೊರೆಯಿಡುತ್ತಿರುವುದು ಕೇಳಿಸುತ್ತದೆ. 'ದಯವಿಟ್ಟು ನಾನಿದ್ದಲ್ಲಿಗೆ ಬನ್ನಿ. ನನಗೆ ಭಯವಾಗುತ್ತದೆ' ಎಂದು, ಹಿನ್ನೆಲೆಯಲ್ಲಿ ಗುಂಡಿನ ಸದ್ದಿನ ನಡುವೆ ಹಿಂದ್ ಹೇಳಿದ್ದಳು. ಆ್ಯಂಬುಲೆನ್ಸ್ ಆಕೆಯನ್ನು ತಲುಪುವ ಮೊದಲೇ ಅದೂ ಇಸ್ರೇಲಿ ಟ್ಯಾಂಕ್‌ಗಳ ಪಾಯಿಂಟ್ ಬ್ಲಾಂಕ್ ರೇಂಜ್ ದಾಳಿಗೆ ನಾಶವಾಗಿತ್ತು. ಹಿಂದ್ ಕುಟುಂಬದ ಕಾರಿನ ಮೇಲೆ 300ಕ್ಕೂ ಹೆಚ್ಚು ಬುಲೆಟ್‌ಗಳನ್ನು ಹಾರಿಸಲಾಗಿತ್ತು. ದುರಂತ ನಡೆದ ಎರಡು ವಾರಗಳ ನಂತರವಷ್ಟೇ ಆ ಆ್ಯಂಬುಲೆನ್ಸ್ ಪತ್ತೆಯಾಗಿತ್ತು.

ಚಿತ್ರ ತಂಡದ ಭಾಗವಾದ ನಟಿ ಸಜಾ ಕಿಲಾನಿ ಪತ್ರಕರ್ತರಿಗೆ ಹೀಗೆ ಹೇಳಿದರು: "ಸಾಮೂಹಿಕ ಹತ್ಯೆ, ಹಸಿವು, ಅಮಾನವೀಕರಣ, ವಿನಾಶ ಮತ್ತು ಈಗ ನಡೆಯುತ್ತಿರುವ ಆಕ್ರಮಣ ಸಾಕಪ್ಪಾ ಸಾಕು". ಈ ಸಿನಿಮಾ ಒಂದು ಅಭಿಪ್ರಾಯವೂ ಅಲ್ಲ ಕಲ್ಪನಾ ಲೋಕವೂ (ಫ್ಯಾಂಟಸಿ) ಅಲ್ಲ ಎಂದು ಕೂಡ ಸಜಾ ಹೇಳಿದರು. ಇದೊಂದು ಸತ್ಯದಲ್ಲಿ ಅದ್ದಿರುವ ಸಿನಿಮಾವಾಗಿದೆ. ಹಿಂದ್‌ಳ ಕಥೆ ಒಂದು ಇಡೀ ಜನಸಮುದಾಯದ ಕಥೆಯನ್ನು ಹೇಳುವ ತೂಕ ಹೊಂದಿದೆ. ಆಕೆಯ ಧ್ವನಿಯು ಕಳೆದ ಎರಡು ವರ್ಷಗಳಲ್ಲಷ್ಟೇ ಗಾಜಾದಲ್ಲಿ ಮಡಿದ ಹತ್ತಾರು ಸಾವಿರ ಮಕ್ಕಳ ದನಿಯಾಗಿದೆ. ಅದು ಬದುಕುವ, ಕನಸು ಕಾಣುವ, ಘನತೆಯಿಂದ ಬಾಳುವ ಹಕ್ಕುಳ್ಳ ಪ್ರತಿಯೊಬ್ಬ ಮಗಳು, ಪ್ರತಿಯೊಬ್ಬ ಮಗನ ದನಿಯಾಗಿದೆ. ಆದಾಗ್ಯೂ ಕಣ್ಣೆವೆ ಮಿಟುಕಿಸದ ನಮ್ಮ ಕಣ್ಣುಗಳ ಮುಂದೆಯೇ ಅವೆಲ್ಲವೂ ದೋಚಲ್ಪಟ್ಟವು ಎಂದು ನಟಿ ಭಾವಪರವಶರಾಗಿ ಹೇಳಿದ್ದಾರೆ.

ಮುಖ್ಯವಾಹಿನಿ ಹಾಲಿವುಡ್ ಕಲಾವಿದರೂ ಈ ಸಿನಿಮಾ ನಿರ್ಮಾಣದಲ್ಲಿ ಒಳಗೊಂಡಿರುವುದು ಗಮನಾರ್ಹ ಸಂಗತಿಯಾಗಿದೆ. ಚಿತ್ರ ವಿಮರ್ಶೆಗಳು ಸಹಾನುಭೂತಿ ಹಾಗೂ ಸಾರ್ವಜನಿಕ ಪರಿಕಲ್ಪನೆಯಲ್ಲಿ ಭಾರಿ ಬದಲಾವಣೆಯನ್ನು ಸೂಚಿಸುತ್ತವೆ. ಚಿತ್ರ ವಿಮರ್ಶಕರು ಇದನ್ನು ಮನಃಪೂರ್ವಕವಾಗಿ ಮೆಚ್ಚಿಕೊಂಡಿದ್ದಾರೆ. 'ರೆಕ್‌ಲೆಸ್, ರತ್‌ಲೆಸ್... ಒಂದು ಪ್ರಚೋದನಕಾರಿ ಬುದ್ಧಿವಂತಿಕೆಯಾಗಿದೆ. ವೆನಿಸ್‌ಗೆ ಕಿಚ್ಚು ಹಚ್ಚಿರುವ ಸಿನಿಮಾ ಯಾವುದೆಂಬ ಬಗ್ಗೆ ಅನುಮಾನವೇ ಬೇಡ... ಈ ಸಿನಿಮಾವೇ ಅದು' ಎಂದು ದ ಗಾರ್ಡಿಯನ್ ಹೇಳಿದೆ. 'ಇದೊಂದು ಮಾನವೀಯ ಅದ್ಭುತವಾಗಿದೆ. ಚಿತ್ರೋತ್ಸವದ ಅತ್ಯುನ್ನತ ಶ್ಲಾಘನೆಗೆ ಅರ್ಹವಾಗಿದೆ' ಎಂದು ದ ವೋಗ್ ಪತ್ರಿಕೆ ಬಣ್ಣಿಸಿದೆ. ಅಂತಿಮವಾಗಿ ಸಿಲ್ವರ್ ಲಯನ್ ಪ್ರಶಸ್ತಿ ದೊರಕಿರುವುದು ಬಹುಶಃ ಅದರ ದಾಖಲೆಗಳ ಒಂದು ಸಣ್ಣ ತುಣುಕಾಗಿದೆ ಅಷ್ಟೇ.

'ಸುಮುದ್ ಫ್ಲೋಟಿಲಾ'

ಇದು ನಡೆಯಲೇ ಬೇಕಾಗಿತ್ತು. 'ಸುಮುದ್ ಫ್ಲೋಟಿಲಾ' –ಇದು ನಿರ್ಬಂಧವನ್ನು ಮುರಿಯಬೇಕಾಗಿದೆ ಎನ್ನುವ ಪ್ರಯತ್ನವಾಗಿದ್ದು ಗಾಜಾ ವಿಚಾರದಲ್ಲಿ ಆಗಬೇಕಾದ ಬದಲಾವಣೆ ಬಗೆಗಿನ ಇನ್ನೊಂದು ಮಹತ್ವದ ಬದಲಾವಣೆಯ ಸುಳಿವಾಗಿದೆ. ಗಾಜಾವನ್ನು ಜಲಮಾರ್ಗದಲ್ಲಿ ಮುತ್ತಿಗೆ ಹಾಕಿರುವುದಕ್ಕೆ ಸವಾಲು ಹಾಕಿರುವ ಈ ವರ್ಷದ ನಾಲ್ಕನೇ ಘಟನೆ ಇದಾಗಿದೆ. 44 ದೇಶಗಳ ಕಾರ್ಯಕರ್ತರನ್ನು ಹೊತ್ತ 50 ಹಡಗುಗಳು ಬಾರ್ಸಿಲೋನಾ, ಟ್ಯುನಿಸ್, ಮಲೇಷ್ಯಾ, ಜಿನೋವಾ, ಕಟಾನಿಯಾ ಮತ್ತು ಸೈರೋಸ್‌ನಿಂದ ಹೊರಟಿದ್ದು ಆಹಾರ, ನೀರು ಮತ್ತು ಔಷಧಿಗಳನ್ನು ಹೊತ್ತು ತರುತ್ತಿವೆ. ಈ ನೌಕೆಗಳು ಸೆಪ್ಟೆಂಬರ್ ಮಧ್ಯಭಾಗದಲ್ಲಿ ತಲುಪುವ ನಿರೀಕ್ಷೆಯಿದೆ. ಇದು ಬೆಳೆಯುತ್ತಲೇ ಇರುವ ಸೌಹಾರ್ದತೆಯ ಸಂಕೇತವಾಗಿದೆ. ಒಂದು ವೇಳೆ 'ಸುಮುದ್ ಫ್ಲೋಟಿಲಾ'ವನ್ನು ತಡೆದರೆ ಯುರೋಪ್‌ನಾದ್ಯಂತ ಸಾಗರಯಾನ ಚಟುವಟಿಕೆಗಳನ್ನು ಸ್ಥಗಿತಗೊಳಿಸುವುದಾಗಿ ಬಂದರು ನೌಕರರ ಸಂಘಟನೆಗಳು ಎಚ್ಚರಿಕೆ ನೀಡಿರುವುದು ಗಮನಾರ್ಹವಾಗಿದೆ.

ಕೊಲಂಬಿಯಾ ಅಧ್ಯಕ್ಷ ಗುಸ್ತಾವೋ ಪೆಟ್ರೋ 'ಸುಮುದ್ ಫ್ಲೋಟಿಲಾ'ಗೆ ಕಳಿಸಿದ ಸಂದೇಶವು ಸೌಹಾರ್ದತೆಯ ಸಾರದಂತಿದೆ. "ಪ್ಯಾಲೆಸ್ತೀನ್ ಸತ್ತರೆ ಅದರೊಂದಿಗೆ ಇಡೀ ಮನುಕುಲ ಸಾಯುತ್ತದೆ. ನೀವು ನಡೆಸುತ್ತಿರುವುದು ಕೇವಲ ಸಾಗರ ಪಯಣವಲ್ಲ; ಇದೊಂದು ನೈತಿಕ ಕೂಗಾಗಿದೆ. ಗಾಳಿಯು ನಿಮ್ಮ ನೌಕೆಗಳನ್ನು ಇತಿಹಾಸದ ಬಲದೊಂದಿಗೆ ಮುಂದಕ್ಕೊಯ್ಯಲಿ. ಸಮುದ್ರವು ತನ್ನ ಬಾಹುಗಳನ್ನು ತೆರೆಯಲಿ. ಹಾಗೂ ಜಗತ್ತು ನಿಮ್ಮ ಸಂದೇಶವನ್ನು ಆಲಿಸಲಿ. ಗಾಜಾ ಬಳಿಯ ಜಲ ಸೀಮೆಯನ್ನು ನೀವು ತಲುಪಿದಾಗ ಶಾಂತಿಯೆನ್ನುವುದು ಒಂದು ಕಲ್ಪನೆಯಲ್ಲ, ಅದೊಂದು ಕರ್ತವ್ಯ ಎಂದು ನಂಬಿದ ಮಿಲಿಯಾಂತರ ಜನರ ದನಿಯೊಂದಿಗೆ ನೀವು ಸಂಚರಿಸುತ್ತಿದ್ದೀರಿ ಎಂಬುದು ನಿಮಗೆ ಅರಿವಾಗುತ್ತದೆ" ಎಂದು ಪೆಟ್ರೋ ಹೇಳಿದ್ದಾರೆ.

ಇಂಥ ಭಾವನೆ ಮತ್ತು ಸೌಹಾರ್ದತೆಯು ಇದ್ದಕ್ಕಿದ್ದಂತೆ ಉದಯಿಸಿದ್ದಲ್ಲ. 63,000ಕ್ಕೂ ಅಧಿಕ ಜನರ ಹತ್ಯೆಯಾಗಿದೆ. ಅವರಲ್ಲಿ 124 ಮಕ್ಕಳ ಸಹಿತ ಕನಿಷ್ಠ 332 ಮಂದಿ ಅಪೌಷ್ಟಿಕತೆಯಿಂದ ಮರಣಿಸಿದ್ದಾರೆ. 240ಕ್ಕೂ ಹೆಚ್ಚು ಪತ್ರಕರ್ತರ ಹತ್ಯೆಯಾಗಿದೆ. ಎಷ್ಟೊಂದು ಜೀವಗಳ ಬಲಿಯಾಗಿದೆಯಲ್ಲ ಎನ್ನುವುದನ್ನು ನಾವು ತಿಳಿದುಕೊಳ್ಳುವ ಮುಂಚೆ ಇನ್ನೆಷ್ಟು ಹೆಣಗಳು ಉರುಳಲಿವೆಯೋ? ನಿಜ ಹೇಳಬೇಕೆಂದರೆ ಹಾಗೆ 'ಯಾವತ್ತೂ ಆಗದಿರಲಿ' ಎಂಬುದು ಯಾವಾಗ ಆರಂಭವಾಗುತ್ತದೆ?



ಭೂಪಟದಿಂದ ಪ್ಯಾಲೆಸ್ತೀನಿ ಪ್ರದೇಶಗಳನ್ನು ನಿರ್ಮೂಲ ಮಾಡುವ ಗುರಿಯೊಂದಿಗೆ ಝಿಯೋನಿಸ್ಟ್ ಪ್ರಭುತ್ವದ ವಿನಾಶಕಾರಿ ಅಭಿಯಾನ ಆರಂಭವಾದ ಕಳೆದ ಎರಡು ವರ್ಷಗಳಿಂದ ಜಗತ್ತಿನಾದ್ಯಂತ ನೂರಾರು ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದಿದ್ದಾರೆ. ನರಹತ್ಯೆಗಳು ತಮ್ಮ ಮನೆಯೊಳಗಡೆಯೇ ಲೈವ್‌ಸ್ಟ್ರೀಮ್ ಆಗಿದ್ದರ ಪರಿಣಾಮವಾಗಿ ಜನರು ಆಕ್ರೋಶಗೊಂಡಿದ್ದಾರೆ. ಮಾನವೀಯ ನೆರವನ್ನು ತಡೆಗಟ್ಟಿ ಪ್ಯಾಲೆಸ್ತೀನಿಯರನ್ನು ಹಸಿವಿನಿಂದ ಕಂಗೆಡಿಸುವ, ಆಸ್ಪತ್ರೆಗಳನ್ನು ಬಾಂಬ್‌ಗಳಿಂದ ಉಡಾಯಿಸುವ ಮತ್ತು ಆಹಾರ ಪದಾರ್ಥಗಳನ್ನು ಪಡೆಯಲು ಸರದಿ ಸಾಲಿನಲ್ಲಿ ನಿಂತ ನಾಗರಿಕರನ್ನು ಕೂಡ ಗುಂಡಿಟ್ಟು ಕೊಲ್ಲುವುದೇ ಮುಂತಾದ ಚಿತ್ರಗಳು ಅವರ ಅಂತಃಕರಣವನ್ನು ಕಲಕಿವೆ. ಈ ಬೆಳವಣಿಗೆಗಳು ಮತ್ತು ಟೆಲ್ ಅವೀವ್‌ನಲ್ಲಿರುವ ಸೆಟ್ಲರ್–ವಸಾಹತುಶಾಹಿ ಸರಕಾರದ ವಿರುದ್ಧ ಜಾಗತಿಕವಾಗಿ ಬೆಳೆಯುತ್ತಿರುವ ಆಂದೋಲನವು ಈಗ ಒಂದೊಮ್ಮೆ ಇಸ್ರೇಲ್ ಪರ ನಿಂತಿದ್ದ ದೇಶಗಳ ಸರಕಾರಗಳ ಪ್ರತಿಕ್ರಿಯೆಯನ್ನು ರೂಪಿಸುತ್ತಿವೆ.

ಸದ್ಯಕ್ಕೆ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳುವ ಸಾಧ್ಯತೆ ಕಾಣಿಸದಿರುವಾಗ, ಬೆಂಜಮಿನ್ ನೆತನ್ಯಾಹು ಸರಕಾರವು ರಾಜತಾಂತ್ರಿಕವಾಗಿ ಹೆಚ್ಚೆಚ್ಚು ಪ್ರತ್ಯೇಕಗೊಳ್ಳುತ್ತಿದೆ. ಅದರ ಅಳಿದುಳಿದ ವಿಶ್ವಾಸಾರ್ಹತೆಯೂ ಕೊಚ್ಚಿ ಹೋಗುತ್ತಿದೆ. ಪ್ಯಾಲೆಸ್ತೀನ್ ಮತ್ತು ಗಾಜಾವು ಯುರೋಪ್ ಮಾತ್ರವಲ್ಲದೆ ಅಮೆರಿಕದಲ್ಲಿ ಕೂಡ ಮುಖ್ಯವಾಹಿನಿ ವಿಷಯವಾಗಿ ಚರ್ಚೆಗೊಳ್ಳುತ್ತಿದೆ. ಅದಕ್ಕಾಗಿಯೇ ಸೆಪ್ಟೆಂಬರ್ ಒಂದು ನಿರ್ಣಾಯಕ ತಿರುವು ಬಿಂದು ಆಗಿದೆ. ವಿಶ್ವ ಸಂಸ್ಥೆಯ ನಿಯಮಗಳ ಪ್ರಕಾರ, ಶಾಶ್ವತ ಸದಸ್ಯ ದೇಶದ ವಿಟೋ ಅಧಿಕಾರವು ಭದ್ರತಾ ಮಂಡಳಿಯನ್ನು ತಡೆಹಿಡಿದಾಗ ವಿಶ್ವ ಸಂಸ್ಥೆ ಮಹಾಧಿವೇಶನ (ಯುಎನ್‌ಜಿಎ) ಕಾರ್ಯಕ್ಕಿಳಿಯಲು ಶಾಂತಿ ಸಂಬಂಧಿಸಿದ ಅಧಿಕಾರಿಗಳ ಒಗ್ಗೂಡುವಿಕೆಯ ವ್ಯವಸ್ಥೆಯು ಅಧಿಕಾರ ನೀಡುತ್ತದೆ. ಈ ವ್ಯವಸ್ಥೆಯ ಮೂಲಕ, ಪ್ಯಾಲೆಸ್ತೀನ್‌ಗೆ ವಿಶ್ವ ಸಂಸ್ಥೆ ರಕ್ಷಣಾಪಡೆಯನ್ನು ಯುಎನ್‌ಜಿಎ ನಿಯೋಜಿಸಬಹುದಾಗಿದೆ. ನಾಗರಿಕರ ಪ್ರಾಣರಕ್ಷಣೆ, ಮಾನವೀಯ ನೆರವು ಲಭ್ಯತೆಯನ್ನು ಖಾತರಿಪಡಿಸುವುದು, ಯುದ್ಧಾಪರಾಧಿಗಳ ಪುರಾವೆಯ ಸಂರಕ್ಷಣೆ ಮತ್ತು ಪುನಶ್ಚೇತನ ಹಾಗೂ ಮರುನಿರ್ಮಾಣಕ್ಕೆ ಬೆಂಬಲ ಒದಗಿಸುವುದು ಇದರ ಉದ್ದೇಶವಾಗಿದೆ.

ಅಂತಾರಾಷ್ಟ್ರೀಯ ನ್ಯಾಯ ನ್ಯಾಯಾಲಯದ (ಇಂಟರ್‌ನ್ಯಾಷನಲ್ ಕೋರ್ಟ್ ಆಫ್ ಜಸ್ಟಿಸ್–ಐಸಿಜೆ) ಆದೇಶಗಳು ಮತ್ತು ವರದಿಗಳನ್ನು ಪಾಲಿಸಲು ಯುಎನ್‌ಜಿಎ ಕಳೆದ ವರ್ಷ ಇಸ್ರೇಲ್‌ಗೆ ವಿಧಿಸಿದ್ದ ಗಡುವು ಮುಗಿಯುತ್ತಾ ಬಂದಿದೆ. ಆದೇಶಗಳನ್ನು ಅನುಸರಿಸದಿದ್ದರೆ 'ಮುಂದಿನ ಕ್ರಮಗಳನ್ನು' ಜರುಗಿಸುವ ಆಶ್ವಾಸನೆಯನ್ನು ನೀಡಲಾಗಿತ್ತು. ಮಧ್ಯಪ್ರವೇಶದ ಸಮಯ ಯಾವತ್ತಿನಿಂದಲೋ ಕಾಯುತ್ತಿದೆ. ಈ ಹಿನ್ನೆಲೆಯಲ್ಲಿ, ಈ ತಿಂಗಳು ನಡೆದ ಯುಎನ್‌ಜಿಎ ಸಭೆಯಲ್ಲಿ ಪ್ಯಾಲೆಸ್ತೀನ್ ಪ್ರಭುತ್ವವನ್ನು ತಾನು ಮಾನ್ಯಮಾಡುವುದಾಗಿ ಬೆಲ್ಜಿಯಂ ಘೋಷಿಸಿರುವುದು ಮಹತ್ವದ ವಿದ್ಯಮಾನವಾಗಿದೆ. ಫ್ರಾನ್ಸ್, ಬ್ರಿಟನ್, ಕೆನಡಾ ಮತ್ತು ಆಸ್ಟ್ರೇಲಿಯಾ ಕೂಡ ಮಾನ್ಯ ಮಾಡಲು ಸಮ್ಮತಿಸಿವೆ. ಇಸ್ರೇಲ್ ಮೇಲೆ 12 ದಿಗ್ಬಂಧನ ವಿಧಿಸಲೂ ಬೆಲ್ಜಿಯಂ ಚಿಂತನೆ ನಡೆಸಿದೆ. ಪಶ್ಚಿಮ ದಂಡೆಯ ಅಕ್ರಮ ವಸಾಹತುಗಳಲ್ಲಿ ತಯಾರಾದ ಎಲ್ಲ ಉತ್ಪನ್ನಗಳ ಮೇಲೆ ನಿರ್ಬಂಧ ಮತ್ತು ಇಸ್ರೇಲಿ ಕಂಪನಿಗಳಿಂದ ಖರೀದಿಸುವ ಸರಕಾರಿ ನೀತಿಯ ಮರುಪರಿಶೀಲನೆಯೂ ಅವುಗಳಲ್ಲಿ ಸೇರಿವೆ. ಜಿನೇವಾ ನಿಯಮಗಳು, ನರಹತ್ಯೆ ಸಮಾವೇಶ ಮತ್ತು ಅಂತಾರಾಷ್ಟ್ರೀಯ ಕಾನೂನಿನ ಇತರ ನಿಯಮಗಳಡಿ ನರಹತ್ಯೆ, ಮನುಕುಲ ವಿರುದ್ಧದ ಅಪರಾಧಗಳು ಮತ್ತು ಇಸ್ರೇಲ್ ನಡೆಸುತ್ತಿರುವ ಯುದ್ಧಾಪರಾಧಗಳನ್ನು ತಡೆಯಬೇಕಾದರೆ ಅವುಗಳನ್ನು ಅನುಸರಿಸಲು ಸದಸ್ಯ ದೇಶಗಳು ಸಿದ್ಧವಿರಬೇಕು. ಮಧ್ಯಪ್ರವೇಶ ಮಾಡಲು ಪ್ಯಾಲೆಸ್ಟೀನ್ ಪ್ರಭುತ್ವವು ಅಧಿಕೃತವಾಗಿ ಆಹ್ವಾನಿಸಿದೆ. ಮತ್ತು ಪ್ಯಾಲೆಸ್ಟೀನಿ ನಾಗರಿಕ ಸಮಾಜವೂ ಪದೇ ಪದೇ ಮನವಿ ಮಾಡಿಕೊಂಡಿದೆ. 1967ರಿಂದಲೂ ಪ್ಯಾಲೆಸ್ಟೀನಿ ಪ್ರದೇಶಗಳನ್ನು ಇಸ್ರೇಲ್ ಆಕ್ರಮಿಸಿಕೊಂಡಿರುವುದು ಮತ್ತು ವಸಾಹತುಗಳನ್ನು (ಸೆಟ್ಲ್‌ಮೆಂಟ್) ಸ್ಥಾಪಿಸಿರುವುದು ಕಾನೂನುಬಾಹಿರ ಎಂದು ಐಸಿಜೆ ಈಗಾಗಲೇ ತೀರ್ಪು ನೀಡಿದೆ. ಗಾಜಾದಲ್ಲಿ ನರಮೇಧ ನಡೆಯುವ ಸಾಧ್ಯತೆಯಿದೆ ಎಂದೂ ಅದು ಹೇಳಿದೆ. ಈ ಎಲ್ಲ ನಿಯಮಗಳು ಒಟ್ಟಾಗಿ ಅಂತಾರಾಷ್ಟ್ರೀಯ ಮಧ್ಯಪ್ರವೇಶವು ಕಾನೂನುಬದ್ಧ ಮಾತ್ರವಲ್ಲದೆ ಅನಿವಾರ್ಯವಾದ ಅಗತ್ಯವಾಗಿ ಮಾಡುತ್ತವೆ.

ಈ ತಿಂಗಳ ಯುಎನ್‌ಜಿಎ ಅಧಿವೇಶನದ ಅಭೂತಪೂರ್ವ ಮಹತ್ವವನ್ನು ಗಣನೆಗೆ ತೆಗೆದುಕೊಂಡರೆ ಅದರಲ್ಲಿ ಭಾಗವಹಿಸಲು

→

ಬಿಹಾರ ಎಸ್‌ಐಆರ್: ಚುನಾವಣಾ ಆಯೋಗಕ್ಕೆ ಸುಪ್ರಿಂ ಕೋರ್ಟ್‌ನಿಂದ ಮತ್ತೊಂದು ನಿರ್ದೇಶನ

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಆಧಾರ್ ಅನ್ನು 12 ನೇ ದಸ್ತಾವೇಜಾಗಿ ಸೇರಿಸುವಂತೆ ಸುಪ್ರೀಂ ಕೋರ್ಟ್ ಭಾರತದ ಚುನಾವಣಾ ಆಯೋಗಕ್ಕೆ ಸಪ್ಟಂಬರ್ 8ರ ವಿಚಾರಣೆಯ ನಂತರ ನಿರ್ದೇಶನ ನೀಡಿದೆ.



ಈ ವಿಚಾರಣೆಗಳ ವೇಳೆಯಲ್ಲಿ ಆರಂಭದಿಂದಲೇ ಆಧಾರ್ ಕಾರ್ಡ್ ಬಗ್ಗೆ ಸಾಕಷ್ಟು ವಾದ-ಪ್ರತಿವಾದಗಳು ನಡೆದು ಅದನ್ನು ಪರಿಗಣನೆಗೆ ತಗೊಳ್ಳಬೇಕು ಎಂದು ಸ್ವತಃ ನ್ಯಾಯಪೀಠವೇ ಮತ್ತೆ ಮತ್ತೆ ಸೂಚಿಸಿದರೂ, ಚುನಾವಣಾ ಆಯೋಗವು ಬುಡಮಟ್ಟದಲ್ಲಿ ಅದನ್ನು ಜಾರಿಗೊಳಿಸಿರಲಿಲ್ಲ ಎಂಬುದು ಸಪ್ಟೆಂಬರ್ 8ರ ವಿಚಾರಣೆಯ ವೇಳೆಯಲ್ಲಿ ಸುಪ್ರಿಂ ಕೋರ್ಟ್ ಗಮನಕ್ಕೆ ಬಂತು. ಅಲ್ಲದೆ, ಆಯೋಗದ ವಕೀಲರು ಅದನ್ನು ಈಗಾಗಲೇ ಸೂಚಿಸಿರುವ ದಾಖಲೆಗಳ ಜೊತೆಯಲ್ಲಿ ಇನ್ನೊಂದು ದಸ್ತಾವೇಜಾಗಿ ಖಚಿತಪಡಿಸಬೇಕು ಎಂಬ ಅರ್ಜಿದಾರರ ಆಗ್ರಹವನ್ನು ವಿರೋಧಿಸಿದರು. ಈ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್‌ನ ಈ ಆದೇಶ ಬಂದಿದೆ ಎಂಬುದು ಗಮನಾರ್ಹ.

ಈ ಮೊದಲು ಆಗಸ್ಟ್ 1ರಂದು ಪ್ರಕಟಿಸಿದ ಕರಡು ಮತದಾರ ಪಟ್ಟಿಯಲ್ಲಿ 65 ಲಕ್ಷ ಹೆಸರುಗಳನ್ನು ಕೈಬಿಟ್ಟಿದ್ದು, ಹಾಗೆ ಕೈಬಿಟ್ಟ ಹೆಸರುಗಳು ಮತ್ತು ಅದಕ್ಕೆ ಕಾರಣಗಳನ್ನು ನಮೂದಿಸುವ ಪಟ್ಟಿಯನ್ನು ರಾಜಕೀಯ ಪಕ್ಷಗಳಿಗೆ ಕೊಟ್ಟಿಲ್ಲ ಎಂದು ಬಿಜೆಪಿ ಬಿಟ್ಟು ಇತರ ಎಲ್ಲ ಪಕ್ಷಗಳು ಹೇಳಿದಾಗ, ನ್ಯಾಯಾಲಯ ಆ ವಿವರಗಳನ್ನು ಕೊಡುವಂತೆ ಆಯೋಗಕ್ಕೆ ನಿರ್ದೇಶನ ನೀಡಬೇಕಾಗಿ ಬಂತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಆ ನಿರ್ದೇಶನವನ್ನು ಪಾಲಿಸದೆ, ಅಂತಹ ವಿವರಗಳನ್ನು ತಾನು ಕೊಡಬೇಕಾಗಿಲ್ಲ ಎಂದು ಆಯೋಗ ವಾದಿಸಿದಾಗ, ಅದನ್ನು ಒಪ್ಪದ ನ್ಯಾಯಪೀಠ ಆಗಸ್ಟ್ 19ರೊಳಗೆ ಅವನ್ನೆಲ್ಲ ಒದಗಿಸುವಂತೆ ಮಧ್ಯಂತರ ಆದೇಶವನ್ನೇ ನೀಡಬೇಕಾಯಿತು ಎಂಬುದನ್ನೂ ಕೂಡ ನೆನಪಿಸಿಕೊಳ್ಳಬಹುದು.

ಸಪ್ಟೆಂಬರ್ 1ರಂದು, ಚುನಾವಣಾ ಆಯೋಗ ದಾವೆಗಳನ್ನು/ಆಕ್ಷೇಪಣೆ/ತಿದ್ದುಪಡಿಗಳನ್ನು ಮೊದಲು ನಿಗದಿಪಡಿಸಿದ ಗಡುವಾದ ಸಪ್ಟೆಂಬರ್ 1ರ ನಂತರವೂ ಸಲ್ಲಿಸಬಹುದು ಎಂದೂ ನ್ಯಾಯಾಲಯಕ್ಕೆ ತಿಳಿಸಬೇಕಾಗಿ ಬಂತು. ಸಪ್ಟೆಂಬರ್ 8ರಂದು ವಿಚಾರಣೆ ಮುಂದುವರೆದಾಗ, ದಾವೆಗಳು/ಆಕ್ಷೇಪಣೆ/ತಿದ್ದುಪಡಿಗಳಿಗೆ ಸಮಯ ಮೀರುತ್ತ ಬರುತ್ತಿದೆ, ಆಧಾರ್ ಸ್ವೀಕರಿಸಲಾಗುತ್ತದೋ ಇಲ್ಲವೋ ಎಂಬುದನ್ನು ಖಚಿತ ಪಡಿಸಬೇಕು ಎಂದು ಕಪಿಲ್ ಸಿಬಲ್ ಹೇಳಿದರು. ನ್ಯಾಯಾಧೀಶರ ಪ್ರಶ್ನೆಗೆ ಉತ್ತರಿಸುತ್ತ, ಅದನ್ನು ಪೌರತ್ವದ ಪುರಾವೆಯಾಗಿ ಕೇಳುತ್ತಿಲ್ಲ, ಮತದಾನ ಮಾಡಲು ಅರ್ಹಗೊಳಿಸುವ ನಿವಾಸದ ಪುರಾವೆಯಾಗಿ ಕೇಳುತ್ತಿದ್ದೇವೆ ಎಂದು ಹೇಳಿದರು.

ಸುಪ್ರಿಂ ಕೋರ್ಟ್ 11 ದಸ್ತಾವೇಜುಗಳಿಗೆ ಪರ್ಯಾಯವಾಗಿ ಆಧಾರ್ ಅನ್ನು ಬಳಸಬಹುದು ಎಂದು ಸ್ಪಷ್ಟವಾಗಿ ಹೇಳಿದ್ದರೂ ಚುನಾವಣಾ ಆಯೋಗದಿಂದ ಆಧಾರ್ ಅನ್ನು ಸ್ವೀಕರಿಸುವಂತೆ ಸೂಚನೆ ಹೋಗಿರಲಿಲ್ಲ, ಬಿಎಲ್‌ಒಗಳು ಆಧಾರ್ ಅನ್ನು ಪುರಾವೆಯಾಗಿ ಸ್ವೀಕರಿಸುತ್ತಿರಲಿಲ್ಲ, ದಾವೆಗಳು ಮತ್ತು ಆಕ್ಷೇಪಣೆಗಳಿಗೆ ಆಯೋಗ ಸೂಚಿಸಿರುವ 11 ದಸ್ತಾವೇಜುಗಳನ್ನು ಮಾತ್ರವೇ ಸ್ವೀಕರಿಸಲಾಗುವುದು ಎಂದು ಸಹಿಹಾಕಿದ ನೋಟೀಸುಗಳನ್ನು ಜಾರಿ ಮಾಡಿದ್ದರು. ಅಷ್ಟೇ ಅಲ್ಲ, ಆಧಾರ್ ಸ್ವೀಕರಿಸಿದ ಬಿಎಲ್‌ಒಗಳ ವಿರುದ್ಧ ಆಗಲೇ ಶಿಸ್ತು ಕಲಾಪಗಳು ಆರಂಭವಾಗಿದ್ದವು ಎಂಬದನ್ನು ನ್ಯಾಯಾಲಯದ ಗಮನಕ್ಕೆ ತರಲಾಯಿತು. ತಮ್ಮ ಬಳಿ ವಿವಿಧ ಜಿಲ್ಲೆಗಳಲ್ಲಿ ಆಧಾರ್‌ನೊಂದಿಗೆ ಅರ್ಜಿ ಸಲ್ಲಿಸುವಲ್ಲಿ ವಿಫಲರಾದ 24 ಮಂದಿಯ ಅಫಿಡವಿಟ್‌ಗಳು ಇವೆ ಎಂದೂ ಅರ್ಜಿದಾರರ ವಕೀಲರುಗಳು ನ್ಯಾಯಾಲಯಕ್ಕೆ ತಿಳಿಸಿದರು.

ಚುನಾವಣಾ ಆಯೋಗದ ವಕೀಲ ರಾಕೇಶ್ ದ್ವಿವೇದಿ ಆಧಾರ್ ಅನ್ನು ಪೌರತ್ವದ ದಾಖಲೆಯಾಗಿ ಸ್ವೀಕರಿಸಲಾಗುತ್ತಿಲ್ಲ ಎಂದು ದೃಢಪಡಿಸುತ್ತ. ಆಧಾರ್ ನಿವಾಸದ ಪುರಾವೆಯೇನೋ ಹೌದು, ಆದರೆ ಚುನಾವಣಾ ಆಯೋಗವು ಮತದಾರ ಪಟ್ಟಿಯಲ್ಲಿ ಸೇರಿಸಲು ಪೌರತ್ವದ ಬಗ್ಗೆ ನೋಡಬಹುದಾಗಿದೆ ಎಂಬ ತಮ್ಮ ಹಳೆಯ ವಾದವನ್ನು ಪುನರುಚ್ಚರಿಸಿದರು.

ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿಯವರು "ಅರ್ಜಿದಾರರು ಸಹ ಆಧಾರ್ ಪೌರತ್ವದ ದಾಖಲೆ ಅಲ್ಲ ಎಂದು ಹೇಳುತ್ತಿದ್ದಾರೆ. ಶಾಸನದ ಪ್ರಕಾರವೂ ಕೂಡ ಆಧಾರ್ ಪೌರತ್ವದ ದಾಖಲೆ ಅಲ್ಲ. ನ್ಯಾಯಾಲಯ ಹಲವು ಬಾರಿ ಆಧಾರ್ ಅನ್ನು ಪರಿಗಣನೆಗೆ ತಗೊಳ್ಳುವಂತೆ ಹೇಳಿದೆ" ಎಂದು ನೆನಪಿಸಬೇಕಾಯಿತು. ಆಧಾರ್ ಜನತಾ ಪ್ರಾತಿನಿಧ್ಯ ಕಾಯ್ದೆಗೆ ಹೊರತಾದ್ದೇನೂ ಅಲ್ಲ, ಕಾಯ್ದೆಯ ಒಂದು ಅಂಶ ನಿವಾಸದ ಪುರಾವೆಯಾಗಿ ಅದಕ್ಕೆ ಅವಕಾಶ ನೀಡುತ್ತದೆ ಎಂದೂ ಅವರು ಹೇಳಿದರು.

ಚುನಾವಣಾ ಆಯೋಗ ಸೂಚಿಸಿರುವ ಎಲ್ಲಾ 11 ದಸ್ತಾವೇಜುಗಳು ಆಧಾರ್‌ನಂತೆ ಗುರುತು, ನಿವಾಸದ ದಾಖಲೆಗಳಾಗಿವೆ ಮತ್ತು ಪೌರತ್ವದ್ದಲ್ಲ, ಅರ್ಜಿದಾರರು ಆಧಾರ್ ಅನ್ನು ಕೂಡ ಸೇರಿಸಿ ಎಂದಷ್ಟೇ ಕೇಳುತ್ತಿದ್ದಾರೆ. ಆಧಾರ್ ಪೌರತ್ವದ ಪುರಾವೆಯಲ್ಲ ಎಂದು ಹೇಳುತ್ತಲೇ ಸುಪ್ರಿಂ ಕೋರ್ಟ್ ಹಿಂದಿನ ತನ್ನ ಆದೇಶದಲ್ಲಿ ಜನತಾ ಪ್ರಾತಿನಿಧ್ಯ ಕಾಯ್ದೆಯ ವಿಭಾಗ 23(4) ಮತ್ತು (5)ನ್ನು ಉಲ್ಲೇಖಿಸುತ್ತ, ಅದು ಒಬ್ಬರು ವ್ಯಕ್ತಿಯ ಗುರುತನ್ನು ಸಾಬೀತುಪಡಿಸುವ ಒಂದು ದಸ್ತಾವೇಜು ಎಂದೂ ಹೇಳಿದೆ. ಆದ್ದರಿಂದ ಆಧಾರ್ 12ನೇ ದಸ್ತಾವೇಜು ಎಂದು ನ್ಯಾಯಾಲಯ ಘೋಷಿಸಬೇಕು ಎಂದು ಕಪಿಲ್ ಸಿಬಲ್ ಮತ್ತು ಗೋಪಾಲ್ ಶಂಕರನಾರಾಯಣನ್ ನ್ಯಾಯಾಲಯವನ್ನು ಕೋರಿದರು.

ಇದಕ್ಕೆ ಎದುರಾಗಿ ವಾದಿಸುತ್ತ ಚುನಾವಣಾ ಆಯೋಗದ ವಕೀಲರಾದ ರಾಕೇಶ್ ದ್ವಿವೇದಿ, ಆಧಾರ್‌ಗೆ ಪೌರತ್ವದ ಪುರಾವೆಯೂ ಆಗಿರುವ ಪಾಸ್‌ಪೋರ್ಟ್‌ನಂತಹ ಸ್ಥಾನಮಾನವನ್ನು ನೀಡಲು ಸಾಧ್ಯವಿಲ್ಲ ಎಂದು ವಾದಿಸುತ್ತ, ಪಾಸ್‌ಪೋರ್ಟ್ ಸೇರಿದಂತೆ ಇತರ 11 ದಾಖಲೆಗಳೊಂದಿಗೆ ಆಧಾರ್ ಅನ್ನು ಸೇರಿಸುವುದನ್ನು ಆಯೋಗ ಆಕ್ಷೇಪಿಸುತ್ತದೆ ಎಂದು ಹೇಳಿದರು.

ಈ ತರ್ಕವನ್ನು ಪ್ರಶ್ನಿಸುತ್ತ ಅರ್ಜಿದಾರರು ಚುನಾವಣಾ ಆಯೋಗದ 11 ದಸ್ತಾವೇಜುಗಳಲ್ಲಿ 9 ಪೌರತ್ವದ ದಾಖಲೆಗಳಲ್ಲ, ಹಾಗಿರುವಾಗ ಆಧಾರ್ ಅನ್ನು ಏಕೆ ಸೇರಿಸಬಾರದು ಎಂದು ಪ್ರಶ್ನಿಸಿದರು. ಆಯೋಗದ ಫಾರ್ಮ್ 6 ಸ್ವತಃ ಆಧಾರ್ ಅನ್ನು ಒಪ್ಪುತ್ತದೆ ಎಂದು ಗೋಪಾಲ್ ಶಂಕರನಾರಾಯಣನ್ ಹೇಳಿದರು.

ಈ ಎಲ್ಲ ವಾದ-ಪ್ರತಿವಾದಗಳ ನಂತರ ಸುಪ್ರಿಂ ಕೋರ್ಟ್ ನ್ಯಾಯಪೀಠ ಆಧಾರ್ ಅನ್ನು 12ನೇ ದಸ್ತಾವೇಜಾಗಿ ಪರಿಗಣಿಸಬೇಕೆಂದು ಆದೇಶ ನೀಡಿದೆ. ಈ ವಿಷಯದಲ್ಲಿ ಚುನಾವಣಾ ಆಯೋಗ ಅದೇ ದಿನ ಸೂಚನೆಗಳನ್ನು ನೀಡಬೇಕು ಎಂದಿರುವ ಈ ಸುಪ್ರೀಂ ಕೋರ್ಟ್ ಆದೇಶ ಕೂಡ ಆಧಾರ್ ಅನ್ನು ಗುರುತಿನ ಪುರಾವೆಯಾಗಿ ಮಾತ್ರ ಬಳಸಲಾಗುವುದು ಎಂದು ಪುನರುಚ್ಚರಿಸುತ್ತದೆ. ಇತರ ದಾಖಲೆಗಳಂತೆ ಸಲ್ಲಿಸಿದ ಆಧಾರ್‌ನ ದೃಢೀಕರಣ ಮತ್ತು ಋಜುತ್ವವನ್ನು ಪರಿಶೀಲಿಸಲು ಅಧಿಕಾರಿಗಳಿಗೆ ಅರ್ಹತೆ ಇರುತ್ತದೆ ಎಂದು ನ್ಯಾಯಾಲಯ ನಿರ್ದೇಶಿಸಿದೆ. ಈ ಆದೇಶವನ್ನು ಭಾರತದ ಚುನಾವಣಾ ಆಯೋಗದ ವೆಬ್‌ಸೈಟಿನಲ್ಲಿ ಪ್ರಕಟಿಸಬೇಕು ಎಂದೂ ನ್ಯಾಯಮೂರ್ತಿಗಳು ಆಯೋಗದ ವಕೀಲರಿಗೆ ಹೇಳಿದ್ದಾರೆ.

ಈ ನಡುವೆ ಸೆಪ್ಟೆಂಬರ್ 1ರ ಆದೇಶದಲ್ಲಿ ಉಲ್ಲೇಖಿಸಿದ್ದ ಪಾರಾ-ಲೀಗಲ್ ಅಂದರೆ ಅರೆ-ನ್ಯಾಯಿಕ ಸ್ವಯಂಸೇವಕರ ನೇಮಕ ಆಗಿಲ್ಲ ಎಂದು ಅರ್ಜಿದಾರರು ನ್ಯಾಯಪೀಠದ ಗಮನಕ್ಕೆ ತಂದಾಗ ಇದು ಚುನಾವಣಾ ಆಯೋಗಕ್ಕೆ ಸೇರಿದ್ದಲ್ಲ ಎಂದು ಆಯೋಗದ ವಕೀಲರು ಹೇಳಿದರು. ರಾಜ್ಯಾದ್ಯಂತ ಪ್ರತಿ ಜಿಲ್ಲೆಯಲ್ಲಿ ವ್ಯಕ್ತಿಗಳು ಮತ್ತು ರಾಜಕೀಯ ಪಕ್ಷಗಳು ದಾವೆಗಳು, ಆಕ್ಷೇಪಣೆಗಳು ಮತ್ತು ತಿದ್ದುಪಡಿಗಳನ್ನು ಸಲ್ಲಿಸಲು ಸಹಾಯ ಮಾಡಲು ಪಾರಾ-ಲೀಗಲ್ ಸ್ವಯಂಸೇವಕರನ್ನು ಸಕ್ರಿಯಗೊಳಿಸುವಂತೆ ಬಿಹಾರ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಿಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿತ್ತು. ಈ ಬಗ್ಗೆ ಸೆಪ್ಟೆಂಬರ್ 8ರ ವಿಚಾರಣೆಯಲ್ಲಿ ನ್ಯಾಯಪೀಠ ಏನೂ ಹೇಳಿದಂತಿಲ್ಲ. ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 15 ಕ್ಕೆ ನಡೆಸಲಾಗುವುದು ಎಂದು ತಿಳಿಸಲಾಗಿದೆ.

ಇದುವರೆಗಿನ ವಿಚಾರಣೆಗಳಲ್ಲಿ ನ್ಯಾಯಪೀಠದ ಎದುರು ಚುನಾವಣಾ ಆಯೋಗ ನಡೆದುಕೊಂಡಿರುವ ರೀತಿಯನ್ನು ಕಂಡರೆ, ದೇಶಾದ್ಯಂತ ನಡೆಸಬೇಕೆಂದಿರುವ ಈ ವಿಶೇಷ ತೀವ್ರ ಪರಿಷ್ಕರಣೆ ಎಂಬ ಪ್ರಕ್ರಿಯೆಯ ಹಿಂದಿರುವ ನಿಜ ಉದ್ದೇಶದ ಬಗ್ಗೆ ಸಂದೇಹ ಮತ್ತಷ್ಟು ಗಟ್ಟಿಯಾಗುವಂತೆ ಕಾಣುತ್ತದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. ಅಲ್ಲದೆ, ಈ ಎಸ್‌ಐಆರ್‌ಗೆ ನ್ಯಾಯಾಂಗದಿಂದ ಅಡ್ಡಿಯೇನೂ ಬರುವುದಿಲ್ಲ ಎಂಬ ವಿಶ್ವಾಸವನ್ನು ಆಯೋಗ ಹೊಂದಿದ್ದಂತೆ ಕಾಣುತ್ತದೆ, ಅಥವ ಅಂತಹ ವಿಶ್ವಾಸವನ್ನು ಅದಕ್ಕೆ ಮೂಡಿಸಲಾಗಿರಬಹುದೇ ಎಂದೂ ಅವರು ಕೇಳುತ್ತಿದ್ದಾರೆ.

ಆದರೂ, ಆಧಾರ್ ಪೌರತ್ವದ ಪುರಾವೆ ಅಲ್ಲ ಎಂದು ಹೇಳುತ್ತಲೇ ಅದನ್ನು ಎಸ್‌ಐಆರ್‌ನಲ್ಲಿ 12ನೇ ದಸ್ತಾವೇಜಾಗಿ ಪರಿಗಣಿಸಬೇಕು ಎಂದಿರುವುದು, ಇದು ಪೌರತ್ವ ಪರೀಕ್ಷಣೆಯ ಪ್ರಕ್ರಿಯೆ ಅಲ್ಲ, ಪೌರತ್ವ ಪರೀಕ್ಷಣೆ ಚುನಾವಣಾ ಆಯೋಗದ ವ್ಯಾಪ್ತಿಗೆ ಬರುವುದಿಲ್ಲ ಎಂದು ಪರೋಕ್ಷವಾಗಿಯಾದರೂ ಸೂಚಿಸಿದಂತಾಗಿದೆಯಲ್ಲವೇ ಎಂದು ಇನ್ನು ಕೆಲವು ವೀಕ್ಷಕರು ಕೇಳುತ್ತಿದ್ದಾರೆ. ●

→

ಪ್ಯಾಲೆಸ್ಟೀನಿ ಸರಕಾರಕ್ಕೆ ಅನುಮತಿ ನಿರಾಕರಿಸುವ ಡೊನಾಲ್ಡ್ ಟ್ರಂಪ್ ಆಡಳಿತ ಕೈಗೊಂಡ ನಿರ್ಧಾರವು ಅದರ ತೀರಾ ಹತಾಶೆಯನ್ನು ತೋರಿಸುತ್ತದೆ. ಅಮೆರಿಕ ಸಾಮ್ರಾಜ್ಯದ ಪ್ರಭಾವವು ಮರೆಯಾಗುತ್ತಿರುವುದು ಹೆಚ್ಚೆಚ್ಚಾಗಿ ಎದ್ದು ಕಾಣುತ್ತಿದೆ. ಇತ್ತೀಚಿನ ಬ್ರಿಕ್ಸ್ ಮತ್ತು ಎಸ್‌ಸಿಒ ಶೃಂಗಸಭೆಗಳ ಹಿನ್ನೆಲೆಯಲ್ಲಿ ಇದು ತುಂಬಾ ಸ್ಪಷ್ಟವಾಗಿದೆ. ಕುಗ್ಗುತ್ತಿರುವ ಪ್ರಭಾವದ ನಡುವೆಯೂ ಇಂಥ ಕಸರತ್ತುಗಳನ್ನು ನಡೆಸಿದರೆ ಅಮೆರಿಕ ಮತ್ತು ಇಸ್ರೇಲ್‌ಗಳೆರಡರ ಅಳಿದುಳಿದ ವಿಶ್ವಾಸಾರ್ಹತೆಯೂ ಇನ್ನಷ್ಟು ಕುಸಿಯುತ್ತದೆ. 'ಪ್ರಜಾಪ್ರಭುತ್ವದ ಸಂರಕ್ಷಕ' ಎಂಬ ಅವರ ಸ್ವಘೋಷಿತ ಪಾತ್ರವು ಜಾಗತಿಕವಾಗಿ ಕುಸಿಯುವ ಅಪಾಯವಿದೆ.

ಈ ನಡುವೆ, ಇಸ್ರೇಲ್‌ನ ಅತಿ ಬಲಪಂಥೀಯ ಹಣಕಾಸು ಸಚಿವ ಬಿಝಲೆಲ್ ಸ್ಮಾಟ್ರಿಚ್ ದ್ವಿಪಕ್ಷೀಯ ಒಪ್ಪಂದವೊಂದಕ್ಕೆ ಸಹಿಹಾಕಲು ಭಾರತದಲ್ಲಿದ್ದಾರೆ. ತನ್ನ ಕಟ್ಟರ್ ಪಂಥಿಯ ಹೇಳಿಕೆಗಳಿಗಾಗಿ ಸ್ಮಾಟ್ರಿಚ್ ಅನೇಕ ಪಾಶ್ಚಿಮಾತ್ಯ ಮತ್ತು ಐರೋಪ್ಯ ಒಕ್ಕೂಟದ ಖಂಡನೆ ಹಾಗೂ ನಿರ್ಬಂಧಗಳಿಗೆ ಒಳಗಾಗಿದ್ದಾರೆ.

ಪ್ಯಾಲೆಸ್ಟೀನ್ ಕುರಿತ ತಿಯಾಂಜಿನ್ ಗೊತ್ತುವಳಿಯನ್ನು ಭಾರತ ಅನುಮೋದಿಸಿದ್ದರೂ ಸ್ಮಾಟ್ರಿಚ್‌ರನ್ನು ಸ್ವಾಗತಿಸುವುದು ಜಾಗತಿಕ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿದೆ.

ಇಸ್ರೇಲ್‌ನೊಂದಿಗಿನ ಮಿಲಿಟರಿ ಮತ್ತು ಭದ್ರತಾ ಒಪ್ಪಂದಗಳನ್ನು ಕೊನೆಗೊಳಿಸುವಂತೆ ಹಾಗೂ ನರಹತ್ಯೆಯನ್ನು ಎದುರಿಸುತ್ತಿರುವ ಪ್ಯಾಲೆಸ್ಟೀನ್ ಜನರೊಂದಿಗೆ ದೃಢವಾಗಿ ನಿಲ್ಲುವಂತೆ ಒತ್ತಾಯಿಸುವ ಪ್ರಯತ್ನಗಳನ್ನು ಭಾರತದ ಜನರು ಮಾಡಬಹುದು ಹಾಗೂ ದುಪ್ಪಟ್ಟುಗೊಳಿಸಬೇಕು. ಯಾವತ್ತೂ ಈ ರೀತಿ ಆಗುವುದು ಬೇಡ ಎಂದು ದೃಢೀಕರಿಸುವ ಸಮಯ ಇದಾಗಿದೆ.

ಸೆಪ್ಟೆಂಬರ್ 7ನೇ ತಾರೀಖು ಮದ್ದೂರಿನ ಚನ್ನೇಗೌಡ ಬಡಾವಣೆಯ ನಿವಾಸಿಗಳು ತಾವೇ ಕೂರಿಸಿದ್ದ ಗಣೇಶನನ್ನು ವಿಸರ್ಜಿಸಲು ರಾತ್ರಿ 8 ಗಂಟೆಯ ಸಮಯದಲ್ಲಿ ಮೆರವಣಿಗೆ ಹೊರಟಿದ್ದರು. ಮೆರವಣಿಗೆ ಚನ್ನೇಗೌಡ ಬಡಾವಣೆಗೆ ಹೊಂದಿಕೊಂಡೇ ಇರುವ ರಾಮ್ ರಹೀಮ್ ನಗರದ ಮಸೀದಿಯ ಎದುರು ಬಂದಾಗ, ಗಣೇಶನ ಭಕ್ತರಿಗೆ ಗಣೇಶನೇ ಮೈಮೇಲೆ ಬಂದಂತೆ, ಅರ್ಧ ಗಂಟೆಗೂ ಹೆಚ್ಚು ಕಾಲ ಬೇಕಾದ ಭಾವ, ಭಂಗಿಯಲ್ಲಿ ನೃತ್ಯ ಅರಚಾಟ, ಕಿರುಚಾಟ ನಡೆಸಿದರು. ಇಡೀ ಜಿಲ್ಲೆ ಮತ್ತು ರಾಜ್ಯದ ಎಲ್ಲಾ ಕಡೆ ನಿಷೇಧವಿದ್ದರೂ ಡಿಜೆ ಹಾಕಿಕೊಂಡೇ ಕುಣಿಯುತಿದ್ದ "ಭಕ್ತ"ರನ್ನು ಪೊಲೀಸರು ಅಲ್ಲಿಂದ ಮುಂದೆ ಕಳುಹಿಸಿದರು. ಮೆರವಣಿಗೆ ಐವತ್ತು ಮೀಟರ್ ಮುಂದೆ ಹೋಗುತ್ತಿದಂತೆ ಮೆರವಣಿಗೆಯ ಒಳಗೆ ಕಲ್ಲೊಂದು ತೂರಿ ಬಂತು. ಒಂದು ಕಲ್ಲು ತೂರಿ ಬಂದದ್ದೇ ನೆಪವಾಗಿ ಭಕ್ತರು ಮಸೀದಿಯ ಮೇಲೆ ಕಲ್ಲಿನ ಮಳೆಯನ್ನೇ ಕರೆದರು. ಪೊಲೀಸರು ಎಲ್ಲವನ್ನೂ ನಿಭಾಯಿಸಿ ಮೆರವಣಿಗೆಯನ್ನು ಮುಂದೆ ಸಾಗಹಾಕಿದರು.



ಟಿ.ಎಲ್.ಕೃಷ್ಣೇಗೌಡ

ಕಿಡಿಯನ್ನೇ ಕಾಡ್ಗಿಚ್ಚಾಗಿಸಿದ ಬಿಜೆಪಿ

ಬೆಂದು ಬೂದಿಯಾಗುತ್ತಿರುವ ಜನತೆಯ ಬದುಕು ಮತ್ತು ಜೆಡಿಎಸ್

ಈ ಸುದ್ದಿ ಸಂಘ ಪರಿವಾರದ ರಣಹದ್ದುಗಳಿಗೆ ಸಿಕ್ಕಿತೋ ಅಥವಾ ಇಂತಹ ಘಟನೆಯೊಂದರ ನಿರೀಕ್ಷೆಯಲ್ಲಿ ಕಾದಿದ್ದರೋ... ಪೇಟೆ ಬೀದಿಯ ಮುಖ್ಯ ರಸ್ತೆಯಲ್ಲಿರುವ ಮಸೀದಿಯ ಮುಂದೆ ಮುಲ್ಲಾಗಳನ್ನು ಬಂಧಿಸಬೇಕೆಂದು 'ಜೈಶ್ರೀರಾಮ್' ಘೋಷಣೆ ಕೂಗುತ್ತಾ ಧರಣಿ ಆರಂಭಿಸಿಯೇ ಬಿಟ್ಟರು. ಹೆಚ್ಚುವರಿ ಸಿಬ್ಬಂದಿಯೊಡನೆ ಪೊಲೀಸರು ಹೇಗೋ ಪರಿಸ್ಥಿತಿಯನ್ನು ನಿಯಂತ್ರಿಸಿದರು.

ಈ ಘಟನೆಗಳು ನಡೆಯುತ್ತಿದ್ದಂತೆಯೇ ರಾತ್ರಿಯೇ ಮದ್ದೂರು ಪಟ್ಟಣ ಬಂದ್‌ಗೆ ಕರೆನೀಡಿ, ಕಲ್ಲು ತೂರಿದವರ ಮೇಲೆ ಕ್ರಮಕೈಗೊಳ್ಳಲು ಒತ್ತಾಯಿಸಿ ಪ್ರತಿಭಟನೆಯನ್ನೂ ಆಯೋಜಿಸಿ ಬಿಟ್ಟರು. ಪ್ರತಾಪ್ ಸಿಂಹ, ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಬಿಜೆಪಿ, ಜೆಡಿಎಸ್ ಪಕ್ಷದ ದೊಡ್ಡ, ದೊಡ್ಡ ನಾಯಕರೂ ಆಗಮಿಸಿ ಬಿಟ್ಟರು.

ಸರ್ಕಾರಿ ಪ್ರೌಢಶಾಲಾ ಆವರಣದಿಂದ ಮೆರವಣಿಗೆ ಆರಂಭಿಸಿದ ಬಿಜೆಪಿ ಮತ್ತು ಸಂಘ ಪರಿವಾರದ ಗುಂಪು, ಪೇಟೆ ಬೀದಿಯಲ್ಲಿರುವ ಮಸೀದಿಯ ಮೇಲೆ ಕಲ್ಲು ತೂರಿತು. ಅಲ್ಪಸಂಖ್ಯಾತರ ಧಾರ್ಮಿಕ ಬಾವುಟ ಮತ್ತು ಬಂಟಿಂಗ್ಸ್‌ಗಳನ್ನು ಕಿತ್ತು ಎಸೆಯಲಾಯಿತು. ಮುಸ್ಲಿಮರ ಬಾವುಟ ಇದ್ದ ಜಾಗದಲ್ಲಿ ಕೇಸರಿ ಧ್ವಜ ಏರಿಸಿದರು, ಬುದ್ಧಿ ಮತ್ತು ಭಾವದ ಮೇಲೆ ನಿಯಂತ್ರಣ ಕಳೆದುಕೊಂಡ ಕೇಸರಿ ಶಾಲುದಾರಿಗಳು ಬಾಯಿಗೆ ಬಂದಂತೆ ಮಾತನಾಡಿ ತಮ್ಮ ತೀಟೆ ತೀರಿಸಿಕೊಂಡರು. ಅಲ್ಲಿಂದ ಸಾಗಿದ ಮೆರವಣಿಗೆ ತಾಲ್ಲೂಕು ಕಚೇರಿಯ ಬಳಿ ಸಮಾವೇಶಗೊಂಡಿತು. ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಬಿಜೆಪಿಯ ಪ್ರತಾಪ್ ಸಿಂಹ ಮತ್ತು ಜೆಡಿಎಸ್‌ನ ನಿಖಿಲ್ ಕುಮಾರಸ್ವಾಮಿ ತಮ್ಮಲ್ಲಿ ತುಂಬಿಕೊಂಡಿದ್ದ ವಿಷವನ್ನೆಲ್ಲಾ ಮುಸಲ್ಮಾನರ ಮೇಲೆ ಕಾರಿಕೊಂಡರು.

ಘಟನೆಯ ಹಿನ್ನೆಲೆ

ಈಗ್ಗೆ ಎರಡು ವರ್ಷಗಳ ಹಿಂದೆ ಅಲ್ಲೊಂದು ನೂತನ ಮಸೀದಿ ನಿರ್ಮಾಣ ಮಾಡಲಾಗಿದೆ. ಮಸೀದಿ ನಿರ್ಮಾಣವಾಗಿ ಮುಸಲ್ಮಾನರ ಧಾರ್ಮಿಕ ಆಚರಣೆಗಳು ಆರಂಭವಾದ ತಕ್ಷಣವೇ ಅಲ್ಲಿನ ದಲಿತ, ಹಿಂದುಳಿದ, ದಿನಗೂಲಿ ಜನಗಳನ್ನು ಮುಸಲ್ಮಾನರ ವಿರುದ್ಧ ಬಳಸಿಕೊಳ್ಳುವ ಸಂಚನ್ನು ಸಂಘ ಪರಿವಾರ ಹೊಸೆದಿದೆ. ಸಿದ್ದಾರ್ಥ ನಗರ, ಬಸವೇಶ್ವರ ನಗರ, ಚನ್ನೇಗೌಡ ಬಡಾವಣೆಯ ನಿವಾಸಿಗಳನ್ನು ಎತ್ತಿಕಟ್ಟಿ ಮಸೀದಿ ಮತ್ತು ಮುಸಲ್ಮಾನರ ವಿರುದ್ಧ ಇಲ್ಲ ಸಲ್ಲದ ನೂರಾರು ದೂರು ಮತ್ತು ಆಕ್ಷೇಪಣೆಗಳನ್ನು ಉಲ್ಲೇಖಿಸಿ ತಹಶಿಲ್ದಾರರಿಂದ ಪ್ರಧಾನಿಯವರಗೆ ದೂರು ನೀಡಲಾಗಿದೆ.

ಗೌರಿ ಲಂಕೇಶ್ ಹತ್ಯೆ ಆರೋಪಿ ಕೆ.ಟಿ. ನವೀನ್ ಕುಮಾರ್ ತನ್ನ ಬಂಟನೊಬ್ಬನ ಮೂಲಕ ಅಲ್ಲಿನ ನಿವಾಸಿಗಳು, ಮುಖ್ಯವಾಗಿ ಯುವಕರ ಜೊತೆಗೆ ಸಂಪರ್ಕ ಸಾಧಿಸಿದ್ದಾನೆ. ಅವರನ್ನು ಬಳಸಿಕೊಂಡು ಈದ್ ಮಿಲಾದ್ ಸಮಯದಲ್ಲಿ ಮಸೀದಿ ಮತ್ತು ಮಸೀದಿ ಇರುವ ಬೀದಿಗೆ ವಿದ್ಯುತ್ ಅಲಂಕಾರ ಮಾಡುವುದನ್ನೂ ತಡೆದಿದ್ದಾರೆ. ಮುಸಲ್ಮಾನರ ಈದ್ ಮೆರವಣಿಗೆಗೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹಿಂದಿನ ವರ್ಷ ಆರಾಮವಾಗಿ ಜರುಗಿದ್ದ ಈದ್ ಆಚರಣೆಗೆ ಈ ವರ್ಷ ಆಕ್ಷೇಪ ಮತ್ತು ತೊಂದರೆ ಉಂಟಾಗಿರುವುದರ ಹಿಂದೆ ಕೆ.ಟಿ. ನವೀನ್ ಕುಮಾರ್ ಮತ್ತು ಆತನ ಸಂಘ ಪರಿವಾರ ಕೆಲಸ ಮಾಡಿರುವ ಸಾಧ್ಯತೆಗಳಿವೆ. ಪೊಲೀಸ್ ಇಲಾಖೆ ಕೂಡಲೇ ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕಾಗಿದೆ.

ಪುಟ 11 ಕ್ಕೆ



ಮದ್ದೂರು ಗಲಭೆ: ತಪ್ಪಿತಸ್ಥರ ಮೇಲೆ ಕಠಿಣ ಕ್ರಮಕೈಗೊಳ್ಳಲು ಸಿಪಿಐ(ಎಂ) ಆಗ್ರಹ

ಮದ್ದೂರು ಪಟ್ಟಣದಲ್ಲಿ ಉದ್ವಿಗ್ನ ಸ್ಥಿತಿಗೆ ಕಾರಣರಾದ ಕಿಡಿಗೇಡಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು, ಗಣೇಶನ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆಸಲು ಪಿತೂರಿ ನಡೆಸಿದವರನ್ನು ಕಂಡುಹಿಡಿದು ಶಿಕ್ಷಿಸಬೇಕೆಂದು ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರವನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಒತ್ತಾಯಿಸಿದೆ.

ಇಂತಹ ಉದ್ವಿಗ್ನ ಸ್ಥಿತಿಯನ್ನು ತನ್ನ ಕೋಮುವಾದಿ ರಾಜಕೀಯಕ್ಕೆ ಬಳಸಿಕೊಳ್ಳುವ ಬಿಜೆಪಿಯ ಹುನ್ನಾರಗಳನ್ನು ರಾಜ್ಯದ ಜನತೆ ಅರ್ಥಮಾಡಿಕೊಂಡು, ಕೋಮುವಾದಕ್ಕೆ ಬಲಿಯಾಗದೆ ಶಾಂತಿ, ಸೌಹಾರ್ದತೆ ಕಾಪಾಡಿಕೊಳ್ಳಬೇಕೆಂದು ಸಾರ್ವಜನಿಕರಲ್ಲಿ ಸಿಪಿಐ(ಎಂ) ಮನವಿ ಮಾಡಿದೆ. ಮದ್ದೂರು ಪಟ್ಟಣದಲ್ಲಿ ಗಣೇಶ ವಿಸರ್ಜನಾ ಮೆರವಣಿಗೆಯ ಮೇಲೆ ಕಲ್ಲು ತೂರಿದ ಘಟನೆಯಿಂದ ಉಂಟಾಗಿರುವ ಉದ್ವಿಗ್ನತೆ ಸೌಹಾರ್ದತೆಗೆ ದಕ್ಕೆ ಉಂಟು ಮಾಡಿದೆ, ಉದ್ವಿಗ್ನತೆಯನ್ನು ಶಮನಮಾಡಿ ಸೌಹಾರ್ದ ಮೂಡಿಸಲು ಮತ್ತು ಸೌಹಾರ್ದ ಕೆಡಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಶಕ್ತಿಗಳ ಮೇಲೆ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ಇಡೀ ಜಿಲ್ಲೆಯಲ್ಲಿ ಈ ಬಾರಿ ಯಾವುದೇ ಗಲಭೆಯಾಗದಂತೆ ಕ್ರಮವಹಿಸಿದ ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಮದ್ದೂರಿನಲ್ಲಿ ನಿರ್ಲಕ್ಷ್ಯ ತೋರಿದಂತೆ ಕಾಣುತ್ತಿದೆ, ಸಣ್ಣ ನಿರ್ಲಕ್ಷ್ಯವನ್ನೂ ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವ ಶಕ್ತಿಗಳ ವಿರುದ್ಧ ಎಚ್ಚರಿಕೆ ವಹಿಸಬೇಕು ಮತ್ತು ನಿರ್ಲಕ್ಷ್ಯ ತಾಳಿದ ಅಧಿಕಾರಿಗಳನ್ನು ಘಟನೆಗೆ ಹೊಣೆ ಮಾಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಬಿಜೆಪಿಯ ಕೋಮುವಾದಿ ರಾಜಕೀಯಕ್ಕೆ ಬಲಿ ಬೀಳದಂತೆ ಮನವಿ

ಬಿಜೆಪಿ ಮಂಡ್ಯ ಜಿಲ್ಲೆಯಲ್ಲಿ ನೆಲೆಯೂರಲು ಹತಾಶ ಪ್ರಯತ್ನಗಳನ್ನು ನಡೆಸುತ್ತಿದೆ. ಕಳೆದ ವರ್ಷ ನಾಗಮಂಗಲ, ಈಗ ಮದ್ದೂರು, ಹಿಂದೆ ಶ್ರೀರಂಗಪಟ್ಟಣ, ಕೆರೆಗೋಡು ಹೀಗೆ ಗಲಭೆ ಮತ್ತು ಉದ್ವಿಗ್ನತೆ ಸೃಷ್ಟಿಸಿ ಜಿಲ್ಲೆಯಲ್ಲಿ ನೆಲೆ ಕಂಡುಕೊಳ್ಳಲು ಬಿಜೆಪಿ ಕೆಲಸ ಮಾಡುತ್ತಿದೆ. ಜಿಲ್ಲೆಯ

ಪ್ರಜ್ಞಾವಂತ ಜನತೆ ಇಂತಹ ಕ್ಷುಲ್ಲಕ ರಾಜಕಾರಣಕ್ಕೆ ಬಲಿಯಾಗಬಾರದು, ಜನತೆಯ ಬದುಕಿನ ಪ್ರಶ್ನೆಗಳಿಗೆ ಯಾವತ್ತು ಕಾಳಜಿ ವಹಿಸದಿರುವ ಬಿಜೆಪಿ ಗಲಭೆ ಸದರ್ಭಗಳಲ್ಲಿ ರಣಹದ್ದಿನಂತೆ ಮುಗಿಬೀಳುತ್ತದೆ. ನಂತರದ ಮದ್ದೂರಿನ ಬಂದ್ ಮತ್ತು ಪ್ರತಿಭಟನೆಯೂ ಕೂಡಾ ಮುಂದಿನ ವಿಧಾನಸಭೆ ಚುನಾವಣೆಯನ್ನು ಗುರಿಯಾಗಿಸಿಕೊಂಡಿರುವ ಬಿಜೆಪಿ ನಾಯಕರ ಪ್ರಾಯೋಜನೆ ಎಂಬುದನ್ನು ಜನತೆ ಅರ್ಥಮಾಡಿಕೊಂಡು ಸೌಹಾರ್ದತೆ ಉಳಿಸಲು ಶ್ರಮಿಸಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಮನವಿ ಮಾಡಿದೆ.

ಯುವಕರು ನೇತೃತ್ವ ವಹಿಸಿದ ಬೃಹತ್ ಪ್ರತಿಭಟನೆಗಳ ನಡುವೆ ನೇಪಾಳದ ಪ್ರಧಾನ ಮಂತ್ರಿ ಕೆ.ಪಿ. ಓಲಿ ರಾಜೀನಾಮೆ ನೀಡಿದ ನಂತರ, ಈ ಬಿಕ್ಕಟ್ಟಿನ ಮೂಲದಲ್ಲಿರುವ ನೇಪಾಳದ ಸಂಕೀರ್ಣತೆಗಳನ್ನು ಮತ್ತು ವಾಸ್ತವವನ್ನು ಸರಳೀಕರಿಸಿ, ತಪ್ಪಾಗಿ ಪ್ರತಿನಿಧಿಸುವ ವಿವಿಧ ಕಥನಗಳು ಪ್ರಚಲಿತಕ್ಕೆ ಬಂದಿವೆ. ಒಂದು ಕಡೆ ಇದನ್ನು 'ಜೆನ್–ಝೀ ಕ್ರಾಂತಿ ಎಂದರೆ, ಇನ್ನೊಂದು ಕಡೆ ಇದು ಯುಎಸ್‌ನ ಪಿತೂರಿ ಎನ್ನಲಾಗುತ್ತಿದೆ. ಈ ಕಥನಗಳ ಆಂಶಿಕ ಸತ್ಯಗಳನ್ನು ಪ್ರಶ್ನಿಸಿ, ಅಲ್ಲಿನ ಸನ್ನಿವೇಶದ ಸಂಕೀರ್ಣ ವಾಸ್ತವದ ಆಧಾರದ ಮೇಲೆ ಹೀಗೇಕಾಯಿತು ಎಂಬುದರ ಬಗ್ಗೆ ಐದು ಪ್ರತಿಪಾದನೆಗಳನ್ನು ಮಾಡುವ ವಿಶ್ಲೇಷಣೆಯಿದು.



ನೇಪಾಳದಲ್ಲಿ 'ಜೆನ್-ಝೀ ಕ್ರಾಂತಿ

ಏನಾಗುತ್ತಿದೆ? ಯಾಕಾಗುತ್ತಿದೆ?

ವಿಜಯ್ ಪ್ರಶಾದ್ ಮತ್ತು ಅತುಲ್ ಚಂದ್ರ
(ಅನುವಾದ : **ವಸಂತರಾಜ ಎನ್.ಕೆ**)
ಕೃಪೆ: ಪೀಪಲ್ಸ್ ಢಿಸ್ಪ್ಯಾಚ್, ಸೆಪ್ಟೆಂಬರ್ 11

"ನಿಮ್ಮ ಮನೆ ಸ್ವಚ್ಛವಾಗಿಲ್ಲದಿದ್ದರೆ, ಇರುವೆಗಳು ಬಾಗಿಲಿನ ಮೂಲಕ ಒಳಗೆ ಬಂದು ಹಾವುಗಳನ್ನು ಆಕರ್ಷಿಸುತ್ತವೆ"

ನೇಪಾಳದಲ್ಲಿನ ಬಿಕ್ಕಟ್ಟು ಸೆಪ್ಟೆಂಬರ್ 9ರಂದು ತಾರಕಕ್ಕೇರಿ ಪ್ರಧಾನ ಮಂತ್ರಿ ಕೆ.ಪಿ. ಓಲಿ ಅವರ ನಡು–ಬಲಪಂಥೀಯ ಸರ್ಕಾರವು ಕುಸಿಯುವಂತೆ ಮಾಡಿತು. ಸೆಪ್ಟೆಂಬರ್ 4ರಂದು ಸಾಮಾಜಿಕ ಮಾಧ್ಯಮಗಳ ಮೇಲೆ ನಿಬಂಧನೆ ಮತ್ತು ನಿಷೇಧ ಹೇರಿದ್ದು ಇದರ ತಕ್ಷಣದ ಕಾರಣವಾಗಿತ್ತು. ಈ ಕ್ರಮದ ವಿರುದ್ಧದ ಪ್ರತಿಭಟನೆಗಳನ್ನು ಪೊಲೀಸ್ ಗುಂಡು ಹಾರಿಸಿ ಎದುರಿಸಿದ್ದು, 19 ಪ್ರತಿಭಟನಕಾರರ ಸಾವಿಗೆ ಕಾರಣವಾಯಿತು. ಇದು ಪ್ರತಿಭಟನೆ ತೀಕ್ಷ್ಣವಾಗಲು ಕಾರಣವಾಗಿ, ರಾಜಕಾರಣಿಗಳ ಮನೆಗಳು ಮತ್ತು ರಾಷ್ಟ್ರೀಯ ಸಂಸತ್ ಭವನದ ಜೊತೆಗೆ ರಾಷ್ಟ್ರಪತಿ ಭವನದ ಮೇಲೆ ದಾಳಿಗಳಿಗೆ ದಾರಿ ಮಾಡಿಕೊಟ್ಟಿತು.

ಪ್ರಸ್ತುತ ಕೋಲಹಲದ ಕುರಿತು ಹಲವಾರು ಕಥನಗಳು ಪ್ರಚಲಿತವಾಗಿವೆ, ಆದರೆ ಅವುಗಳಲ್ಲಿ ಎರಡು ಪ್ರಬಲವಾಗಿವೆ

1. **ಆಡಳಿತದ ಸಾಂಸ್ಥಿಕ ವೈಫಲ್ಯ:** ಹಲವು ವರ್ಷಗಳಿಂದ ನೆರವೇರದ ವಾಗ್ದಾನಗಳು, ಭ್ರಷ್ಟಾಚಾರ ಮತ್ತು ಅವಕಾಶವಾದಿ ಒಕ್ಕೂಟಗಳು, ಈ ಅಥವಾ ಆ ಪಕ್ಷಕ್ಕೆ ಮಾತ್ರವಲ್ಲ, ಬದಲಿಗೆ ಇಡೀ ವ್ಯವಸ್ಥೆಯ ಮೇಲೆ ಅಪನಂಬಿಕೆಯ ಬಿಕ್ಕಟ್ಟು ಉಂಟುಮಾಡಿವೆ. ಪ್ರಸ್ತುತ ದಂಗೆಯನ್ನು ನಿರಂತರ ನಿರ್ಲಕ್ಷ್ಯ ಮಡುಗಟ್ಟಿ ಉಂಟಾದ ಜನತೆಯ ಪ್ರತಿಕ್ರಿಯೆ ಎಂದು ವಿವರಿಸಲಾಗಿದೆ.

2. **ಬಣ್ಣದ ಕ್ರಾಂತಿ:** ಪ್ರತಿಭಟನೆಗಳು ವಿದೇಶಿ ಶಕ್ತಿಗಳಿಂದ ಯೋಜಿಸಲ್ಪಟ್ಟಿವೆ, ಹೆಚ್ಚಿನ ಆರೋಪಗಳು, 2015ರಲ್ಲಿ ಸ್ಥಾಪಿತವಾದ 'ಹಮಿ ನೇಪಾಳ'ಕ್ಕೆ ಯುಎಸ್ ಮತ್ತು ಯುಎಸ್ ಸಂಸತ್ತಿನ ನ್ಯಾಶನಲ್ ಎಂಡೌಮೆಂಟ್ ಫಾರ್ ಡೆಮೋಕ್ರಸಿ (NED) ನೀಡುವ ಅನುದಾನವನ್ನು ತೋರಿಸುತ್ತವೆ.

ಈ ಎರಡೂ ಕಥನಗಳು ನೇಪಾಳದಲ್ಲಿ ಈ ಬಿಕ್ಕಟ್ಟಿಗೆ ನಿಜವಾದ ಹೊಣೆಗಾರರು ಹೊಣೆಯಿಂದ ಜಾರಿಕೊಂಡು, ಬೇರೆಯವರ ಮೇಲೆ (ಅದು ಹಸ್ತಕ್ಷೇಪಮಾಡುವ ಹೊರಗಿನವರ ಮೇಲೋ ಅಥವಾ "ರಾಜಕೀಯ ವರ್ಗ"ದ ಅಸ್ಪಷ್ಟ ಕಲ್ಪನೆಯ ಮೇಲೋ ಆಗಿರಬಹುದು) ಹೊಣೆ ಹೊರಿಸುವುದನ್ನು ಸುಲಭವಾಗಿಸುತ್ತವೆ. ಈ ಕಥನಗಳಲ್ಲಿ ನೇಪಾಳದ ಕೆಳಗೆ ಅಡಗಿರುವ ಬೂರ್ಜ್ವಾ ವ್ಯವಸ್ಥೆ ಮತ್ತು ಅದರ ಈ ಸಮಸ್ಯೆಗಳ ಬಗ್ಗೆ ಚರ್ಚೆ ಇಲ್ಲ. ರಾಜಪ್ರಭುತ್ವದೊಂದಿಗೆ ನಿಕಟ ಸಂಬಂಧ ಹೊಂದಿರುವ ಕೆಲವರದ್ದೇ ಏಕಸ್ವಾಮ್ಯದ ಹಿಡಿತದಲ್ಲಿ ಭೂಮಿ, ಹಣಕಾಸು ಮತ್ತು ಸರ್ಕಾರಿ ಕಾಂಟ್ರಾಕ್ಟುಗಳು ಇರುವ ಒಂದು ಶತಮಾನದ ಕೃಪಾಪೋಷಿತ (ಪೆಟ್ರೋನೇಜ್) ಆರ್ಥಿಕತೆ; ವಲಸೆ ಕಾರ್ಮಿಕರ ರವ್ತು ಮತ್ತು ಸಾಲದಿಂದ ನಡೆಯುವ ಮೂಲಸೌಕರ್ಯದ ಅಭಿವೃದ್ಧಿಯನ್ನು ಅವಲಂಬಿಸಿರುವ ಬೆಳವಣಿಗೆಯ ಮಾದರಿ. ಜನತೆಯ ಅಸಂತೃಪ್ತಿಯ ರಾಚನಿಕ ಮೂಲಗಳನ್ನು "ಭ್ರಷ್ಟಾಚಾರ" ಮತ್ತು "ಬಣ್ಣದ ಕ್ರಾಂತಿ"ಯಂತಹ ಸರಳ ಆದರೆ, ಉತ್ತೇಜಕ ಪರಿಕಲ್ಪನೆಗಳಲ್ಲಿ ಸರಳೀಕರಿಸಲಾಗಿದೆ.

ಈ ಎರಡೂ ಕಥನಗಳು ಸಂಪೂರ್ಣವಾಗಿ ತಪ್ಪು ಅಲ್ಲ ಅಥವಾ ಸಂಪೂರ್ಣವಾಗಿ ಸರಿಯೂ ಅಲ್ಲ, ಆದರೆ ಭಾಗಶಃ ಸರಿಯಾಗಿವೆ ಮತ್ತು ಅವುಗಳ ಭಾಗಶಃ ಸ್ವರೂಪವು ತುಂಬಾ ದಾರಿ ತಪ್ಪಿಸುವಂತದ್ದು. ಈ ಲೇಖನವು ಆ ಭಾಗಶಃ ಸ್ವರೂಪವನ್ನು ಸರಿಪಡಿಸಲು ಸಾಧ್ಯವಿಲ್ಲ, ಆದರೆ ಚರ್ಚೆಗಾಗಿ ಕೆಲವು ಆಲೋಚನೆಗಳನ್ನು ನೀಡಲು ಉದ್ದೇಶಿಸಿದೆ. ಕೆಳಗಿನ ಐದು ಪ್ರತಿಪಾದನೆಗಳನ್ನು ನೇಪಾಳದ ಕುರಿತು ಮಾತ್ರವಲ್ಲದೆ, ಜಾಗತಿಕ ದಕ್ಷಿಣದ ಅನೇಕ ದೇಶಗಳ ದುರ್ದಶೆಯ ಕುರಿತು ನಡೆಯಬೇಕೆಂದು ನಾವು ನಿರೀಕ್ಷಿಸುವ ಚರ್ಚೆಯನ್ನು ರೂಪಿಸಲು ಮಾತ್ರ ಉದ್ದೇಶಿಸಲಾಗಿದೆ.

1. **ಸದವಕಾಶದ ಕೆಟ್ಟ ನಿರ್ವಹಣೆ:** 2015ರಲ್ಲಿ ನೇಪಾಳದಲ್ಲಿ ಹೊಸ ಸಂವಿಧಾನ ಜಾರಿಗೆ ಬಂದನಂತರ, ಎಡಪಂಥೀಯರು ನೇಪಾಳಿಗರ ಸಾಮಾಜಿಕ ಸ್ಥಿತಿಯನ್ನು ಮುನ್ನಡೆಸುತ್ತಾರೆ ಎಂಬ ಅಪಾರ ಭರವಸೆ ಇತ್ತು. ಆದ್ದರಿಂದ, 2017ರಲ್ಲಿ, ವಿವಿಧ ಕಮ್ಯುನಿಸ್ಟ್ ಪಕ್ಷಗಳು ರಾಷ್ಟ್ರೀಯ ಸಂಸತ್ತಿನಲ್ಲಿ ಶೇ. 75 ಸ್ಥಾನಗಳನ್ನು ಗೆದ್ದವು. ಅದರ ಮರುವರ್ಷ, ದೊಡ್ಡ ಕಮ್ಯುನಿಸ್ಟ್ ಪಕ್ಷಗಳು ಒಂದಾಗಿ ನೇಪಾಳ ಕಮ್ಯುನಿಸ್ಟ್ ಪಾರ್ಟಿಯನ್ನು ರಚಿಸಿದವು. ಆದರೆ ಏಕೀಕರಣವು ಅಷ್ಟು ಆಳವಾಗಿರಲಿಲ್ಲ, ಏಕೆಂದರೆ ಪಕ್ಷಗಳು ತಮ್ಮದೇ ಆದ ಸಂಘಟನಾ ರಚನೆಗಳು ಮತ್ತು ತಮ್ಮದೇ ಆದ ಕಾರ್ಯಕ್ರಮಗಳನ್ನು ಹೊಂದಿದ್ದವು ಮತ್ತು ನಿಜವಾಗಿಯೂ ಏಕೀಕೃತ ಪಕ್ಷವನ್ನು ರಚಿಸಲು ಸಾಧ್ಯವಾಗಲಿಲ್ಲ. ಆದರೆ, ಪ್ರಧಾನವಾಗಿ ಏಕೀಕೃತ ಚುನಾವಣಾ ಗುಂಪನ್ನು ರಚಿಸಿದವು. ಕಮ್ಯುನಿಸ್ಟ್ ರಾಜಕೀಯ ಚಟುವಟಿಕೆಗಳಿಗೆ ಸಾಮಾನ್ಯ ಕಾರ್ಯಕ್ರಮದ ಕೊರತೆ ಮತ್ತು ಪ್ರಭುತ್ವದ ಸಾಧನದ ಮೂಲಕ ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಸಾಮಾನ್ಯ ಕಾರ್ಯಸೂಚಿಯ ಕೊರತೆಯು ಎಡಪಂಥಕ್ಕೆ ಒದಗಿದ ಅವಕಾಶವನ್ನು ಪೋಲು ಮಾಡಲು ಕಾರಣವಾಯಿತು.

ಏಕೀಕೃತ ಪಕ್ಷವು 2021ರಲ್ಲಿ ವಿಭಜನೆಯಾಯಿತು ಮತ್ತು ಅದರ ನಂತರ ವಿವಿಧ ಎಡಪಂಥೀಯ ಪಕ್ಷಗಳು ಅಧಿಕಾರದಲ್ಲಿ ಬಂದು ಹೋದವು, ಇದನ್ನು ಜನರು ವ್ಯಕ್ತಿತ್ವವಾದ ಮತ್ತು ಅವಕಾಶವಾದ ಎಂದು ನೋಡಿದರು. ಮಾವೋವಾದಿ ಕೇಂದ್ರದ ಗೃಹ ಮಂತ್ರಿ ನಾರಾಯಣ ಕಾಜಿ ಶ್ರೇಷ್ಠ (2023–2024) ತಮ್ಮ ಸ್ವಂತ ಪಕ್ಷದಲ್ಲಿನ ಭ್ರಷ್ಟಾಚಾರದ ಕ್ರಮಗಳನ್ನು ತನಿಖೆಮಾಡಲು ಪ್ರಭುತ್ವದ ಸಾಧನಗಳನ್ನು ಬಳಸಲು ಪ್ರಯತ್ನಿಸಿದಾಗ, ಅವರನ್ನು ಹುದ್ದೆಯಿಂದ ಹೊರಹಾಕಲಾಯಿತು. 2024ರಿಂದ, ನೇಪಾಳದ ಸರ್ಕಾರವು ಎಡಪಂಥೀಯರ ಬಲಪಂಥೀಯ ಭಾಗ (ಕೆ.ಪಿ. ಓಲಿ ನೇತೃತ್ವದಲ್ಲಿ) ಮತ್ತು ಬಲಪಂಥೀಯರ ಒಂದು ಭಾಗ (ನೇಪಾಳಿ ಕಾಂಗ್ರೆಸ್) ಅನ್ನು ಒಳಗೊಂಡಿತ್ತು, ಇದು ಅದನ್ನು ನಡು–ಬಲಪಂಥೀಯ ಸರ್ಕಾರವನ್ನಾಗಿ ಮಾಡಿತು.

1951ರ ಕ್ರಾಂತಿಯೊಂದಿಗೆ ಪ್ರಾರಂಭವಾದ ಪ್ರಜಾಪ್ರಭುತ್ವಕ್ಕಾಗಿನ ದೀರ್ಘ ಹೋರಾಟವು, 1990ರ ಜನ ಆಂದೋಲನದೊಂದಿಗೆ ಆಳವಾಯಿತು, ಮತ್ತು ನಂತರ 2006ರ ಲೋಕತಂತ್ರ ಆಂದೋಲನದೊಂದಿಗೆ ಭದ್ರವಾದಂತೆ ಕಂಡದ್ದು, ಈಗ ಸೋತಂತೆ ಕಾಣುತ್ತಿದೆ. ಆದರೆ ನಿಜವಾಗಿ ಆ

....ಪುಟ 10 ಕ್ಕೆ

ನೇಪಾಳದಲ್ಲಿ ಪ್ರಕ್ಷುಬ್ಧತೆ: ಒಂದು ಪ್ರಜಾಸತ್ತಾತ್ಮಕ ನವೀಕರಣವೇ ಯುವಜನರ ಪ್ರತಿಭಟನೆಯ ಫಲಿತಾಂಶವಾಗಬೇಕು

ನೇಪಾಳದಲ್ಲಿ ನಡೆದ ಇಂಟರ್ನೆಟ್ ಪೀಳಿಗೆಯ (GenZ) ಪ್ರತಿಭಟನೆಯ ಸಂದರ್ಭದಲ್ಲಿ 20 ಅಮೂಲ್ಯ ಯುವ ಜೀವಗಳ ಹಾನಿಯಾಗಿರುವ ಬಗ್ಗೆ ಸಿಪಿಐ(ಎಂ) ತೀವ್ರ ದುಃಖವನ್ನು ವ್ಯಕ್ತಪಡಿಸಿದೆ. ಈ ಪ್ರತಿಭಟನೆಗಳು, ಜನರ, ವಿಶೇಷವಾಗಿ ಯುವಜನರ ನಿಜವಾದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅವರ ಆಕಾಂಕ್ಷೆಗಳನ್ನು ಪೂರೈಸಲು ಪದೇ ಪದೇ ವಿಫಲವಾಗುತ್ತಿರುವು ದರಿಂದಾಗಿ ಹೆಚ್ಚುತ್ತಿರುವ ಬೇಗುದಿಗಳಿಂದ ಉಂಟಾಗಿರುವ ವ್ಯಾಪಕ ಆಕ್ರೋಶವನ್ನು ಪ್ರತಿಬಿಂಬಿಸುತ್ತವೆ ಎಂದು ಅದು ಹೇಳಿದೆ.

ಆಳುವ ವಲಯಗಳಲ್ಲಿ ವ್ಯಾಪಕವಾದ ಭ್ರಷ್ಟಾಚಾರ, ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಪ್ರಧಾನವಾಗಿ ಯುವ ಜನಸಂಖ್ಯೆಗೆ ಉದ್ಯೋಗಾವಕಾಶಗಳ ಕೊರತೆ ಇವು ಸಾಮಾಜಿಕ ಮಾಧ್ಯಮ ವೇದಿಕೆಗಳ ಮೇಲಿನ ನಿಷೇಧದ ಬೆನ್ನಲ್ಲಿ ಭುಗಿಲೆದ್ದ ಇಂಟರ್ನೆಟ್ ಪೀಳಿಗೆಯ (GenZ) ಪ್ರತಿಭಟನೆಗಳ ಹಿಂದಿನ ಪ್ರಮುಖ ಕಾರಣಗಳಲ್ಲಿ ಸೇರಿವೆ. ಕೆ.ಪಿ. ಓಲಿ ಸರ್ಕಾರವನ್ನು ಪದಚ್ಯುತಗೊಳಿಸಲಾಗಿದೆ. ಈಗ ಶಾಂತಿ ಮತ್ತು ಸಹಜ ಸ್ಥಿತಿಯನ್ನು ಪುನಃಸ್ಥಾಪಿಸುವ ಪ್ರಯತ್ನ ಗಳನ್ನು ಗಂಭೀರವಾಗಿ ನಡೆಸಬೇಕು. ಪ್ರಮುಖ ರಾಜಕೀಯ ಪದಾಧಿಕಾರಿಗಳ ವಿರುದ್ಧ ನಿರ್ದೇಶಿಸಲಾದ ದೊಂಬಿ ಹಿಂಸಾಚಾರದ ಹಿನ್ನೆಲೆಯಲ್ಲಿ ಇದು ಹೆಚ್ಚು ಅವಶ್ಯಕವಾಗಿದೆ. ನಿರ್ದಿಷ್ಟವಾಗಿ ಮಾಜಿ ಪ್ರಧಾನಿ ಝಲನಾಥ್ ಖನಲ್ ಅವರ ಪತ್ನಿ ರಾಜ್ಯಲಕ್ಷ್ಮಿ ಚಿತ್ರಕಾರ್ ಅವರ ಹತ್ಯೆ ಖಂಡನೀಯ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ನೇಪಾಳದ ಯುವಜನರ ಬೇಗುದಿಗಳಿಗೆ ತಕ್ಷಣವೇ ಕಿವಿಗೊಡಬೇಕು ಮತ್ತು ಅವುಗಳನ್ನು ಪರಿಹರಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅದೇ ಸಮಯದಲ್ಲಿ, ರಾಜಪ್ರಭುತ್ವದ ವಿರುದ್ಧ ದೀರ್ಘ ಮತ್ತು ಕಠಿಣ ಹೋರಾಟದ ಮೂಲಕ ಸಾಧಿಸಲಾದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾದ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಮೌಲ್ಯಗಳನ್ನು ರಕ್ಷಿಸಲು ಕಾಳಜಿ ವಹಿಸಬೇಕು. ರಾಜಪ್ರಭುತ್ವವಾದಿ ಗಳು ಮತ್ತು ಇತರ ಪ್ರತಿಗಾಮಿ ಶಕ್ತಿಗಳು ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳದಂತೆ ನೇಪಾಳದ ಯುವ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಜಾಗರೂಕರಾಗಿರಬೇಕು. ಈ ಸಾಮೂಹಿಕ ಪ್ರತಿಭಟನೆಗಳ ಫಲಿತಾಂಶವು ಒಂದು ಪ್ರಜಾಸತ್ತಾತ್ಮಕ ನವೀಕರಣವಾಗಿರಬೇಕು, ಊಳಿಗಮಾನ್ಯ ಸರ್ವಾಧಿಕಾರಿ ಆಳ್ವಿಕೆಗೆ ಮರಳುವಂತಾಗಬಾರದು ಎಂದು ಸಿಪಿಐ(ಎಂ) ಆಶಿಸಿದೆ.

ನೇಪಾಳದಲ್ಲಿ ‘ಜೆನ್-ಝೀ ಕ್ರಾಂತಿ.....

ಪುಟ 9 ರಿಂದ

ದೀರ್ಘ ಹೋರಾಟವು ಇನ್ನೊಂದು ರೂಪದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ.

2. **ಜನತೆಯ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ವಿಫಲತೆ**: 2015ರಲ್ಲಿ ಹೊಸ ಸಂವಿಧಾನ ಅಳವಡಿಸಿಕೊಳ್ಳುವಾಗ ನೇಪಾಳದಲ್ಲಿನ ಸಮಸ್ಯೆಗಳು ಗಂಭೀರವಾಗಿದ್ದವು. ಗೋರ್ಖಾದಲ್ಲಿ ಸಂಭವಿಸಿದ ಭೀಕರ ಭೂಕಂಪವು ಪ್ರಾಂತ್ಯವನ್ನು ನಾಶಪಡಿಸಿತು, 10,000ಕ್ಕೂ ಹೆಚ್ಚು ಜನರ ಸಾವಿಗೆ ಮತ್ತು ಲಕ್ಷಾಂತರ ಜನರು ನಿರಾಶ್ರಿತರಾಗಲು ಕಾರಣವಾಯಿತು. ಕನಿಷ್ಠ ನಾಲ್ಕನೇ ಒಂದು ಭಾಗದ ನೇಪಾಳಿಗರು ಬಡತನ ರೇಖೆಯ ಕೆಳಗೆ ವಾಸಿಸುತ್ತಿದ್ದರು. ಜಾತಿ ಮತ್ತು ಬುಡಕಟ್ಟು ತಾರತಮ್ಯವು ಹತಾಶೆಯ ಭಾವನೆಯನ್ನು ಸೃಷ್ಟಿಸಿತು. ನೇಪಾಳ–ಭಾರತ ಗಡಿಯುದ್ದಕ್ಕೂ ಇರುವ ಮಾಧೇಶ್ ಪ್ರದೇಶವು ಪ್ರತಿಕೂಲತೆಯ ಭಾವನೆಯಿಂದ ಮತ್ತು ನಂತರ 2015ರ ಸಂವಿಧಾನದಿಂದ ಮತ್ತಷ್ಟು ಅಂಚಿಗೆ ತಳ್ಳಲ್ಪಟ್ಟಿರುವ ವಿಶ್ಲೇಷಣೆಯಿಂದ ವಿಶೇಷವಾಗಿ ಆಕ್ರೋಶಗೊಂಡಿತು. ಒಂದು ಶತಮಾನದಿಂದಲೂ ಅಗತ್ಯ ಹಣಕಾಸಿನ ಲಭ್ಯತೆಯಿಲ್ಲದೆ ದುರ್ಬಲ ಸಾರ್ವಜನಿಕ ಆರೋಗ್ಯ ಸೇವೆ ಮತ್ತು ಶಿಕ್ಷಣ, ಉದಯೋನ್ಮುಖ ಮಧ್ಯಮ ವರ್ಗದ ಆಕಾಂಕ್ಷೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ.

ಎಡಪಂಥೀಯ ಸರ್ಕಾರಗಳು ಈ ಕೆಲವು ಸಮಸ್ಯೆಗಳನ್ನು ಪರಿಹರಿಸಲು ವಿವಿಧ ನೀತಿಗಳನ್ನು ಮುಂದಿಟ್ಟವು, ಜನಸಂಖ್ಯೆಯ ದೊಡ್ಡ ವಿಭಾಗಗಳನ್ನು ಬಡತನದಿಂದ (ಮಕ್ಕಳ ಬಡತನ 2015ರಲ್ಲಿ ಶೇ. 36ರಿಂದ 2025ರಲ್ಲಿ ಶೇ. 15ಕ್ಕೆ ಇಳಿದಿದೆ) ಮತ್ತು ಮೂಲಸೌಕರ್ಯಾದ ನಿರ್ಲಕ್ಷ್ಯದಿಂದ (ವಿದ್ಯುತ್ ಈಗ ಶೇ. 99 ಜನರಿಗೆ ಲಭ್ಯವಿದೆ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಸುಧಾರಣೆಯಾಗಿದೆ) ಹೊರತೆಗೆದವು.

ಆದಾಗ್ಯೂ, ನಿರೀಕ್ಷೆಗಳು ಮತ್ತು ವಾಸ್ತವಿಕತೆಯ ನಡುವೆ ಭಾರೀ ಅಂತರ ಉಳಿದಿದೆ, ಅಸಮಾನತೆಯ ಪ್ರಮಾಣಗಳು ಸಾಕಷ್ಟು ವೇಗವಾಗಿ ಕಡಿಮೆಯಾಗುತ್ತಿಲ್ಲ ಮತ್ತು ವಲಸೆ ಗಾಬರಿಹುಟ್ಟಿಸುವ ಮಟ್ಟದಲ್ಲಿದೆ. ಭ್ರಷ್ಟಾಚಾರದ ಮಟ್ಟಗಳು ದೇಶದಲ್ಲಿ ಅತಿಯಾಗಿ ಉಳಿದಿವೆ ಏಕೆಂದರೆ, ಭ್ರಷ್ಟಾಚಾರದ ಗ್ರಹಿಕೆಗಳು ಹದಗೆಟ್ಟಿವೆ (2024ರಲ್ಲಿ 180 ದೇಶಗಳಲ್ಲಿ 107ನೇ ಸ್ಥಾನ). ಭ್ರಷ್ಟಾಚಾರ, ಅಸಮಾನತೆ ಮತ್ತು ಹಣದುಬ್ಬರವನ್ನು ನಿಯಂತ್ರಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ, ಇದು ವ್ಯಾಪಾರ ಮತ್ತು ಹಣಕಾಸಿನ ಅತಿ ಕೆಟ್ಟ ಒಪ್ಪಂದಗಳನ್ನು ಮಾಡಿಕೊಂಡಿತು (IMFನ ವಿಸ್ತೃತ ಸಾಲ ವ್ಯವಸ್ಥೆಗೆ ಮರಳುವುದು ಅದರ ಆರ್ಥಿಕ ಸಾಧ್ಯತೆಗಳನ್ನು ಕಿರಿದಾಗಿಸಿತು).

3. **ಹಿಂದೂ ರಾಜಪ್ರಭುತ್ವದ ಕಲ್ಪನೆಯಲ್ಲಿ ಆಶ್ರಯ ಪಡೆಯುವ ಪ್ರವೃತ್ತಿ:** ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಕಳುಹಿಸುವ ನೇಪಾಳದ ಪುಟ್ಟ ಬೂರ್ಜ್ವಾ ವರ್ಗ ಮತ್ತು ಸಾಮಾನ್ಯವಾಗಿ ದಮನಿತ ಅಥವಾ "ಹಿಂದುಳಿದ" ಹಿಂದೂ ಜಾತಿಗಳಿಂದ ಬಂದವರು, ಉನ್ನತ ಜಾತಿಗಳ ನಿರಂತರ ಪ್ರಾಬಲ್ಯದಿಂದ ಹತಾಶರಾಗಿದ್ದಾರೆ. ಮತ್ತು ನೇಪಾಳದ ಗಡಿಯಲ್ಲಿರುವ ಭಾರತದ ಉತ್ತರ ಪ್ರದೇಶ ರಾಜ್ಯದ ಬಲಪಂಥೀಯ ಹಿಂದುತ್ವ ಪುಟ್ಟ ಬೂರ್ಜ್ವಾ ರಾಜಕೀಯದಿಂದ ಪ್ರೇರಿತರಾಗಿದ್ದಾರೆ. ಅದಕ್ಕಾಗಿಯೇ ಭಾರತದ ಬಲಪಂಥೀಯ ಭಾರತೀಯ ಜನತಾ ಪಕ್ಷದ (ಬಿಜೆಪಿ) ನಾಯಕ ಮತ್ತು ಉತ್ತರ ಪ್ರದೇಶ ಸರ್ಕಾರದ ನಾಯಕ ಯೋಗಿ ಆದಿತ್ಯನಾಥ್‌ರವರ ಪೋಸ್ಟರ್‌ಗಳು ಪ್ರತಿಭಟನೆಗಳಲ್ಲಿ ಹೇರಳವಾಗಿದ್ದವು. ಈ ಜನವಿಭಾಗವು ರಾಜಪ್ರಭುತ್ವಕ್ಕೆ (ಅದು ಹಿಂದೂ ರಾಜಪ್ರಭುತ್ವ) "ಮರಳುವ" ಮನೋಭಾವ ಹೊಂದಿದೆ. ರಾಜಪ್ರಭುತ್ವವನ್ನು ಸಮರ್ಥಿಸುವ ಪಕ್ಷ (ರಾಷ್ಟ್ರೀಯ ಪ್ರಜಾತಂತ್ರ ಪಕ್ಷ ಅಥವಾ RPP) ಮತ್ತು ಅದರ ವಿಶಾಲ ರಂಗದ ಮಿತ್ರರು (ಶಿವ ಸೇನಾ ನೇಪಾಳ, ವಿಶ್ವ ಹಿಂದೂ ಮಹಾಸಭೆಗಳಿರುವ ಜಂಟಿ ಪೀಪಲ್ಸ್ ಮೂವ್ಮೆಂಟ್ ಕಮಿಟಿ– ಇದನ್ನು ಮಾರ್ಚ್ 2025ರಲ್ಲಿ ರಾಜಪ್ರಭುತ್ವಕ್ಕೆ ಮರಳುವ ಪ್ರತಿಭಟನೆಗಳ ಭಾಗವಾಗಿ ರಚಿಸಲಾಗಿದೆ). ಇಂತಹ ಹಲವಾರು ರಾಜಕೀಯ ಶಕ್ತಿಗಳು ಈ ಪ್ರವೃತ್ತಿಗಳನ್ನು ಬೆಂಬಲಿಸುತ್ತವೆ.

ಭಾರತದ RSSನ ಅಂತರರಾಷ್ಟ್ರೀಯ ಅಂಗಸಂಸ್ಥೆಯಾದ ಹಿಂದೂ ಸ್ವಯಂಸೇವಕ ಸಂಘ (HSS), 1990ರ ದಶಕದಿಂದಲೂ ಶಾಖೆಗಳು (ಗುಂಪುಗಳು) ಮತ್ತು ಕಾರ್ಯಕರ್ತರ ಜಾಲವನ್ನು ಸದ್ದಿಲ್ಲದೆ ನಿರ್ಮಿಸಿದೆ. HSS, ಶಿವ ಸೇನಾ ಮತ್ತು RPP ನಂತಹ ಸಂಸ್ಥೆಗಳ ಜೊತೆಗೆ, ಮತಧರ್ಮನಿರಪೇಕ್ಷ ನೀತಿಗಳ ವಿರುದ್ಧ ಮತ್ತು ಹಿಂದೂ ರಾಜ್‌ಗೆ ಮರಳಲು ಪ್ರಚಾರಾಂದೋಲನ ನಡೆಸಿದೆ. ಕೇವಲ ಮತಧರ್ಮನಿರಪೇಕ್ಷತೆಯನ್ನು ಉದ್ದೇಶಿಸುವ ಬದಲು, ಹಿಂದುತ್ವ ಬ್ಲಾಕ್ 2008ರಲ್ಲಿ



ರಾಜಪ್ರಭುತ್ವ ರದ್ದುಗೊಂಡ ನಂತರದಿಂದಲೂ ಅಧಿಕಾರವನ್ನು ಹಿಡಿದಿದೆ ಎಂದು ಅವರು ಹೇಳುವ ಕಾಠ್ಮಂಡುವಿನ ಪ್ರತಿಷ್ಠಿತ ಗುಂಪುಗಳ 'ಮ್ಯುಸಿಕಲ್ ಚೇರ್' ಮೇಲೆ ಗಮನ ಕೇಂದ್ರೀಕರಿಸಿದೆ. ಅವರು ತಮ್ಮ 'ನಾಗರಿಕತೆಯ ಮಾತುಗಾರಿಕೆ'ಯನ್ನು ಭ್ರಷ್ಟಾಚಾರ ವಿರೋಧಿ ಮತ್ತು ದಾನಧರ್ಮಗಳ ಸುತ್ತ ರೂಪಿಸುತ್ತಾರೆ, ಹಿಂದೂ ಹಬ್ಬಗಳ ಮೂಲಕ ಮತ್ತು ಆನ್ಲೈನ್ ಪ್ರಭಾವಶಾಲಿ ವ್ಯಕ್ತಿಗಳ ಮೂಲಕ ಮತ್ತು ಹಿಂದೂ ಏಕತೆಯ ಹೆಸರಿನಲ್ಲಿ ಆಯ್ದ ಹಿಂದುಳಿದ ಮತ್ತು ದಮನಿತ ಜಾತಿಗಳತ್ತ ಪಯಣದ ಸೋಗು ಹಾಕುತ್ತಾರೆ. ಯುವಕರಿಗಿಂತ ಭಿನ್ನವಾಗಿ ಶಕ್ತಿಯುತವಾಗಿ ಸಂಘಟಿತವಾಗಿರುವ ಈ ಬ್ಲಾಕ್, ಹಿಂದೂ ರಾಜ್ಯ ಮತ್ತು ರಾಜಪ್ರಭುತ್ವದ ಹೆಸರಿನಲ್ಲಿ ಅಧಿಕಾರವನ್ನು ಪಡೆದುಕೊಳ್ಳುವ ಮತ್ತು ವ್ಯವಸ್ಥೆಯನ್ನು ಪುನಃಸ್ಥಾಪಿಸುವ ಸಾಮರ್ಥ್ಯ ಹೊಂದಿದೆ. ಭ್ರಷ್ಟಾಚಾರ ವಿರೋಧಿ ಹೆಸರಿನಲ್ಲಿ ಸರ್ವಾಧಿಕಾರವನ್ನು ಮರಳಿ ತರುವ ಸಾಮರ್ಥ್ಯ ಹೊಂದಿದೆ.

4. **ವಲಸೆ 'ಎಸ್ಕೇಪ್ ವಾಲ್ವ್' ನಿಂದ ದಣಿದವರು:** ಮೊಂಟ್ಸೆರಾಟ್ ಮತ್ತು ಸೇಂಟ್ ಕಿಟ್ಸ್ ಮತ್ತು ನೆವಿಸ್‌ನಂತಹ ಸಣ್ಣ ದೇಶಗಳನ್ನು ನಾವು ನಿರ್ಲಕ್ಷಿಸಿದರೆ, ನೇಪಾಳವು ಕೆಲಸಕ್ಕಾಗಿ ವಲಸೆ ಹೋಗುವ ಅತಿ ಹೆಚ್ಚು ತಲಾ ದರ ಹೊಂದಿರುವ ದೇಶವಾಗಿದೆ. 3.1 ಕೋಟಿ ಜನಸಂಖ್ಯೆಯೊಂದಿಗೆ, ಪ್ರಸ್ತುತ 5,34,500 ನೇಪಾಳಿಗರು (ದಾಖಲಿತರು) ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ – ಅಂದರೆ ಪ್ರತಿ 1,000 ನೇಪಾಳಿಗರಿಗೆ 17.2 ಜನರು. ಇದು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿವೆ. 2000 ರಲ್ಲಿ, ವಿದೇಶಿ ಉದ್ಯೋಗ ಪರ್ಮಿಟ್ ಪಡೆದ ನೇಪಾಳಿಗರ ದಾಖಲಿತ ಸಂಖ್ಯೆ 55,000 ಆಗಿತ್ತು, ಈಗ ಅದು 14 ಪಟ್ಟು ಹೆಚ್ಚಾಗಿ 2022–23ರ ಹೊತ್ತಿಗೆ ಇದು 7.7 ಲಕ್ಷ ಮುಟ್ಟಿ ಹೊಸ ದಾಖಲೆಮಾಡಿದೆ.

ದೊಡ್ಡ ಪ್ರಮಾಣದ ಯುವಕರು ತಮಗೆ ಉದ್ಯೋಗದ ಅವಕಾಶಗಳು ನೇಪಾಳದೊಳಗೆ ಸಿಗುತ್ತಿಲ್ಲವೆಂದು ಕೋಪಗೊಂಡಿದ್ದಾರೆ ಮತ್ತು ಭಾರೀ ಅಪಾಯಕಾರಿ ಕೆಲಸಗಳು ಸೇರಿದಂತೆ ಉದ್ಯೋಗ ಅರಸಿ ವಲಸೆ ಹೋಗದೆ ಬೇರೆ ದಾರಿಯಿಲ್ಲವೆಂಬ ಸ್ಥಿತಿಯಿದೆ. ಫೆಬ್ರವರಿ 2025ರಲ್ಲಿ ಯೊಂಗಾಮ್ (ದಕ್ಷಿಣ ಕೊರಿಯಾ) ನಲ್ಲಿ ಒಂದು ಭಯಾನಕ ಘಟನೆ ನಡೆಯಿತು, 28 ವರ್ಷದ ವಲಸೆ ಕಾರ್ಮಿಕ ತುಲ್ಸಿ ಪುನ್ ಮಗರ್, ತಾನು ಕೆಲಸ ಮಾಡುತ್ತಿದ್ದ ಹಂದಿ ಫಾರ್ಮ್‌ನ ಮಾಲಿಕ ಕೂಲಿ ದರವನ್ನು ಕಡಿಮೆ ಮಾಡುತ್ತ ಹೋಗುತ್ತಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಊಹಿಸಲಾಗಿದೆ. ತುಲ್ಸಿ ಪೋಖರಾದ ಗುರ್ಖಾ ಸಮುದಾಯಕ್ಕೆ ಸೇರಿದವ. ಅವನ ಆತ್ಮಹತ್ಯೆಯ ನಂತರ, ಕಳೆದ ಐದು ವರ್ಷಗಳಲ್ಲಿ 85 ನೇಪಾಳಿಗರು ದಕ್ಷಿಣ ಕೊರಿಯಾದಲ್ಲಿ ಸತ್ತಿದ್ದಾರೆ, ಅವರಲ್ಲಿ ಅರ್ಧದಷ್ಟು ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ವರದಿಗಳು ಬಂದಿವೆ. ಇಂತಹ ಸುದ್ದಿಗಳು ಸರ್ಕಾರದ ಮೇಲಿನ ಹತಾಶೆ ಮತ್ತು ಕೋಪವನ್ನು ಹೆಚ್ಚಿಸಿದವು. ಸರ್ಕಾರವು ವಿದೇಶಿ ನೇರ ಹೂಡಿಕೆದಾರರ ಬಗ್ಗೆ ತನ್ನ ಸ್ವಂತ ವಲಸೆ ಕಾರ್ಮಿಕರಿಗಿಂತ ಹೆಚ್ಚು ಆದ್ಯತೆ ನೀಡುತ್ತದೆ ಎಂಬ ಭಾವನೆಯನ್ನು ಅನೇಕರು ಆನ್–ಲೈನ್ ತಾಣಗಳಲ್ಲಿ ಹಂಚಿಕೊಂಡಿದ್ದಾರೆ. ವಲಸೆ ಕಾರ್ಮಿಕರು ನೇಪಾಳಕ್ಕೆ ಕಳಿಸುವ ಹಣದ ಹೂಡಿಕೆಯು ವಿದೇಶಿ ಬಂಡವಾಳಕ್ಕಿಂತ ಎಷ್ಟೋ ಹೆಚ್ಚಾಗಿದೆ.

5. **ಅಮೇರಿಕಾ ಮತ್ತು ಭಾರತದ ಬಾಹ್ಯ ಪ್ರಭಾವಗಳು:** ಕೆ.ಪಿ. ಓಲಿ ಅವರ ನಡು–ಬಲಪಂಥೀಯ ಸರ್ಕಾರವು ಯುಎಸ್ ಜತೆಗೆ ನಿಕಟ ಸಂಬಂಧ ಹೊಂದಿತ್ತು. ನೇಪಾಳವು ಫೆಬ್ರವರಿ 2017ರಲ್ಲಿ ಅಮೇರಿಕಾದ ಮಿಲೇನಿಯಮ್ ಚಾಲೆಂಜ್ ಕಾರ್ಪೊರೇಷನ್ (ಎಮ್.ಟಿ.ಸಿ) ಗೆ ಸೇರಿತು, ಆಗಿನ ಎಡಪಂಥೀಯ ಸರ್ಕಾರದ ತೀರ್ಮಾನವು ಎಡಪಂಥದ ದೊಡ್ಡ ಭಾಗಗಳಿಂದ ಭಾರೀ ವಿರೋಧವನ್ನು ಎದುರಿಸಿತು. ಕೆಳಮಟ್ಟದ ಒತ್ತಡದ ಕಾರಣದಿಂದಾಗಿ, ನೇಪಾಳ ಸರ್ಕಾರವು ಎಮ್.ಟಿ.ಸಿ ಯಿಂದ ದೂರ ಉಳಿಯಿತು, ಆದರೆ ಓಲಿ ಅವರ ನಡು–ಬಲಪಂಥೀಯ ಸರ್ಕಾರವು ಆಗಸ್ಟ್ 2025ರಲ್ಲಿ ಅಮೇರಿಕಾದ ನೆರವು ಮರುಪ್ರಾರಂಭಿಸುವುದು ಮತ್ತು ಮೂಲಸೌಕರ್ಯ ಯೋಜನೆಗಳನ್ನು ಮುಂದುವರೆಸುವುದು ಇತ್ಯಾದಿ ಕುರಿತು ಚರ್ಚಿಸಲು ಜಾನ್ ವಿಂಗಲ್ (ಎಮ್.ಟಿ.ಸಿ.ಯ ಉಪ–ಉಪಾಧ್ಯಕ್ಷ) ಅವರನ್ನು ಕಾಠ್ಮಂಡುವಿಗೆ ಸ್ವಾಗತಿಸಿತು.

ಇದೇ ಸಮಯದಲ್ಲಿ, ನರೇಂದ್ರ ಮೋದಿಯ ಭಾರತದ ಅತಿ ಬಲಪಂಥೀಯ ಸರ್ಕಾರವು ನೇಪಾಳದಲ್ಲಿ ಇದುವರೆಗೆ ಅಂಚಿನಲ್ಲಿದ್ದ ಹಿಂದೂ ರಾಷ್ಟ್ರೀಯತಾವಾದಿ ಅತಿ ಬಲಪಂಥೀಯ ಪಕ್ಷದ ಪಾತ್ರವನ್ನು ಪ್ರೋತ್ಸಾಹಿಸಲು ಯತ್ನಿಸಿತು. 2025ರ ಪ್ರತಿಭಟನೆಗಳಲ್ಲಿ ಯಾವುದೇ ಬಾಹ್ಯ ಚಟುವಟಿಕೆ ಇದ್ದರೆ, ಯುಎಸ್‌ಗಿಂತ ಹೆಚ್ಚಾಗಿ ಭಾರತದ ಹಸ್ತಕ್ಷೇಪ ಇರುವ ಸಾಧ್ಯತೆಯಿದೆ. ಆದರೆ, ಇಲ್ಲಿಯೂ ಸಹ, ನೇಪಾಳದ ಅತಿ ಬಲಪಂಥವು ಓಲಿ ಸರ್ಕಾರದ ಪತನ ಮತ್ತು ಭ್ರಷ್ಟಾಚಾರದ ವಿರುದ್ಧದ ಆಕ್ರೋಶದ ಬರಿಯ ಲಾಭ ಪಡೆಯುತ್ತಿರುವ ಸಾಧ್ಯತೆಯೇ ಹೆಚ್ಚು.

ಈಗಿನ ದಂಗೆಯಲ್ಲಿ ಆರ್‌ಪಿಪಿಯ ಯಾವುದೇ ಕಾರ್ಯಾಲಯ ಅಥವಾ ನಾಯಕರ ಮನೆ ದಾಳಿಗೆ ಗುರಿಯಾಗಲಿಲ್ಲ. ಆದರೆ ಇದೇ ವರ್ಷ ಮಾರ್ಚ್‌ನ ಪ್ರತಿಭಟನೆಗಳಲ್ಲಿ ಆರ್‌ಪಿಪಿ (ರಾಜಪ್ರಭುತ್ವ ಪರ ಪಕ್ಷ) ಕಾರ್ಯಕರ್ತರು ಒಂದು ಕಮ್ಯುನಿಸ್ಟ್ ಕಾರ್ಯಾಲಯದ ಮೇಲೆ ದಾಳಿ ಮಾಡಿದ್ದರು. ಇದು ಸೆಪ್ಟೆಂಬರ್‌ನಲ್ಲಿ ಏನಾಯಿತು ಎಂಬುದರ ಪೂರ್ವಭಾವಿ ಸೂಚನೆಯಾಗಿತ್ತು ಎಂಬುದನ್ನು ಗುರುತಿಸುವುದು ಮುಖ್ಯವಾಗಿದೆ.

ಸೇನೆ ಮತ್ತು ಭವಿಷ್ಯ

ಸೇನೆಯು ನೇಪಾಳದಲ್ಲಿ ತಕ್ಕಮಟ್ಟಿನ ಶಾಂತಿಯನ್ನು ಪುನಃಸ್ಥಾಪಿಸಿದಂತೆ ಕಾಣುತ್ತದೆ. ಆದರೆ ಇದು ಅವ್ಯವಸ್ಥೆ ಮತ್ತು ಅಪಾಯದ ಶಾಂತಿಯಾಗಿದೆ. ಮುಂದೆ ಏನಾಗುತ್ತದೆ ಎಂಬುದನ್ನು ನೋಡಬೇಕಾಗಿದೆ. ದಂಗೆ ತಣ್ಣಗಾಗಲು ಸಮಯ ಬೇಕಾಗುತ್ತದೆ. ಕಾಠ್ಮಂಡು ನಗರದ ಮೇಯರ್ ಬಲೇಂದ್ರ ಶಾ ನಂತಹ ಆನ್–ಲೈನ್ ಸೆಲೆಬ್ರಿಟಿಗಳಲ್ಲಿ ಒಬ್ಬರನ್ನು ಅಧಿಕಾರವನ್ನು ತೆಗೆದುಕೊಳ್ಳಲು ಸೇನೆಯು ಆಹ್ವಾನಿಸುವುದೇ? ರಾಜಕೀಯ ಪಕ್ಷಗಳಿಂದ ಸ್ವತಂತ್ರವಾಗಿ ವೃತ್ತಿಜೀವನವನ್ನು ಮಾಡಿದ ಅತ್ಯಂತ ಗೌರವಾನ್ವಿತ ಮಾಜಿ ನೇಪಾಳದ ಪ್ರಧಾನ ನ್ಯಾಯಾಧೀಶ (2016–17) ಸುಶೀಲಾ ಕಾರ್ಕಿ ಅವರನ್ನು ಪ್ರತಿಭಟನಕಾರರು ಸೂಚಿಸಿದ್ದಾರೆ. ಇವು ತಾತ್ಕಾಲಿಕ ಆಯ್ಕೆಗಳಾಗಿವೆ. ಯಾವುದೇ ಗಮನಾರ್ಹ ಬದಲಾವಣೆಗಳನ್ನು ಮಾಡಲು ಅವರಿಗೆ ಅಧಿಕಾರ ಇರುವುದಿಲ್ಲ. ಅವರು ರಾಜಕೀಯದಿಂದ ದೂರವಿದ್ದೇವೆ ಎಂದು ನಟಿಸುತ್ತಾರೆ. ಆದರೆ ಅದು ಪ್ರಜಾಪ್ರಭುತ್ವದ ಬಗ್ಗೆ ಜನಗಳನ್ನು ನಿರಾಶೆಗೊಳಿಸುತ್ತದೆ ಮತ್ತು ದೇಶವನ್ನು ದೀರ್ಘಕಾಲೀನ ಬಿಕ್ಕಟ್ಟಿಗೆ ತಳ್ಳುತ್ತದೆ. ಹೊಸ ಪ್ರಧಾನ ಮಂತ್ರಿಯು ನೇಪಾಳದ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ.

* **ವಿಜಯ್ ಪ್ರಶಾದ್** ಅವರು ಟ್ರೈಕಾಂಟಿನೆಂಟಲ್: ಇನ್ಸ್ಟಿಟ್ಯೂಟ್ ಫಾರ್ ಸೋಶಿಯಲ್ ರಿಸರ್ಚ್‌ನ ನಿರ್ದೇಶಕರಾಗಿದ್ದಾರೆ, ಅತುಲ್ ಚಂದ್ರ ಅವರು ಅದರ ಏಷಿಯಾ ಕಾರ್ಯಕ್ರಮದ ಸಹ–ಸಂಯೋಜಕರಾಗಿದ್ದಾರೆ

ಕಿಡಿಯನ್ನೇ ಕಾಡ್ಗಿಚ್ಚಾಗಿಸಿದ ಬಿಜೆಪಿ....

ಪುಟ 8 ರಿಂದ

ಮಸೀದಿಯಿಂದ ಕಲ್ಲು ಬಂದಿಲ್ಲ: ಐಜಿಪಿ

ದಕ್ಷಿಣವಲಯ ಐಜಿಪಿ ಬೋರಲಿಂಗಯ್ಯನವರ ಪ್ರಕಾರ, ಗಣೇಶನ ಮೆರವಣಿಗೆ ಮೇಲೆ ಕಲ್ಲು ಬಿದ್ದರುವುದು ಸತ್ಯ. ಆ ಸಮಯದಲ್ಲಿ ವಿದ್ಯುತ್ ಸಂಪರ್ಕವನ್ನು ಕೂಡಾ ತೆಗೆಯಲಾಗಿದೆ. ಆದರೆ ಕಲ್ಲುಗಳು ಮಸೀದಿಯ ಕಡೆಯಿಂದ ಬಂದಿರುವ ಸಾಧ್ಯತೆ ಇಲ್ಲ. ಕಲ್ಲುಗಳು ಪಕ್ಕದ ಬೀದಿಯಿಂದ ಬಂದಿವೆ. ಕಲ್ಲನ್ನು ಯಾರು ಬೀಸಾಡಿದರು ಎಂಬುದು ತಿಳಿಯುವ ಮೊದಲೇ ಸಂಘ ಪರಿವಾರ ಪರಿಸ್ಥಿತಿಯ ಲಾಭ ಪಡೆಯಲು ಸಿದ್ದವಾಗಿದ್ದ ಹಿನ್ನೆಲೆಯನ್ನು ಗಮನಸಿದರೆ, ಕಲ್ಲು ಯಾರೇ ಬೀಸಾಡಿದ್ದರೂ ಅಲ್ಲೊಂದು ಸಂಚು ನಡೆದಿರುವ ಸಾಧ್ಯತೆ ಇದೆ. ಇಂತಹ ಸಂಚಿನ ಸಾಧ್ಯತೆ ಇಲ್ಲದಿದ್ದರೆ ಪರಿವಾರದವರ ಸಾವಿನ ಮೆರವಣಿಗೆಗೂ ನೂರು ಜನರನ್ನು ಸೇರಿಸಲು ಶಕ್ತರಲ್ಲದ ಸಂಘಿಗಳು, ರಾತ್ರೋರಾತ್ರಿ ಸಾವಿರಾರು ಜನರನ್ನು ಸೇರಿಸಲು ಸಾಧ್ಯವಾಗುವುದು, ಘಟನೆ ನಡೆದ ಕೆಲವೇ ಹೊತ್ತಿಗೆ ಮದ್ದೂರು ಪಟ್ಟಣ ಬಂದ್‌ಗೆ ಸಿದ್ದತೆ ನಡೆಸುವುದು ಸಾಧ್ಯವೇ ಇರಲಿಲ್ಲ.

ಕಲ್ಲು ತೂರಿದ ಕ್ರಿಮಿನಲ್‌ಗಳನ್ನು ಪತ್ತೆ ಹಚ್ಚಿ ಶಿಕ್ಷಿಸಿ ಎಂದು ಕೇಳುವ ಬದಲು, ಮುಸಲ್ಮಾನರ ಮೇಲೆ ಆರೋಪ ಹೊರಿಸಿ ಬಲಿ ನೀಡಲು ಹವಣಿಸಲಾಯಿತು. ಒಟ್ಟು ಪರಿಸ್ಥಿತಿಯ ಒತ್ತಡಕ್ಕೆ ಒಳಗಾದ ಅಲ್ಪಸಂಖ್ಯಾತರ ಮುಖಂಡರು, ತನಿಖೆ ಪೂರ್ಣಗೊಂಡು ಆರೋಪಿಗಳು



ಸಿಗುವ ಮೊದಲೇ ತಮ್ಮವರನ್ನೇ ಆರೋಪಿ ಸ್ಥಾನದಲ್ಲಿ ನಿಲ್ಲಿಸಿ ತಪ್ಪೊಪ್ಪಿಕೊಂಡರು ಅಂದರೆ ಎಲ್ಲವೂ ಬಿಜೆಪಿ ಮತ್ತು ಸಂಘ ಪರಿವಾರದ ಯೋಜನೆಯಂತೆಯೇ ನಡೆದವು.

ಗಣೇಶನ ಮೆರವಣಿಗೆಯ ಮೇಲೆ ಕಲ್ಲು ತೂರಿದ ಸಣ್ಣ ಕಿಡಿಯೊಂದನ್ನು ಸಂಘ ಪರಿವಾರ ಕಾಡ್ಗಿಚ್ಚಾಗಿ ಪರಿವರ್ತಿಸಿತು. ವಿರೋಧ ಪಕ್ಷದ ನಾಯಕ ಅಶೋಕ್, ಬಿಜೆಪಿಯ ವಿಜಯೇಂದ್ರ, ನಟಿ ಸುಮಲತಾ ಈ ಬೆಂಕಿಯಲ್ಲಿ ಚಳಿ ಕಾಯಿಸಿಕೊಂಡರು. ಆರ್.ಅಶೋಕ್ ವಿರೋಧ ಪಕ್ಷದ ನಾಯಕನ ಘನತೆಯನ್ನು ಮರೆತು ಪುಡಿ ರೌಡಿಯ ಭಾಷೆಯಲ್ಲಿ ಮಾತನಾಡಿದರು. ಬಿಜೆಪಿ ನಾಯಕರೇನೋ ಬೆಂಕಿಯಲ್ಲಿ ಚಳಿ ಕಾಯಿಸಿಕೊಂಡರು, ಆದರೆ ಬೆಂದು ಹೋದದ್ದು ಮಾತ್ರ ಮಂಡ್ಯ ಜಿಲ್ಲೆಯ ಸೌಹಾರ್ದತೆ, ಬದುಕು ಮತ್ತು ಜಿಲ್ಲೆಯ ಜನತೆ ಅಪಾರವಾಗಿ ಅಪ್ಪಿಕೊಂಡಿದ್ದ ಜೆಡಿಎಸ್ ಪಕ್ಷ.

ಬಿಜೆಪಿಯ ಕೋಮುವಾದಿ ರಾಜಕೀಯಕ್ಕೆ ಬಲಿ ಬೀಳದಿರಲಿ

ಬಿಜೆಪಿ ಜಿಲ್ಲೆಯಲ್ಲಿ ನೆಲೆಯೂರಲು ಹತಾಶ ಪ್ರಯತ್ನಗಳನ್ನು ನಡೆಸುತ್ತಿದೆ. ಹಳೇ ಮೈಸೂರು ಪ್ರಾಂತ್ಯದಲ್ಲಿ ಪ್ರಾಬಲ್ಯ ಸಾಧಿಸದೆ ರಾಜ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಬಹುಮತ ಪಡೆಯಲು ಸಾಧ್ಯವಿಲ್ಲ ಎಂಬುದು ಬಿಜೆಪಿಗೆ ಚೆನ್ನಾಗಿ ಅರಿವಾಗಿದೆ. ಹಳೇ ಮೈಸೂರು ಪ್ರಾಂತ್ಯದ ರಾಜಕೀಯದಲ್ಲಿ ಪ್ರಧಾನ ಪಾತ್ರ ಮಂಡ್ಯ ಜಿಲ್ಲೆಗಿದೆ. ಹಾಗಾಗಿಯೇ ಬಿಜೆಪಿಯ ಕೆಂಗಣ್ಣು ಮಂಡ್ಯ ಜಿಲ್ಲೆಯ ಮೇಲೆ ಬಿದ್ದಿದೆ.

ಆದ್ದರಿಂದ ಕಳೆದ ವರ್ಷ ನಾಗಮಂಗಲ, ಈಗ ಮದ್ದೂರು, ಹಿಂದೆ ಶ್ರೀರಂಗಪಟ್ಟಣ, ಕೆರೆಗೋಡು ಹೀಗೆ ಗಲಭೆ ಮತ್ತು ಉದ್ವಿಗ್ನತೆ ಸೃಷ್ಟಿಸಿ ಜಿಲ್ಲೆಯಲ್ಲಿ ನೆಲೆ ಕಂಡುಕೊಳ್ಳಲು ಬಿಜೆಪಿ ಕೆಲಸ ಮಾಡುತ್ತಿದೆ. ಜಿಲ್ಲೆಯ ಪ್ರಜ್ಞಾವಂತ ಜನತೆ ಇಂತಹ ಕ್ಷುಲ್ಲಕ ರಾಜಕಾರಣಕ್ಕೆ ಇಲ್ಲಿಯವರೆಗೂ ಬಲಿಯಾಗಿಲ್ಲ. ಜನತೆಯ ಬದುಕಿನ ಪ್ರಶ್ನೆಗಳಿಗೆ ಯಾವಾಗಲೂ ಕಿವುಡಾಗಿರುವ ಬಿಜೆಪಿ, ಗಲಭೆ ಸಂದರ್ಭಗಳಲ್ಲಿ ರಣಹದ್ದಿನಂತೆ ಮುಗಿ ಬೀಳುತ್ತದೆ. ಮದ್ದೂರಿನ ಬಂದ್ ಮತ್ತು ಪ್ರತಿಭಟನೆಯೂ ಕೂಡಾ ಮುಂದಿನ ವಿಧಾನಸಭೆ ಚುನಾವಣೆಯನ್ನು ಗುರಿಯಾಗಿಸಿಕೊಂಡಿರುವ ಬಿಜೆಪಿಯ ಪ್ರಾಯೋಜನೆಯಾಗಿದೆ.

ನಿರ್ನಾಮದತ್ತ ಜೆಡಿಎಸ್

ಮಂಡ್ಯವೂ ಸೇರಿದಂತೆ ಹಳೇ ಮೈಸೂರು ಪ್ರಾಂತ್ಯದಲ್ಲಿ ಬಿಜೆಪಿ ಅತ್ಯಂತ ದುರ್ಬಲವಾಗಿದೆ. ಅದು ಪ್ರಬಲವಾಗಲು ಜೆಡಿಎಸ್ ಪಕ್ಷವನ್ನೇ ಮುಗಿಸಬೇಕು. ಕಾಂಗ್ರೆಸ್ಸಿಗೂ ಕೂಡಾ ಈ ಪ್ರದೇಶದಲ್ಲಿ ತನಗೆ ಪ್ರಬಲ ಪೈಪೋಟಿ ನೀಡುವ ಜೆಡಿಎಸ್ ಪಕ್ಷವನ್ನು ಮುಗಿಸಬೇಕಾದ ಜರೂರಿದೆ. ಹಾಗಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಸೇರಿ ಜೆಡಿಎಸ್ ಪಕ್ಷಕ್ಕೆ ಗುಂಡಿ ತೋಡುತ್ತಿವೆ.

ಈ ಅಪಾಯವನ್ನು ಅರ್ಥ ಮಾಡಿಕೊಳ್ಳದೆ, ಕೇವಲ ತಕ್ಷಣದ ಲಾಭ ಮತ್ತು ಅಧಿಕಾರಕ್ಕಾಗಿ ಕೋಮುವಾದಿ ಶಕ್ತಿಗಳ ಜೊತೆ ರಾಜಕೀಯ ಆಟ ಆಡುತ್ತಿರುವ ಜೆಡಿಎಸ್ ತಾನು ನಿರ್ನಾಮವಾಗುವುದಲ್ಲದೆ, ಜಿಲ್ಲೆಯನ್ನೂ ನಿರ್ನಾಮ ಮಾಡಲು ಹೊರಟಿದೆ. ಬಿಜೆಪಿ ಜೊತೆಗಿನ ಆತ್ಮಹತ್ಯಾ ರಾಜಕಾರಣವನ್ನು ಜೆಡಿಎಸ್ ಕೈ ಬಿಡದಿದ್ದರೆ ಜೆಡಿಎಸ್ ನಿರ್ನಾಮವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಜಾತ್ಯತೀತ ಎಂದು ಹೇಳಿಕೊಳ್ಳುತ್ತಿದ್ದ ಜೆಡಿಎಸ್, ಸನಾತನಿಗಳಿಗಿಂತಲೂ ಕೀಳು ಭಾಷೆಯಲ್ಲಿ ಮಾತನಾಡುತ್ತಿದೆ. ಬಿಜೆಪಿ ಎಂಬ ಘಟಸರ್ಪದ ಜೊತೆ ಹೋದ ಯಾವುದೇ ಪ್ರಾದೇಶಿಕ ಪಕ್ಷ ತನ್ನ ಅಸ್ತಿತ್ವ ಉಳಿಸಿಕೊಂಡಿಲ್ಲ ಎಂಬುದನ್ನು ಜೆಡಿಎಸ್ ಮನಗಾಣಬೇಕು. ಹಳ್ಳಿಗಳಲ್ಲಿನ ಜೆಡಿಎಸ್ ಕಾರ್ಯಕರ್ತರು ಕೇಸರಿ ಶಾಲು ಹೊದ್ದು ಸಂಘ ಪರಿವಾರದ ಕಾಲಾಳುಗಳಾಗುತ್ತಿದ್ದಾರೆ. ಮುಂದೆ ಜೆಡಿಎಸ್ ಪಶ್ಚಾತ್ತಾಪ ಪಟ್ಟು ಬಿಜೆಪಿ ತೊರೆದರೂ ಜೆಡಿಎಸ್ ಕಾರ್ಯಕರ್ತರು ಸಂಘ ಪರಿವಾರದಲ್ಲೇ ಉಳಿಯುತ್ತಾರೆ. ಆದಷ್ಟು ಬೇಗ ಈ ಅಪಾಯವನ್ನು ಜೆಡಿಎಸ್ ಅರ್ಥ ಮಾಡಿಕೊಳ್ಳದಿದ್ದರೆ ಮಂಡ್ಯ ಜಿಲ್ಲೆಗೆ ಬಂದಿರುವ ಅಪಾಯ ದೀರ್ಘಾವಧಿಯದಾಗಲಿದೆ. ●

ಅನುಭವಗಳ ಜಗತ್ತು: ಬದುಕಿನ ಅನುಭವ

.... ಪುಟ 2 ರಿಂದ

ಒಗ್ಗಟ್ಟನ್ನು ರೂಪಿಸಿಕೊಂಡರು. ಆಗ ಕಾರ್ಮಿಕರ ಸಂಘಟನೆಯ ಪ್ರಯತ್ನಗಳನ್ನು ಕಾಯಿದೆ ಮೂಲಕ ನಿಷೇಧಿಸಲಾಗಿತ್ತಾದ್ದರಿಂದ ರಹಸ್ಯವಾಗಿ ಕಾರ್ಮಿಕರ ಸಂಘಗಳನ್ನು ಕಟ್ಟಿಕೊಂಡರು. ಕೆಲವೊಮ್ಮೆ ಮೈತ್ರಿಕೂಟಗಳ ಹೆಸರಿನಲ್ಲಿ. ಈ ರಹಸ್ಯ ಕಾರ್ಮಿಕ ಸಂಘಗಳು ಕೆಲವು ಪ್ರದೇಶಗಳಲ್ಲಿ ಇಡೀ ಪ್ರದೇಶದ ಅಥವಾ ಒಂದು ಉತ್ಪನ್ನ ತಯಾರಿಸುವ ಎಲ್ಲ ಕಾರ್ಖಾನೆಗಳನ್ನು ಮುಚ್ಚಿಸಿಬಿಡುವಷ್ಟು ವ್ಯಾಪಕವಾಗಿ ಹರಡಿದ್ದವು. ಆದರೆ 1824ರಲ್ಲಿ ಕಾರ್ಮಿಕ ಸಂಘಗಳನ್ನು ಕಾಯಿದೆ ಬದ್ಧಗೊಳಿಸಿದ ನಂತರ ಇದ್ದಕ್ಕಿದ್ದಂತೆ ಈ ಕಾರ್ಮಿಕ ಸಂಘಗಳು ಬಹಿರಂಗಗೊಂಡು ಮೇಲೆದ್ದವು. ಬಲಗೊಳ್ಳಲಾರಂಭಿಸಿದವು. ಕಾರ್ಮಿಕ ಸಂಘಗಳು ಕೈಗೊಂಡ ಕೆಲವೇ ಹೋರಾಟಗಳು ಯಶಸ್ವಿಯಾದವು. ಪ್ರಭುತ್ವ ಬಂಡವಾಳಶಾಹಿ ವರ್ಗದ ಹಿಡಿತದಲ್ಲಿ ಇದ್ದುದರಿಂದ ಹಲವಾರು ಹೋರಾಟಗಳು ವಿಫಲಗೊಂಡವು. ಆದರೆ ಪ್ರತಿಯೊಂದು ಹೋರಾಟವೂ ಕಾರ್ಮಿಕರಿಗೆ ಬಹು ಮುಖ್ಯ ಪಾಠಗಳನ್ನು ಕಲಿಸಿದವು. ಒಂದೊಂದು ಹೋರಾಟವೂ ಬಂಡವಾಳಶಾಹಿಯ ಬಗೆಗಿನ ಅವರ ಅರಿವನ್ನು ಹೆಚ್ಚಿಸಿದವು.

ಕಾಲ್ಪನಿಕ ಸಮಾಜವಾದದ ವಿಚಾರಗಳು

ಕೈಗಾರಿಕಾ ಉತ್ಪಾದನಾ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳು ಎಸಗುತ್ತಿದ್ದ ಶೋಷಣೆ, ಕ್ರೌರ್ಯ ಕಾರ್ಮಿಕರಿಗೆ ನಿತ್ಯ ಸಂಕಟ. ಆದರೆ ಮಾನವೀಯ ಭಾವನೆಯ ಕೆಲವೇ ಬಂಡವಾಳಶಾಹಿಗಳೂ ಕೂಡಾ ಕಣ್ಣಾರೆ ನೋಡಿ ರೋಸಿ ಹೋದರು. ಅಂತಹ ಒಬ್ಬರು ರಾಬರ್ಟ್ ಓವನ್ ಎಂಬ ಒಬ್ಬ ಐನೂರು ಕಾರ್ಮಿಕರನ್ನುಳ್ಳ ಜವಳಿ ಕಾರ್ಖಾನೆಯ ವ್ಯವಸ್ಥಾಪಕ ಭಾಗೀದಾರ. ಅವರು ತನ್ನ ಕಾರ್ಖಾನೆಯಲ್ಲಿ ಕಾರ್ಮಿಕರನ್ನು ಇತರ ಎಲ್ಲ ಕಾರ್ಖಾನೆಗಳಿಗಿಂತ ಕಡಿಮೆ ಅವಧಿಗೆ ದುಡಿಸಿಕೊಂಡರು. ಬಿಕ್ಕಟ್ಟಿನ ಅವಧಿಯಲ್ಲಿ ಬೇರೆಲ್ಲ ಕಾರ್ಖಾನೆಗಳು ಮುಚ್ಚಿಹೋಗಿರುವಾಗ, ಅಥವಾ ಸಂಬಳ ಕಡಿತ ಮಾಡಿರುವಾಗ ತನ್ನ ಕಾರ್ಖಾನೆಯ ಕಾರ್ಮಿಕರಿಗೆ ಪೂರ್ತಿ ಸಂಬಳ ಕೊಟ್ಟರು. ಈ ಕಾರ್ಮಿಕರ ಕುಟುಂಬಗಳನ್ನು ಒಳಗೊಂಡಂತೆ ಹಲವು ವಿವಿಧ ಮೂಲದ ಹತಾಶೆಗೊಂಡ ಬಡವರನ್ನು ಒಳಗೊಂಡು 2500 ಜನರ ಒಂದು ಸಮುದಾಯವನ್ನು ರಚಿಸಿದರು. ಆ ಸಮುದಾಯದಲ್ಲಿ ಎಲ್ಲರಿಗೂ ಉಚಿತ ಶಿಕ್ಷಣ ಮಾತ್ರವಲ್ಲ, ಎರಡು ವರ್ಷದಿಂದಲೇ ಶಿಶು ಶಿಕ್ಷಣ ನೀಡುವ ಪದ್ಧತಿಯನ್ನು ವಿಶ್ವದಲ್ಲೇ ಮೊತ್ತ ಮೊದಲಿಗೆ ಆರಂಭಿಸಿದರು. ಆ ಸಮುದಾಯದಲ್ಲಿ ಯಾವುದೇ ಕುಡುಕತನ, ಅಪರಾಧ, ಪೋಲೀಸು, ಕಾನೂನುಗಳು ಇರಲಿಲ್ಲ. ಈ ಎಲ್ಲ ಕ್ರಮಗಳಿಂದ ಅವರ ಕೈಗಾರಿಕೆಗೆ ನಷ್ಟವಾಗುವ ಬದಲು ದೊಡ್ಡ ಲಾಭ ತಂದಿತು. ಇದರಿಂದಾಗಿ ಇಡೀ ಯುರೋಪಿನಲ್ಲಿ ಪ್ರಸಿದ್ಧರಾದರು. ಈ ಎಲ್ಲ ಪ್ರಯೋಗಗಳ ಆಧಾರದ ಮೇಲೆ ಕಾರ್ಮಿಕರಿಗೆ ಎಂಟು ಗಂಟೆ ಮಾತ್ರ ದುಡಿಮೆಗಾಗಿ ಬಾಲ ಕಾರ್ಮಿಕ ಪದ್ಧತಿ ನಿಷೇಧಕ್ಕಾಗಿ ಕಾಯಿದೆ ತರಲು ಒತ್ತಾಯಿಸಿದರು. ಕಾರ್ಮಿಕರ ಶ್ರಮವೇ ಶ್ರೀಮಂತರ ಸಂಪತ್ತಿನ ವೈಭವದ ಮೂಲ, ನೆಪೋಲಿಯನ್ ವಿರುದ್ಧ ಬ್ರಿಟನ್‌ನ ಜಯದ ಆಧಾರ ಎಂದು ಪ್ರತಿಪಾದಿಸಿದರು. ಉತ್ಪಾದಕರ ಹಾಗೂ ಬಳಕೆದಾರರರ ಸಹಕಾರಿ ಸಂಘಗಳ ಮೂಲಕ ಎಲ್ಲ ವ್ಯವಹಾರಗಳನ್ನು ಸಾಗಿಸಬಹುದು, ವ್ಯಾಪಾರಿಗಳು, ಕೈಗಾರಿಕಾ ಮಾಲಿಕರುಗಳೆಂಬ ವರ್ಗವೇ ಅನವಶ್ಯ ಎಂಬುದನ್ನು ಎತ್ತಿ ತೋರಿಸಿದರು. ಈ ಕ್ರಮಗಳು ಮತ್ತು ವಿಚಾರಗಳಿಂದ ಕಾರ್ಮಿಕ ಸಮುದಾಯದ ಮೇಲೆ ಬಹು ದೊಡ್ಡ ಪ್ರಭಾವ ಬೀರಿದರು. ಬ್ರಿಟನ್‌ನ ಮೊತ್ತ ಮೊದಲ ಕಾರ್ಮಿಕ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಚಾರ್ಟಿಸ್ಟ್ ಹೋರಾಟಗಳು, ಪ್ರತಿಭಟನೆ, ಸಂಘಟನೆಗಳ ಅನುಭವ

ಚಾರ್ಟಿಸ್ಟ್ ಚಳುವಳಿ ಬೆಳೆಯುವ ವೇಳೆಗಾಗಲೇ ಬೆಳೆಯಲಾರಂಭಿಸಿದ್ದ ಕಾರ್ಮಿಕ ಸಂಘಗಳು, ಸಮಾಜವಾದಿ ವಿಚಾರಗಳು ಚಾರ್ಟಿಸ್ಟ್ ಚಳುವಳಿಯನ್ನು ಬಲಗೊಳಿಸಿದವು. (ಸ್ವತಃ ಓವನ್ ಚಾರ್ಟರ್ ಅನ್ನು ಬೆಂಬಲಿಸಲಿಲ್ಲ. ಆದರೂ ಅವರ ವಿಚಾರಗಳು ಮುಖ್ಯ ಪಾತ್ರ ವಹಿಸಿದವು. ಹಿಂದಿನ ಲೇಖನದಲ್ಲಿ ವಿವರಿಸಲಾದ ಚಾರ್ಟಿಸ್ಟ್ ಆರ್ಥಿಕ ಒತ್ತಾಯಗಳು ಈ ಪ್ರಭಾವವನ್ನು ಬಿಂಬಿಸುತ್ತವೆ.) ಈ ಅನುಭವಗಳ ಶ್ರೀಮಂತಿಕೆಯ ಜೊತೆಗೆ ಕಾರ್ಮಿಕರ ಓದು, ಅಧ್ಯಯನಗಳು ಅವರು ತಮ್ಮ ಮೇಲೆ ಹೇರಲಾಗಿದ್ದ ಪಾಳೆಯಗಾರಿ, ಬಂಡವಾಳಶಾಹಿ ಪ್ರಜ್ಞೆಯನ್ನು ಧಿಕ್ಕರಿಸಿ ಸ್ವತಂತ್ರ ಪ್ರಜ್ಞೆಯನ್ನು ರೂಪಿಸಿಕೊಂಡರು ಎಂಬುದು ಮುಂದಿನ ಸಂಚಿಕೆಯಲ್ಲಿ

ಹಸಿವನ್ನು ಅಸ್ತ್ರವಾಗಿಸಿಕೊಂಡಿರುವ ಇಸ್ರೇಲಿ ಯುದ್ಧಯಂತ್ರವನ್ನು ತಡೆಯಲು ಇಸ್ರೇಲಿಗೆ ಬಹಿಷ್ಕಾರ ಮತ್ತು ನಿರ್ಬಂಧಗಳಿಗೆ ಜಗತ್ತಿನಾದ್ಯಂತದ ಅರ್ಥಶಾಸ್ತ್ರಜ್ಞರ ಕರೆ

ಪ್ರಖ್ಯಾತ ಪ್ರಾಧ್ಯಾಪಕರು, ಸಂಶೋಧಕರು ಮತ್ತು ಇತರ ಅಧ್ಯಯನಕಾರರು ಸೇರಿದಂತೆ ವಿಶ್ವದಾದ್ಯಂತದ 140 ಅರ್ಥಶಾಸ್ತ್ರಜ್ಞರು, ಸೆಪ್ಟೆಂಬರ್ 10ರಂದು ಒಂದು ಜಂಟಿ ಹೇಳಿಕೆ ನೀಡಿ, ಪ್ಯಾಲೆಸ್ತೈನ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಮಾನವ ಜೀವನ, ಸಮುದಾಯಗಳು ಮತ್ತು ಭವಿಷ್ಯದ ಮೇಲೆ ಊಹಿಸಲೂ ಆಗದಂತಹ ವಿನಾಶಕ್ಕೆ ಇಸ್ರೇಲ್ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡಬೇಕೆಂದು ಅಂತರರಾಷ್ಟ್ರೀಯ ಸಮುದಾಯ ಮತ್ತು ಯುಎಸ್ ಸರ್ಕಾರಕ್ಕೆ ಕರೆ ನೀಡಿದ್ದಾರೆ. ಇತ್ತೀಚೆಗೆ 23 ಪ್ರಖ್ಯಾತ ಅರ್ಥಶಾಸ್ತ್ರಜ್ಞರು ಇಸ್ರೇಲಿನ ಪ್ರಧಾನ ಮಂತ್ರಿ ಮತ್ತು ನೆಸ್ಸೆಟ್‌ಗೆ ಬರೆದ ಪತ್ರದಿಂದ ಪ್ರೇರಣೆ ಪಡೆದು ಈ ಹೇಳಿಕೆಯನ್ನು ನೀಡಲಾಗಿದೆ. ಏಕೆಂದರೆ, ಆ ಪತ್ರ ಇಸ್ರೇಲ್ ಕ್ಷಾಮ ಮತ್ತು ಹೊರದಬ್ಬುವಿಕೆಯನ್ನು ಶಾಶ್ವತಗೊಳಿಸುತ್ತಿದೆ ಎಂದು ಒಪ್ಪಿಕೊಂಡರೂ, ಅದರ ಪ್ರಸ್ತುತ ಯುದ್ಧದ ಮೂಲ ಕಾರಣಗಳನ್ನು ಗುರುತಿಸಲು ಹೋಗಿಲ್ಲ ಎಂದು ಈ ಜಂಟಿ ಹೇಳಿಕೆ ಅಭಿಪ್ರಾಯ ಪಟ್ಟಿದೆ. ಇಸ್ರೇಲಿ ಪ್ರಧಾನ ಮಂತ್ರಿಯನ್ನು ಯುದ್ಧದ ದಾರಿಯಿಂದ ವಿಚಲಿತಗೊಳಿಸಬಹುದು ಎಂದು ಆಶಿಸುವುದು, ಬೆಂಕಿ ಹಚ್ಚಿದವನನ್ನು ಅದನ್ನು ಆರಿಸಲು ನೆರವಾಗು ಎಂದು ಕೇಳಿದಂತಾಗುತ್ತದೆ ಎಂದು ಅದು ಹೇಳಿದೆ.



ಕಳೆದ 22 ತಿಂಗಳುಗಳಲ್ಲಿ ಅಂತರರಾಷ್ಟ್ರೀಯ ಕಾನೂನು, ಮಾನವ ಹಕ್ಕುಗಳು ಮತ್ತು ಅಂತರರಾಷ್ಟ್ರೀಯ ಭದ್ರತೆ ಕುರಿತ ಈ ಮೊದಲಿನ ಕಲ್ಪನೆಗಳು ಅರ್ಥ, ಅನುರಣನ ಮತ್ತು ಪರಿಣಾಮವನ್ನು ಕಳೆದುಕೊಂಡಿವೆ ಎಂದು ದೃಢಪಟ್ಟಿದೆ. "ಗಾಜಾ ಪಟ್ಟಿಯಲ್ಲಿ ಜೀವನ ಪರಿಸ್ಥಿತಿಗಳ ಬಹುತೇಕ ಸಂಪೂರ್ಣ ವಿನಾಶಕ್ಕೆ ಮತ್ತು ಗಾಜಾ ಪಟ್ಟಿ ಹಾಗೂ ಪಶ್ಚಿಮ ದಂಡೆಯಲ್ಲಿ ಈಗಾಗಲೇ ನಡೆಯುತ್ತಿರುವ ಜನಾಂಗೀಯ ನಿರ್ನಾಮವನ್ನು ಪೂರ್ಣಗೊಳಿಸುವ ಬೆದರಿಕೆಗಳಿಗೆ ಇಸ್ರೇಲ್ ಸರ್ಕಾರವೇ ನೇರಹೊಣೆ ಎಂಬುದನ್ನು ನಿರ್ಲಕ್ಷಿಸಲಾಗುವುದಿಲ್ಲ. ಇದನ್ನು ಗುರುತಿಸದೆ, ಗಾಜಾದಲ್ಲಿ ಹಸಿವನ್ನು ಕೊನೆಗೊಳಿಸುವ ಕರೆಯು ಇಸ್ರೇಲ್ ಅನ್ನು ಹೊಣೆಗಾರಿಕೆಯಿಂದ ರಕ್ಷಿಸುವ ಮತ್ತು ಯುದ್ಧ ಅಪರಾಧಗಳಿಗೆ ಶಿಕ್ಷೆಯಿಂದ ಮುಕ್ತಗೊಳಿಸುವ ಅಪಾಯವನ್ನು ಉಂಟುಮಾಡುತ್ತದೆ, ಇದು ಮುಂಬರುವ ಹಲವು ದಶಕಗಳವರೆಗೆ ಸಮಗ್ರ ವಿನಾಶವನ್ನು ಬಿಟ್ಟು ಹೋಗುತ್ತದೆ ಎಂದು ಈ 140 ಅರ್ಥಶಾಸ್ತ್ರಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಹಸಿವು ಮತ್ತು ನೆರವನ್ನು ಅಸ್ತ್ರಗಳನ್ನಾಗಿ ಬಳಸುವುದು ಗಾಜಾ ಪಟ್ಟಿಯಲ್ಲಿ ನಡೆದಿರುವ ನಿಜವಾದ ಚಿತ್ರದ ಒಂದು ಭಾಗ ಮಾತ್ರ ಎಂದು ಅರ್ಥಶಾಸ್ತ್ರಜ್ಞರ ಹೇಳಿಕೆ ಹೀಗೆ ವಿವರಿಸಿದೆ: "ಗಾಜಾ ಪಟ್ಟಿಯಲ್ಲಿ ಹಸಿವಿನ ಪ್ರಸ್ತುತ ಪರಿಸ್ಥಿತಿಗಳು ತಾತ್ಕಾಲಿಕ, ಅನಿರೀಕ್ಷಿತ ಫಲಿತಾಂಶವಲ್ಲ, ಬದಲಾಗಿ ಸ್ಪಷ್ಟ ಇಸ್ರೇಲಿ ನೀತಿ ಯೋಜನೆಯ ಫಲಿತಾಂಶವಾಗಿದೆ, ಇದನ್ನು ಕೇಳಲು ಸಿದ್ಧವಿರುವ ಯಾರಿಗಾದರೂ ಬಹಿರಂಗವಾಗಿ ತಿಳಿಸಲಾಗಿದೆ. ಪ್ರಪಂಚದಾದ್ಯಂತದ ಅರ್ಥಶಾಸ್ತ್ರಜ್ಞರಾಗಿ, ನಾವು ಎಲ್ಲೆಡೆ ಸಹೋದ್ಯೋಗಿಗಳನ್ನು ಮತ್ತು ಅಂತರರಾಷ್ಟ್ರೀಯ ಸಾರ್ವಜನಿಕ ಅಭಿಪ್ರಾಯವನ್ನು ಉದ್ದೇಶಿಸಿ ಹೇಳುತ್ತಿದ್ದೇವೆಯೇ ಹೊರತು, ಇಸ್ರೇಲ್ ಪ್ರಭುತ್ವನ್ನುದ್ದೇಶಿಸಿ ಅಲ್ಲ. ಏಕೆಂದರೆ ಅದು ಸಾಮೂಹಿಕವಾಗಿ ಅಳಿಸಿ ಹಾಕುವ ಮತ್ತು ವಿನಾಶವನ್ನು ನಡೆಸುವ ತನ್ನ ಉದ್ದೇಶವನ್ನು ಬಹಿರಂಗವಾಗಿ ಹೇಳಿಕೊಂಡಿದೆ ಮತ್ತು ಅದನ್ನು ಜಗತ್ತಿನಾದ್ಯಂತ ದೂರದರ್ಶನದಲ್ಲಿ ನೇರಪ್ರಸಾರ ಮಾಡಿದೆ."

ಇಸ್ರೇಲ್ ಜಗತ್ತಿಗೆ "ಪ್ರಜಾಪ್ರಭುತ್ವ"ದ ಒಂದು ಮುಖವಾಡವನ್ನು ಪ್ರಸ್ತುತಪಡಿಸುತ್ತಲೇ, ಅದು ವಾಸ್ತವವಾಗಿ ಜನಾಂಗೀಯ ನಿರ್ನಾಮದ ಮತ್ತು ಸಾಮೂಹಿಕ ಧ್ವಂಸ ಮತ್ತು ವಿನಾಶದ ಯೋಜನೆಯನ್ನು ಹಾಕಿಕೊಂಡಿದೆ ಎಂದು ಈ ಅರ್ಥಶಾಸ್ತ್ರಜ್ಞರು ಖೇದ ವ್ಯಕ್ತಪಡಿಸಿದ್ದಾರೆ.

ಈ ಯುದ್ಧದ ಅಂತ್ಯವು ಅಗತ್ಯವಾಗಿ ಆಗಬೇಕಾಗಿರುವುದರ ಆರಂಭ ಮಾತ್ರ ಎಂದು ಒತ್ತಿ ಹೇಳುತ್ತಾ ಅವರು ಅಂತರರಾಷ್ಟ್ರೀಯ ಸಮುದಾಯ ಮತ್ತು ವಿಶ್ವಾದ್ಯಂತದ ಆರ್ಥಿಕ ಸಂಸ್ಥೆಗಳು ಮತ್ತು ಸಹೋದ್ಯೋಗಿಗಳನ್ನು ಹೀಗೆಂದು ಆಗ್ರಹಿಸಿದ್ದಾರೆ:

ಯುದ್ಧವನ್ನು ಕೊನೆಗೊಳಿಸಬೇಕೆನ್ನುವುದನ್ನು ತಮ್ಮ ಸರಕಾರಗಳು ಬೆಂಬಲಿಸಬೇಕು, ಇದ್ದು ಇಸ್ರೇಲಿ ದಾಳಿಗಳನ್ನು ಕೊನೆಗೊಳಿಸಲಾಗುವುದು ಮತ್ತು ಗಾಜಾ ಪಟ್ಟಿಯಿಂದ ಇಸ್ರೇಲಿ ಪಡೆಗಳನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲಾಗುವುದು ಎಂಬ ಗಟ್ಟಿಯಾದ ಬದ್ಧತೆಗಳನ್ನು ಒಳಗೊಂಡಿರಬೇಕು ಎಂದು ಆಗ್ರಹಿಸಬೇಕು;

ಗಾಜಾ ಪಟ್ಟಿಗೆ ಪರಿಹಾರ ಸರಬರಾಜು, ಸುಯೋಗ್ಯ ತಾತ್ಕಾಲಿಕ ಆಶ್ರಯ ಮತ್ತು ಕಟ್ಟಡ ಸಾಮಗ್ರಿಗಳು ಬೃಹತ್ ಪ್ರಮಾಣದಲ್ಲಿ ಮತ್ತು ಅಡೆತಡೆಯಿಲ್ಲದೆ ಪ್ರವೇಶಿಸುವುದನ್ನು ಇಸ್ರೇಲ್ ಮತ್ತು ನೆರೆಯ ಪ್ರಭುತ್ವಗಳು ಖಚಿತಪಡಿಸಬೇಕು ಎಂದು ಕರೆ ನೀಡಬೇಕು;

ಪಟ್ಟಿಯಲ್ಲಿ ಮತ್ತು ಆಕ್ರಮಿತ ಪಶ್ಚಿಮ ದಂಡೆಯಲ್ಲಿ ಜನಾಂಗೀಯ ನಿರ್ನಾಮ ಮತ್ತು ವಸಾಹತುಶಾಹಿ ವಿಸ್ತರಣಾ ಯೋಜನೆಗಳನ್ನು ಖಂಡಿಸಬೇಕು ಮತ್ತು ಅಂತರರಾಷ್ಟ್ರೀಯ ಕಾನೂನು ಸಂಸ್ಥೆಗಳು ತಮ್ಮ ಜವಾಬ್ದಾರಿಗಳನ್ನು ಎತ್ತಿಹಿಡಿಯಬೇಕು ಮತ್ತು ಇಸ್ರೇಲನ್ನು ಹೊಣೆಗಾರನಾಗಿ ಮಾಡಲು ಕರೆ ನೀಡಬೇಕು;

ಇಸ್ರೇಲಿನೊಂದಿಗಿನ ಆರ್ಥಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಸಂಬಂಧಗಳನ್ನು ಬಹಿಷ್ಕರಿಸುವುದನ್ನು ಮತ್ತು ಆಕ್ರಮಣ ಮತ್ತು ನರಮೇಧಕ್ಕೆ ಹಣಕಾಸು ಒದಗಿಸುವ ಅರ್ಥವ್ಯವಸ್ಥೆಯಿಂದ ಹೂಡಿಕೆಗಳನ್ನು ಹಿಂತೆಗೆದುಕೊಳ್ಳುವುದನ್ನು, ನಾವೆಲ್ಲರೂ ಕೈಗೊಳ್ಳಬಹುದಾದ ಕಾನೂನು ಮತ್ತು ನೈತಿಕ ಕ್ರಮಗಳೆಂದು ಪ್ರೋತ್ಸಾಹಿಸಬೇಕು ಮತ್ತು,

ಇಸ್ರೇಲಿನೊಂದಿಗೆ ಶಸ್ತ್ರಾಸ್ತ್ರ ವ್ಯಾಪಾರದ ಮೇಲಿನ ನಿಷೇಧಗಳು ಸೇರಿದಂತೆ ಅಗತ್ಯ ನಿರ್ಬಂಧಗಳನ್ನು ಅನ್ವಯಿಸಿ ಅದು ತನ್ನ ಕೃತ್ಯಗಳನ್ನು ನಿಲ್ಲಿಸುವಂತೆ, ಅವುಗಳಿಂದ ದೂರ ಸರಿಯುವಂತೆ ಮಾಡಲು ತಮ್ಮ ಸರ್ಕಾರಗಳನ್ನು ಆಗ್ರಹಿಸಬೇಕು

ಗಾಝಾ ಮತ್ತು ಪ್ಯಾಲೆಸ್ತೈನಿನಲ್ಲಿ ಬದುಕು ಮತ್ತು ಸಾವಿನ ವಾಸ್ತವತೆಗಳನ್ನು ಮತ್ತು ಇಸ್ರೇಲಿ ಸರಕಾರದ ಅಪಾಯಕಾರಿ ಆಶಯಗಳನ್ನು ಗುರುತಿಸುವುದು ಜಗತ್ತಿನಾದ್ಯಂತದ ಅರ್ಥಶಾಸ್ತ್ರಜ್ಞರು, ಅಧ್ಯಯನಶೀಲರು ಮತ್ತು ಸಾರ್ವಜನಿಕ ಚಿಂತಕರ ಕರ್ತವ್ಯ, ಏಕೆಂದರೆ ಮೌನ ಎಂದರೆ ಶಾಮೀಲು ಎಂದೇ ಆಗುತ್ತದೆ ಎನ್ನುತ್ತದೆ ವಿಶ್ವಾದ್ಯಂತದ 140 ಅರ್ಥಶಾಸ್ತ್ರಜ್ಞರ ಈ ಹೇಳಿಕೆ. ●

ಜನಾಂಗದ್ವೇಷಿ ಇಸ್ರೇಲಿ ಹಣಕಾಸು ಸಚಿವರಿಗೆ ಭಾರತ ಸರಕಾರದ ಆತಿಥ್ಯ

ಇಸ್ರೇಲ್ ಹಣಕಾಸು ಸಚಿವ ಬೆಜಲೆಲ್ ಸ್ಮೋಟ್ರಿಚ್ ಅವರ ಭಾರತ ಭೇಟಿಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಬೆಜಲೆಲ್ ಸ್ಮೋಟ್ರಿಚ ಅವರು ಭಾರತ ಸರ್ಕಾರದೊಂದಿಗೆ ದ್ವಿಪಕ್ಷೀಯ ಹೂಡಿಕೆ ಒಪ್ಪಂದಕ್ಕೆ ಸಹಿ ಹಾಕಲು ಇಸ್ರೇಲ್ ನಿಯೋಗದ ನೇತೃತ್ವ ವಹಿಸಿದ್ದರು.

ಸ್ಮೋಟ್ರಿಚ್ ತೀವ್ರ ಬಲಪಂಥೀಯ ಜನಾಂಗವಾದೀ ಪಕ್ಷಕ್ಕೆ ಸೇರಿದವರಾಗಿದ್ದು, ನೆತನ್ಯಾಹು ಸರ್ಕಾರದಲ್ಲಿ ಪ್ಯಾಲೆಸ್ತೀನಿಯನ್ ಜನರನ್ನು ಬಲವಂತವಾಗಿ ಸ್ಥಳಾಂತರಿಸಿ ಗಾಜಾ ಪಟ್ಟಿಯನ್ನು ಆಕ್ರಮಿಸಿಕೊಳ್ಳಬೇಕು ಎಂಬುದರ ಪ್ರಮುಖ ಪ್ರತಿಪಾದಕರು ಮತ್ತು ಆಕ್ರಮಿತ ಪಶ್ಚಿಮ ದಂಡೆಯನ್ನು ಇಸ್ರೇಲ್‌ಗೆ ಸೇರಿಸುವ ಪ್ರಸ್ತಾಪಗಳ ಪ್ರಮುಖ ಪ್ರೇರಕರೂ ಆಗಿದ್ದಾರೆ.



ಪ್ಯಾಲೆಸ್ತೀನಿಯನ್ನರ ಜನಾಂಗೀಯ ನಿರ್ನಾಮವನ್ನು ಒಳಗೊಂಡ ಅವರ ವಿಸ್ತರಣಾವಾದಿ ನೀತಿಗಳ ಪರಿಣಾಮವಾಗಿ, ಹಲವಾರು ದೇಶಗಳು ಅವರಿಗೆ ಪ್ರವೇಶವನ್ನು ನಿಷೇಧಿಸಿವೆ ಮತ್ತು ಅವುಗಳಲ್ಲಿ ಕೆಲವು ಇತರ ನಿರ್ಬಂಧಗಳನ್ನು ಸಹ ವಿಧಿಸಿವೆ. ಈ ದೇಶಗಳಲ್ಲಿ ಯುನೈಟೆಡ್ ಕಿಂಗ್‌ಡಮ್, ಕೆನಡಾ, ಆಸ್ಟ್ರೇಲಿಯಾ, ನಾರ್ವೆ, ನೆದರ್‌ಲ್ಯಾಂಡ್ಸ್, ಸ್ಲೋವೇನಿಯಾ ಮತ್ತು ನ್ಯೂಜಿಲೆಂಡ್ ಸೇರಿವೆ.

ಪ್ರತಿದಿನ ಗಾಜಾದ ಜನರ ಹತ್ಯಾಕಾಂಡ ನಡೆಯುತ್ತಿರುವ ಸಮಯದಲ್ಲಿ ಮೋದಿ ಸರ್ಕಾರವು ಅಂತಹ ವ್ಯಕ್ತಿಗೆ ಆತಿಥ್ಯ ನೀಡಿ ಇಸ್ರೇಲ್ ಸರ್ಕಾರದೊಂದಿಗೆ ಒಪ್ಪಂದಗಳಿಗೆ ಸಹಿ ಹಾಕಿರುವುದು ನಾಚಿಕೆಗೇಡಿನ ಸಂಗತಿ. ಇದು ಮೋದಿ ಸರ್ಕಾರವು ನೆತನ್ಯಾಹು ಸರ್ಕಾರದೊಂದಿಗೆ ಆಳವಾದ, ಬೇರೂರಿದ ಸಂಬಂಧಗಳನ್ನು ಬೆಸೆದಿರುವುದನ್ನು ಮತ್ತು ಗಾಜಾದಲ್ಲಿ ನಡೆಯುತ್ತಿರುವ ಭೀಕರ ನರಮೇಧದಲ್ಲಿ ಅದರ ಶಾಮೀಲನ್ನು ಎತ್ತಿ ತೋರಿಸುತ್ತದೆ.

ಇಸ್ರೇಲ್ ತಕ್ಷಣದ ಕದನ ವಿರಾಮಕ್ಕೆ ಒಪ್ಪಿಕೊಂಡು ಪ್ಯಾಲೆಸ್ತೀನಿಯನ್ ಪ್ರಶ್ನೆಗೆ ನ್ಯಾಯಯುತ ಮತ್ತು ಶಾಂತಿಯುತ ಇತ್ಯರ್ಥಕ್ಕಾಗಿ ಕೆಲಸ ಮಾಡುವ ವರೆಗೆ, ಭಾರತ ಸರ್ಕಾರವು ಇಸ್ರೇಲ್‌ನೊಂದಿಗಿನ ಎಲ್ಲಾ ಮಿಲಿಟರಿ, ಭದ್ರತಾ ಮತ್ತು ಆರ್ಥಿಕ ಸಹಯೋಗವನ್ನು ರದ್ದುಗೊಳಿಸಬೇಕೆಂದು ಪೊಲಿಟ್‌ಬ್ಯುರೋ ಒತ್ತಾಯಿಸಿದೆ. ●

ಟ್ರಂಪ್ ಸುಂಕ: ಭಯೋತ್ಪಾದನೆಯ ಪಾಠಗಳು

ಸುಂಕಗಳನ್ನು ಅಸ್ತ್ರವಾಗಿಸಿಕೊಳ್ಳುವುದು ಸಾಮ್ರಾಜ್ಯಶಾಹಿಯ ಒಂದು ಸಂಪೂರ್ಣ ಹೊಸ ತಂತ್ರ. ಮೂರನೇ ಜಗತ್ತಿನ ದೇಶವೊಂದು ಸಾಮ್ರಾಜ್ಯಶಾಹಿಯ ಆದೇಶವನ್ನು ಧಿಕ್ಕರಿಸುವ ಧೈರ್ಯ ಮಾಡಿದರೆ, ಗಾಜಾದಲ್ಲಿ ಚಿತ್ರ-ವಿಚಿತ್ರ ರೂಪದಲ್ಲಿ ಏನು ನಡೆಯುತ್ತಿದೆಯೋ ಅದನ್ನು ಬೇರೆಡೆಯಲ್ಲಿಯೂ ಸಹ ಆಗು ಮಾಡಬಹುದು. ಅದನ್ನು ಮಿಲಿಟರಿ ಹಸ್ತಕ್ಷೇಪದ ಮೂಲಕವೇ ಸಾಧಿಸಬೇಕು ಎಂದೇನಿಲ್ಲ, ಸುಂಕ-ಭಯೋತ್ಪಾದನೆಯ ಮೂಲಕವೂ ಸಾಧಿಸಬಹುದು ಎಂಬುದನ್ನು ಸಾಮ್ರಾಜ್ಯಶಾಹಿಯು ಎತ್ತಿ ತೋರಿಸುತ್ತಿದೆ. ಇದರಿಂದ ಕಲಿಯಬೇಕಾದ ಪಾಠವೆಂದರೆ, ಪ್ರಧಾನವಾಗಿ ಆಂತರಿಕ-ಮಾರುಕಟ್ಟೆ ಆಧರಿತ, ಸ್ವಾವಲಂಬನೆಯ, ನಿಯಂತ್ರಣ ನೀತಿಗಳ ಅಭಿವೃದ್ಧಿ ಕಾರ್ಯತಂತ್ರವು ವಸಾಹತೀಕರಣದಿಂದ ಹೊರಬರುವಲ್ಲಿ ಒಂದು ಅಗತ್ಯ ಪೂರಕ ಅಂಶವಾಗುತ್ತದೆ ಎಂಬುದು. ಆದ್ದರಿಂದ, ಭಾರತದಂತಹ ಒಂದು ದೇಶವು ತನ್ನ ಅಭಿವೃದ್ಧಿ ಕಾರ್ಯತಂತ್ರವನ್ನು ಬದಲಾಯಿಸಿಕೊಳ್ಳುವುದು ಅಗತ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮೋದಿ ಸರ್ಕಾರವು ಏನನ್ನೂ ಮಾಡುತ್ತಿಲ್ಲ ಮಾತ್ರವಲ್ಲ, ವಾಸ್ತವವಾಗಿ ಅಮೆರಿಕವನ್ನು ಸಂತುಷ್ಟಗೊಳಿಸಲು ರಿಯಾಯಿತಿಗಳನ್ನು ನೀಡಲು ಪ್ರಯತ್ನಿಸುತ್ತಿದೆ.



ಪ್ರೊ. ಪ್ರಭಾತ್ ಪಟ್ನಾಯಕ್
ಅನು. ಕೆ.ಎಂ.ನಾಗರಾಜ್

ಆಮದು ಮಾಡಿಕೊಳ್ಳುವ ಸರಕುಗಳ ದೇಶೀಯ ಉತ್ಪಾದಕರಿಗೆ ರಕ್ಷಣೆ ಒದಗಿಸಬೇಕು ಎಂದು ಒಂದು ದೇಶದ ಸರ್ಕಾರವು ಬಯಸಿದರೆ, ಆಗ ಅದು ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಸುಂಕಗಳನ್ನು ವಿಧಿಸುತ್ತದೆ ಎಂಬುದನ್ನು ಅರ್ಥಶಾಸ್ತ್ರದ ಪಠ್ಯಪುಸ್ತಕಗಳು ನಮಗೆ ತಿಳಿಸುತ್ತವೆ. ಆದರೆ, ಡೊನಾಲ್ಡ್ ಟ್ರಂಪ್‌ರ ಸುಂಕಗಳು ಇನ್ನೂ ವ್ಯಾಪಕವಾದೊಂದು ಉದ್ದೇಶವನ್ನು ಈಡೇರಿಸುತ್ತವೆ: ಒಂದು ಮಿಲಿಟರಿ ಹಸ್ತಕ್ಷೇಪವು, ಅಥವಾ ಒಂದು ದಂಗೆಯು ಅಥವಾ ಒಂದು ಭಯೋತ್ಪಾದಕ ದಾಳಿಯು ಉಂಟುಮಾಡುವ ಪರಿಣಾಮದ ರೀತಿಯಲ್ಲಿ, ಡೊನಾಲ್ಡ್ ಟ್ರಂಪ್ ಅವರ ಸುಂಕಗಳು ರಫ್ತುದಾರ ದೇಶಗಳನ್ನು ಟ್ರಂಪ್ ಅವರ ಇಚ್ಛೆಗೆ ತಕ್ಕಂತೆ ಬಗ್ಗುವಂತೆ ಮಾಡುತ್ತವೆ. ಉದಾಹರಣೆಗೆ, ಭಾರತದ ಉಡುಪುಗಳ ಮೇಲೆ ಹೇರಿದ ಶೇ. 50ರಷ್ಟು ಸುಂಕಗಳಿಂದಾಗಿ ಭಾರತದ ರಫ್ತುದಾರರಿಗೆ ಹೊಡೆತ ಬೀಳುತ್ತದೆ. ಈ ಸುಂಕಗಳನ್ನು ಅಮೇರಿಕನ್ ಉಡುಪು ಉತ್ಪಾದಕರ ರಕ್ಷಣೆಗಾಗಿ ಟ್ರಂಪ್ ಹೇರಿರುವುದಲ್ಲ. ಬದಲಾಗಿ, ಅವರ ಇಚ್ಛೆಗೆ ತಕ್ಕಂತೆ ಭಾರತವನ್ನು ಮಣಿಸುವಂತೆ ಮಾಡುವುದಕ್ಕಾಗಿ.

ಇದು ಟ್ರಂಪ್ ಸುಂಕ ನೀತಿಯಲ್ಲಿರುವ ವಿಪರೀತಗಳನ್ನು ವಿವರಿಸುತ್ತದೆ. ಭಾರತದ ರಫ್ತುಗಳ ವಿರುದ್ಧ ಟ್ರಂಪ್ ಹೇರಿರುವ ಶೇ. 50ರ ವರೆಗಿನ ಸುಂಕಗಳು, ರಷ್ಯಾದ ಇಂಧನವನ್ನು ಭಾರತ ಖರೀದಿಸಿದ್ದಕ್ಕಾಗಿ ವಿಧಿಸಿದ ಒಂದು ಶಿಕ್ಷೆ ಎಂದು ಭಾವಿಸಲಾಗಿದೆ. ಚೀನಾವು ರಷ್ಯಾ ಇಂಧನದ ಅತಿದೊಡ್ಡ ಖರೀದಿದಾರ ದೇಶ. ರಷ್ಯಾದಿಂದ ಭಾರತವು ಕೊಳ್ಳುವುದಕ್ಕಿಂತ ಅತಿ ಹೆಚ್ಚು ಪ್ರಮಾಣದ ಇಂಧನವನ್ನು ಚೀನಾ ಕೊಳ್ಳುತ್ತದೆ. ಆದಾಗ್ಯೂ, ಚೀನಾದ ಬಹುತೇಕ ಆಮದುಗಳ ಮೇಲೆ ಅಮೆರಿಕಾ ವಿಧಿಸುವ ಸುಂಕ ದರವು ಶೇ. 50ಕ್ಕಿಂತಲೂ ಕಡಿಮೆ ಇದೆ. ಈ ಸುಂಕ-ಭೇದದ ಕಾರಣವೆಂದರೆ, ಭಾರತವನ್ನು ಲಘುವಾಗಿ ತೆಗೆದುಕೊಳ್ಳಬಹುದು, ಚೀನಾವನ್ನಲ್ಲ ಎಂಬುದು. ಅಮೆರಿಕ ತೊಂದರೆ ಕೊಟ್ಟರೆ, ಚೀನಾ ಪ್ರತೀಕಾರ ಕೈಗೊಳ್ಳಬಲ್ಲದು. ಉದಾಹರಣೆಗೆ, ಅಪರೂಪದ ಭೂ-ಖನಿಜಗಳ ರಫ್ತನ್ನು ಚೀನಾ ನಿಲ್ಲಿಸಿತು. ಆದರೆ, ಭಾರತವು ಯಾವುದೇ ಪ್ರತೀಕಾರದ ಬೆದರಿಕೆಯನ್ನೂ ಹಾಕಲಿಲ್ಲ. ಈ ವಿಷಯದಲ್ಲಿ ಬ್ರೆಜಿಲ್ ಕೂಡ ಭಾರತಕ್ಕಿಂತ ಬಹಳ ಭಿನ್ನವಾಗಿದೆ. ಅದು ಅಮೆರಿಕದ ವಿರುದ್ಧ ಶೇ. 50 ಸುಂಕ ವಿಧಿಸುವ ಮೂಲಕ ಪ್ರತೀಕಾರ ಪ್ರಕ್ರಿಯೆಯನ್ನು ಪ್ರಾರಂಭಿಸಿದ ಮತ್ತಿನ್ನೊಂದು ಏಕೈಕ ದೇಶವಾಗಿದೆ.

ಬ್ರೆಜಿಲ್ ದೇಶದ ಸರಕುಗಳ ಮೇಲೆ ಶೇ. 50 ಸುಂಕ ವಿಧಿಸುವ ಟ್ರಂಪ್ ಅವರು ಹೇಳುವ ಕಾರಣವು ಇನ್ನೂ ವಿಚಿತ್ರವಾಗಿದೆ. ಅದು ಚುನಾವಣೆಯಲ್ಲಿ ಸೋತಿರುವ ಅದರ ನವ-ಫ್ಯಾಸಿಸ್ಟ್ ಮಾಜಿ ಅಧ್ಯಕ್ಷ ಜೈರ್ ಬೋಲ್ಸೊನಾರೊರನ್ನು ವಿಚಾರಣೆಗೆ ಗುರಿಪಡಿಸಿದ್ದಕ್ಕಾಗಿ ವಿಧಿಸಿದ ಶಿಕ್ಷೆ ಎಂದು ಭಾವಿಸಲಾಗಿದೆ ಮತ್ತು ಆತನನ್ನು ಗೌರವಯುತವಾಗಿ ಖುಲಾಸೆಗೊಳಿಸಬೇಕು ಎಂಬುದು ಟ್ರಂಪ್ ಅಪೇಕ್ಷೆ.

ಇದು ಮತ್ತೊಂದು ದೇಶದ ನ್ಯಾಯ ವ್ಯವಸ್ಥೆಯಲ್ಲಿ ಮಾಡಿದ ವಿಸ್ಮಯಕಾರೀ ಹಸ್ತಕ್ಷೇಪವಾಗುತ್ತದೆ. ಇದಕ್ಕೆ ಟ್ರಂಪ್ ಅವರ ಜಗಳಗಂಟಿತನವು ಕಾರಣವಾಗಿರಲಾರದು. ಭಾರತವನ್ನು ಮತ್ತು ಬ್ರೆಜಿಲನ್ನು ಪ್ರತ್ಯೇಕಿಸಿ ಅವುಗಳ ಮೇಲೆ ಶೇ. 50 ಸುಂಕ ವಿಧಿಸುವ ಟ್ರಂಪ್‌ರ ನಿಜ ಕಾರಣವೆಂದರೆ, ಮೂರನೇ ಜಗತ್ತಿನ ಈ ಎರಡು ದೊಡ್ಡ ದೇಶಗಳು ಯುಎಸ್ ಸಾಮ್ರಾಜ್ಯಶಾಹಿಯ ವಿರುದ್ಧವಾಗಿ ರಚಿಸುವ ಯಾವುದೇ ಸಂಯುಕ್ತ ರಂಗವನ್ನು ಮುರಿಯುವುದೇ ಆಗಿರಬೇಕು.

ಸಾಮ್ರಾಜ್ಯಶಾಹಿಯ ಹೊಸ ಅಸ್ತ್ರ

ಸುಂಕಗಳನ್ನು ಅಸ್ತ್ರವಾಗಿಸಿಕೊಳ್ಳುವುದು ಸಾಮ್ರಾಜ್ಯಶಾಹಿಯ ಒಂದು ಸಂಪೂರ್ಣ ಹೊಸ ತಂತ್ರವೇ ಸರಿ. ವಸಾಹತುಶಾಹಿಯಿಂದ ಹೊರಬಂದ ನಂತರ ಮೂರನೆಯ ಜಗತ್ತಿನ ಬಹತೇಕ ದೇಶಗಳು ಸ್ವಾವಲಂಬನೆಯನ್ನು ಉತ್ತೇಜಿಸುವ, ದೇಶೀಯ ಮಾರುಕಟ್ಟೆಯನ್ನು ವಿಸ್ತರಿಸುವ ಮತ್ತು ಉತ್ಪಾದನೆಯನ್ನು ಹಾಗೂ ತಾಂತ್ರಿಕ ಸಾಮರ್ಥ್ಯಗಳನ್ನು ದೇಶೀಯವಾಗಿ ಅಭಿವೃದ್ಧಿಪಡಿಸುವ ಸಾಧನವಾಗಿ ಸಾರ್ವಜನಿಕ ವಲಯವನ್ನು ಬಳಸಿಕೊಳ್ಳುವ 'ನಿಯಂತ್ರಣ' ನೀತಿಗಳ ಒಂದು ಕಾರ್ಯತಂತ್ರವನ್ನು ಅನುಸರಿಸಿದವು. ಇದರ ವಿರುದ್ಧವಾಗಿ ಸಾಮ್ರಾಜ್ಯಶಾಹಿಯು ಇನ್ನಿಲ್ಲದ ಹೋರಾಟವನ್ನು ಹರಿಯಬಿಟ್ಟಿತು, ಆರಂಭದಲ್ಲಿ, ಪೂರ್ವ ಏಷ್ಯಾದಲ್ಲಿ, "ನಾಲ್ವರ ಪಟಾಲಂ" ಎಂದು ಕರೆಯಲ್ಪಡುವ



ಹಾಂಗ್ ಕಾಂಗ್, ಸಿಂಗಾಪುರ್, ತೈವಾನ್ ಮತ್ತು ದಕ್ಷಿಣ ಕೊರಿಯಾ ದೇಶಗಳ ತಥಾಕಥಿತ ಯಶಸ್ಸನ್ನು ಒಳಗೊಂಡ ಒಂದು ಸೈದ್ಧಾಂತಿಕ ಅಂಶ ಇದರ ಒಂದು ಭಾಗವಾಗಿತ್ತು. ವಿಶ್ವ ಬ್ಯಾಂಕ್ ಅಭಿವೃದ್ಧಿ ಕಾರ್ಯತಂತ್ರಗಳಲ್ಲಿ "ಅಂತರ್ಮುಖಿ" ಮತ್ತು "ಬಹಿರ್ಮುಖಿ" ಎಂಬ ವ್ಯತ್ಯಾಸವನ್ನು ಮಾಡಿ, ಪೂರ್ವ ಏಷ್ಯಾದ ಈ ನಾಲ್ವರ "ಬಹಿರ್ಮುಖಿ" ಕಾರ್ಯತಂತ್ರದ ಯಶಸ್ಸನ್ನು ಹೊಗಳುವ ಮೂಲಕ ಅದರ ಶ್ರೇಷ್ಠತೆಯನ್ನು ಪ್ರಚುರಪಡಿಸುವ ಕಾರ್ಯವನ್ನು ಆರಂಭಿಸಿತು.

"ಬಹಿರ್ಮುಖಿ" ಕಾರ್ಯತಂತ್ರವನ್ನು ಅನುಸರಿಸಿದ ಪೂರ್ವ ಏಷ್ಯಾದ "ನಾಲ್ವರ ಪಟಾಲಂ" ಸಾಧಿಸಿದ ರಫ್ತು ಮತ್ತು ಜಿಡಿಪಿ ಬೆಳವಣಿಗೆ ದರಗಳ ಪ್ರತ್ಯಕ್ಷ ಅನುಭವವನ್ನು ಎಲ್ಲ ದೇಶಗಳೂ ಅನುಕರಿಸಬಹುದು ಎಂಬ ಒಂದು ಸಂಪೂರ್ಣ ಅಪ್ರಾಮಾಣಿಕ ಬೌದ್ಧಿಕ ವಾದವನ್ನು ಬಳಸಲಾಯಿತು. ಈ ವಾದವು ಅಸಂಬದ್ಧವಾಗಿದೆ. ಏಕೆಂದರೆ, ಎಲ್ಲ ದೇಶಗಳ ರಫ್ತು ಬೆಳವಣಿಗೆಯ ದರವನ್ನು ಒಟ್ಟಾಗಿ ತೆಗೆದುಕೊಂಡರೆ ಅದರ ಮೇಲೆ ವಿಶ್ವ ಮಾರುಕಟ್ಟೆಯ ಬೆಳವಣಿಗೆಯ ದರದ ನಿರ್ಬಂಧ ಇರುತ್ತದೆ. ಹಾಗಾಗಿ, ಕೆಲವು ದೇಶಗಳ ವೇಗದ ಬೆಳವಣಿಗೆಯು ಉಳಿದ ದೇಶಗಳ ನಿಧಾನಗತಿಯ ಬೆಳವಣಿಗೆಯೊಂದಿಗೆ ಇರಬೇಕಾಗುತ್ತದೆ. ಆದರೆ, ಪ್ರತಿಯೊಂದು ದೇಶವೂ ಒಂದು "ಸಣ್ಣ ದೇಶ"ವೆಂದೂ, ಅದು ತನಗೆ ಬಯಸಿದಷ್ಟನ್ನು ರಫ್ತು ಮಾಡಬಹುದು ಎಂಬ ಊಹನೆಯ ಮೂಲಕ ಈ ತರ್ಕವನ್ನು ತಳ್ಳಿಹಾಕಲಾಯಿತು.

ಈ ಚರ್ಚೆಯನ್ನು ಎರಡು ಅಂಶಗಳು ಸಾಮ್ರಾಜ್ಯಶಾಹಿಯ ತರ್ಕದ ಕಡೆಗೆ ತಿರುಗಿಸಿದವು. ಮೊದಲನೆಯದು, ಚೀನಾದ ರಫ್ತು ಯಶಸ್ಸು. ಅದು ಸಂಪೂರ್ಣವಾಗಿ ಒಂದು ವಿಭಿನ್ನ ಸಾಮಾಜಿಕ-ಆರ್ಥಿಕ ಸನ್ನಿವೇಶದಲ್ಲಿ ಮತ್ತು ಒಂದು ವಿಭಿನ್ನ ಅಭಿವೃದ್ಧಿ ದಿಕ್ಪಥದಲ್ಲಿ ಬೇರೂರಿದ್ದರೂ ಸಹ, "ಬಹಿರ್ಮುಖಿ" ಕಾರ್ಯತಂತ್ರದ ಶ್ರೇಷ್ಠತೆಯನ್ನು ಅದು ದೃಢೀಕರಿಸುತ್ತದೆ ಎಂದು ಜಗತ್ತಿಗೆ ಪ್ರಸ್ತುತಪಡಿಸಲಾಯಿತು. ಎರಡನೆಯದು, ಮೆಟ್ರೋಪಾಲಿಟನ್(ಮುಂದುವರೆದ ಬಂಡವಾಳಶಾಹಿ) ದೇಶಗಳು ಬಂಡವಾಳದ ಚಟುವಟಿಕೆಗಳನ್ನು ಮೂರನೆಯ ಜಗತ್ತಿನ ದೇಶಗಳಿಗೆ ಸ್ಥಳಾಂತರಿಸಲು ಸಿದ್ಧವಾಗಿವೆ ಎಂದು ತೋರಿಸಿಕೊಂಡಿರುವುದು; ಇಂತಹ ಸ್ಥಳಾಂತರವು ಬಂಡವಾಳಶಾಹಿಯನ್ನು ಮೂರನೆಯ ಜಗತ್ತಿನ ದೇಶಗಳಿಗೆ ಹರಡುತ್ತದೆ ಮತ್ತು ಈ ಮೂಲಕ ಎರಡು ಜಗತ್ತುಗಳ ನಡುವಿನ ಇಬ್ಭಾಗವನ್ನು ಸಂಪೂರ್ಣವಾಗಿ ನಿವಾರಿಸುತ್ತದೆ ಎಂದು ವಾದಿಸಲಾಯಿತು. ಇಲ್ಲಿ, ಈ ಮೆಟ್ರೋಪಾಲಿಟನ್ ದೇಶಗಳು ತಮ್ಮ ದೇಶೀಯ ಅರ್ಥವ್ಯವಸ್ಥೆಗಳಲ್ಲಿ ನಿರುದ್ಯೋಗವನ್ನು ಉಂಟುಮಾಡುವ ಈ ಸ್ಥಳಾಂತರವನ್ನು ತಡೆಯುವ ಕ್ರಮಗಳನ್ನು ಕೈಗೊಳ್ಳದೇ ಸದಾ ಸುಮ್ಮನೇ ಕುಳಿತುಕೊಳ್ಳುತ್ತವೆ ಎಂದು ಊಹಿಸಿಕೊಂಡಂತೆ ಕಾಣುತ್ತದೆ.

ಕೈತಿರುಚುವ ಶಕ್ತಿ ಒದಗಿಸಿದ ನವ-ಉದಾರವಾದ

ಈ ಎಲ್ಲ ಅಂಶಗಳೂ ವಾದವನ್ನು 'ನಿಯಂತ್ರಣ' ನೀತಿಗಳ ವಿರುದ್ಧವಾಗಿ ವಾಲುವಂತೆ ಮಾಡಿದವು. ನಿಜ, ಇದರ ಭೌತಿಕ ಆಧಾರವಿದ್ದದ್ದು ದೊಡ್ಡ ಬಂಡವಳಿಗರ ವರ್ಗಹಿತಾಸಕ್ತಿಯಲ್ಲಿ; ಈ ವರ್ಗ ಜಾಗತಿಕವಾಗುವುದರಿಂದ ತಮ್ಮ ಭಾಗ್ಯ ಅರಳುತ್ತದೆ ಎಂಬ ಆಕರ್ಷಣೆಗೊಳಗಾಯಿತು. ಇದರೊಂದಿಗೆ, ನಗರಗಳ ಮೇಲ್ಮಧ್ಯಮ ವರ್ಗದ ಹಿತಾಸಕ್ತಿಗಳು ಸೇರಿಕೊಂಡವು. ಏಕೆಂದರೆ ಇವರ ಮಕ್ಕಳು ಹೆಚ್ಚೆಚ್ಚಾಗಿ ದೇಶದಿಂದ ಹೊರಹೋಗಿ ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ನೆಲೆಗೊಳ್ಳಲಾರಂಭಿಸಿದರು. ಇವರು ತಮಗೆ ತಮ್ಮ ದೇಶದ ಕಾರ್ಮಿಕರು ಮತ್ತು ರೈತರಿಗಿಂತ ಹೆಚ್ಚಾಗಿ ಆ ಮೆಟ್ರೋಪಾಲಿಟನ್ ದೇಶಗಳೇ ನಿಕಟವಾಗಿವೆ ಎಂದು ಕಾಣಲಾರಂಭಿಸಿದರು ಮತ್ತು ಈಗಲೂ ಕಾಣುತ್ತಿದ್ದಾರೆ. ಈ ಮಧ್ಯೆ, ವಿಶೇಷವಾಗಿ ತೈಲ ಆಘಾತಗಳ ನಂತರ ಮೂರನೆಯ ಜಗತ್ತಿನ ಹಲವಾರು ದೇಶಗಳು ಎದುರಿಸಿದ ಪಾವತಿ ಶೇಷದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ಸಕ್ರಿಯಗೊಂಡವು. 'ನಿಯಂತ್ರಣ' ನೀತಿಗಳ ಆಳ್ವಿಕೆಯನ್ನು ಒಳಗಿನಿಂದಲೇ ಬುಡಮೇಲುಗೊಳಿಸುವ ಉದ್ದೇಶದಿಂದ ಅವು ತಮ್ಮ ಉದ್ಯೋಗಿಗಳನ್ನು ಮೂರನೆಯ ಜಗತ್ತಿನ ಹಲವಾರು ದೇಶಗಳ ಹಣಕಾಸು ಸಚಿವಾಲಯಗಳಲ್ಲಿ ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಆಯಕಟ್ಟಿನ ಸ್ಥಾನಗಳಲ್ಲಿ, ಆರಂಭಿಕವಾಗಿ ಆಫ್ರಿಕಾದ ದೇಶಗಳಲ್ಲಿ ಮತ್ತು ನಂತರ ಉಳಿದ ದೇಶಗಳಲ್ಲಿ, ಇರಿಸಿದವು. ಈ ಕ್ರಮವನ್ನು ಒಪ್ಪಿಕೊಳ್ಳಲು ಭಾರತವು ಅನೇಕ ವರ್ಷಗಳ ಕಾಲ ಹಿಂದೇಟು ಹಾಕಿತು. ಅಂತಿಮವಾಗಿ ಅದೂ ಸಹ 1991ರಲ್ಲಿ ಒಪ್ಪಿಕೊಂಡಿತು.

ನಂತರ ಜಾರಿಗೆ ಬಂದ ನವ ಉದಾರವಾದಿ ಆಳ್ವಿಕೆಯಲ್ಲಿ ಏನೆಲ್ಲ ಸಂಭವಿಸಿತು ಎಂಬುದನ್ನು ವಿವರಿಸುವುದು ಇಲ್ಲಿ ಅಗತ್ಯವಿಲ್ಲ. ಆದರೆ ಈಗ, ಮೂರನೆಯ ಜಗತ್ತಿನ ದೇಶಗಳಿಗೆ ಮೆಟ್ರೋಪಾಲಿಟನ್ ದೇಶಗಳ ಮಾರುಕಟ್ಟೆಗಳ ಅವಲಂಬನೆಯ ಆಮಿಷವೊಡ್ಡಿದ ಮತ್ತು "ನಿಯಮ-ಆಧಾರಿತ" ಅಂತಾರಾಷ್ಟ್ರೀಯ ವ್ಯವಸ್ಥೆಯ ಬಗ್ಗೆ ದೊಡ್ಡ ದೊಡ್ಡದಾಗಿ ಮಾತನಾಡಿದ ಸಾಮ್ರಾಜ್ಯಶಾಹಿಯು ಈಗ ಸುಂಕಗಳನ್ನು ಹೇರುವ ಮೂಲಕ ಈ ದೇಶಗಳು ತನ್ನ ಆದೇಶವನ್ನು ಪಾಲಿಸುವಂತೆ ಕೈತಿರುಚಬಲ್ಲದಾಗಿದೆ ಎಂಬುದು ಸ್ಪಷ್ಟವಾಗುತ್ತಿದೆ.

ಲಕ್ಷಾಂತರ ಮಹಿಳಾ ಕಾರ್ಮಿಕರೂ ಸೇರಿದಂತೆ ಲಕ್ಷ ಲಕ್ಷಗಟ್ಟಲೆ ಮೂರನೆಯ ಜಗತ್ತಿನ ಅದೃಷ್ಟಹೀನ ರೈತರಿಗೆ ಮತ್ತು ಕಾರ್ಮಿಕರಿಗೆ ದುರ್ಗತಿಯನ್ನುಂಟುಮಾಡುವ ಬೆದರಿಕೆಯನ್ನು ಅದು ಹಾಕಬಲ್ಲದು. ಈ ದುರ್ಗತಿಯು ಈಗಾಗಲೇ ಭಾರತದ ಹತ್ತಿ ರೈತರ ಬೆನ್ನು ಹತ್ತಿದೆ ಎಂಬುದು ಬೃಹತ್ ಕೃಷಿ ಸಬ್ಸಿಡಿಗಳನ್ನು ಬಳಸಿಕೊಂಡು ಬೆಳೆದ ಅಮೆರಿಕದ ಹತ್ತಿಯ ಮೇಲೆ ಭಾರತವು ವಿಧಿಸುತ್ತಿದ್ದ ಶೇ. 11ರ ಆಮದು ಸುಂಕವನ್ನು ಮೋದಿ ಸರ್ಕಾರವು ಇತ್ತೀಚೆಗೆ ತೆಗೆದುಹಾಕಿದ ಕ್ರಮದ ಮೂಲಕ ಸ್ಪಷ್ಟವಾಗಿದೆ. ಭಾರತದ ಜವಳಿ ಮತ್ತು ಉಡುಪು ರಫ್ತುಗಳ ಮೇಲೆ ಶೇ. 50ರಷ್ಟು ಅತಿ ಹೆಚ್ಚಿನ ಸುಂಕವನ್ನು ಹೇರುವ ಬೆದರಿಕೆಯು ಭಾರತದ ಮಟ್ಟಿಗೆ ಅಮೆರಿಕದ ಮಾರುಕಟ್ಟೆಯು ಮುಚ್ಚಿಹೋಗುವ ಮೂಲಕ ರೈತರ ಆತ್ಮಹತ್ಯೆಗಳು ಹೆಚ್ಚುತ್ತವೆ ಮತ್ತು ಲಕ್ಷಾಂತರ ಜವಳಿ ಕಾರ್ಮಿಕರು ಬೀದಿಗೆ ಬೀಳುತ್ತಾರೆ.

ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಮೂರನೇ ಜಗತ್ತಿನ ದೇಶವೊಂದು ಸಾಮ್ರಾಜ್ಯಶಾಹಿ ಆದೇಶವನ್ನು ಧಿಕ್ಕರಿಸುವ ಧೈರ್ಯ ಮಾಡಿದರೆ, ಗಾಜಾದಲ್ಲಿ ಚಿತ್ರ-ವಿಚಿತ್ರ ರೂಪದಲ್ಲಿ ಏನು ನಡೆಯುತ್ತಿದೆಯೋ ಅದನ್ನು ಬೇರೆಡೆಯಲ್ಲಿಯೂ ಸಹ ಆಗು ಮಾಡಬಹುದು. ಅದನ್ನು ಮಿಲಿಟರಿ ಹಸ್ತಕ್ಷೇಪದ

ಪುಟ 14 ಕ್ಕೆ

ಸರಕುಗಳ ಮೇಲೆ ಅಲ್ಲ ದೇಶದ ಮೇಲೆ ತೆರಿಗೆಯ ದಾಳಿ



ಸಂಸದ ಎಸ್. ವೆಂಕಟೇಶನ್

ಭಾರತದಿಂದ ಅಮೆರಿಕಕ್ಕೆ ಹೋಗುವ ಸರಕುಗಳ ಮೇಲೆ ಈಗಾಗಲೇ ಶೇ.16 ತೆರಿಗೆ ಇತ್ತು. ಮಾತುಕತೆಯ ಸಮಯದಲ್ಲಿ ಒಪ್ಪಂದಕ್ಕೆ ಬರಲಿಲ್ಲ ಎಂದು ಟ್ರಂಪ್ ಶೇ.25 ತೆರಿಗೆ ವಿಧಿಸಿದರು. ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸುವಂತೆ ಬೆದರಿಕೆ ಹಾಕಿ ಇನ್ನೂ ಶೇ.25 ತೆರಿಗೆ ವಿಧಿಸಿದರು. ಇದರಿಂದಾಗಿ, ಭಾರತದ ರಫ್ತು ವ್ಯಾಪಾರದ ಮೇಲೆ 90 ಬಿಲಿಯನ್‌ನಲ್ಲಿ 50 ಪ್ರತಿಶತದಷ್ಟು ಪರಿಣಾಮ ಬೀರಿದೆ. ನೀವು ಒಂದು ಉತ್ಪನ್ನದ ಮೇಲೆ ತೆರಿಗೆ ವಿಧಿಸಿದರೆ, ಅದು ಉತ್ಪನ್ನದ ಮೇಲೆ ತೆರಿಗೆ ಮಾತ್ರ ಆಗುತ್ತದೆ. ಆದರೆ ಟ್ರಂಪ್ ಈಗ ಭಾರತದ ಮೇಲೆ ವಿಧಿಸಿರುವುದು ಉತ್ಪನ್ನದ ಮೇಲಿನ ತೆರಿಗೆಯಲ್ಲ, ಅದು ಒಂದು ದೇಶದ ಮೇಲೆ ತೆರಿಗೆಯ ದಾಳಿ.

ಅಮೆರಿಕವು ವಿಯೆಟ್ನಾಂನಿಂದ ಜವಳಿ ಉತ್ಪನ್ನಗಳನ್ನು ಆಮದು ಮಾಡಿಕೊಂಡರೆ ಅದು ಶೇ.17 ಆಗಿರುತ್ತದೆ. ಬಾಂಗ್ಲಾದೇಶದಿಂದ ಆಮದು ಮಾಡಿಕೊಂಡರೆ ಅದು ಶೇ.19 ಆಗಿರುತ್ತದೆ. ಅದನ್ನೇ ಭಾರತದಿಂದ ಆಮದು ಮಾಡಿಕೊಂಡರೆ ಅದು ಶೇ.50 ಆಗುತ್ತದೆ. ಅದು ದೇಶವನ್ನು ಆಧರಿಸಿದೆಯೇ ವಿನಃ ಉತ್ಪನ್ನವನ್ನಲ್ಲ. ಇದು ವೈಯಕ್ತಿಕ ಉತ್ಪನ್ನಗಳ ಮೇಲೆ ವಿಧಿಸಲಾದ ತೆರಿಗೆಯಲ್ಲ. ಇದು ಇಡೀ ಭಾರತೀಯ ಉತ್ಪನ್ನಗಳ ಮೇಲಿನ ದಾಳಿ. ಇದು ದೇಶದ ಮೇಲಿನ ಅಮೆರಿಕದ ದಾಳಿ. ಇದು ಮೋದಿ ಸರ್ಕಾರದ ವೈಫಲ್ಯ. ಇಂತಹ ಕಷ್ಟದ ಸಮಯದಲ್ಲಿ ಮೋದಿ ನಮ್ಮನ್ನು ರಕ್ಷಿಸಲು ಬರುವುದಿಲ್ಲ. ಭಾರತದ ಮಿತ್ರ ದೇಶಗಳೇ ಬೆಂಬಲವಾಗಿ ನಿಂತಿವೆ.

ಮೋದಿ ಸರ್ಕಾರದ ಆರ್ಥಿಕ ನೀತಿ ಮತ್ತು ವಿದೇಶಾಂಗ ನೀತಿ ಕಾರಣ

ಅಮೆರಿಕ ಅಧ್ಯಕ್ಷ ಟ್ರಂಪ್ ಇಷ್ಟು ದುರಹಂಕಾರದಿಂದ ವರ್ತಿಸಲು ಕಾರಣ, ಕಳೆದ 12 ವರ್ಷಗಳಿಂದ ಮೋದಿ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ನೀತಿ ಮತ್ತು ವಿದೇಶಾಂಗ ನೀತಿ. ಮೊದಲು ಅವರು ಭಾರತದ ವಿದೇಶಾಂಗ ನೀತಿಯನ್ನು ಅಮೆರಿಕನ್ ಪರವಾದ ನೀತಿಯಾಗಿ ಬದಲಾಯಿಸಿದರು. ನಂತರ ಅದನ್ನು ಕುರುಡು ಅಮೆರಿಕನ್ ಪರ ವಿದೇಶಾಂಗ ನೀತಿಯಾಗಿ ಬದಲಾಯಿಸಿದರು. ನಂತರ ಅವರು ಅದನ್ನು ಕುರುಡು ಟ್ರಂಪ್ ಪರ ನೀತಿಯಾಗಿ ಬದಲಾಯಿಸಿದರು. ತಮ್ಮ ಪಾದಗಳ ಕೆಳಗೆ ಅಧೀನರಾಗಿರುವ ವ್ಯಕ್ತಿಯನ್ನು ದಯೆಯಿಂದ ನಡೆಸಿಕೊಳ್ಳಬೇಕೆಂದು ಅವರು ಯೋಚಿಸುವುದಿಲ್ಲ. ಇದು ಬಿಜೆಪಿ ಆಡಳಿತಗಾರರು ಅನುಸರಿಸುತ್ತಿರುವ ಆರ್ಥಿಕ ನೀತಿ ಮತ್ತು ವಿದೇಶಾಂಗ ನೀತಿ ಸಂಪೂರ್ಣವಾಗಿ ವಿಫಲವಾಗಿದೆ ಎಂಬುದನ್ನು ತೋರಿಸುತ್ತದೆ.

ಉತ್ತುಂಗಕ್ಕೇರಿದ ಗುಲಾಮಗಿರಿ

ಗುಲಾಮಗಿರಿಯು ಉತ್ತುಂಗಕ್ಕೇರಿದೆ ಎಂಬುದಕ್ಕೆ ಇತ್ತೀಚಿನ ಉದಾಹರಣೆ, ಭಾರತ ಹತ್ತಿ ಆಮದು ತೆರಿಗೆಯನ್ನು ತೆಗೆದುಹಾಕಿದ್ದು. ಇದನ್ನು ಅಮೆರಿಕದ ಕೃಷಿ ವಲಯವು ಸ್ವಾಗತಿಸುತ್ತದೆ. ನವೆಂಬರ್–ಡಿಸೆಂಬರ್‌ನಲ್ಲಿ ದೇಶೀಯ ಹತ್ತಿ ಮಾರುಕಟ್ಟೆಗೆ ಪ್ರವೇಶಿಸಲಿರುವಾಗ ಅವರು ಈ ರೀತಿ ಆಮದು ತೆರಿಗೆಯನ್ನು ತೆಗೆದುಹಾಕುತ್ತಿದ್ದಾರೆ. ಈ ಕಾರಣದಿಂದಾಗಿ, ಪಂಜಾಬ್ ರೈತರು ಪ್ರತಿಭಟನೆಯನ್ನು ಪ್ರಾರಂಭಿಸಿದ್ದಾರೆ. ಇತರ ದೇಶಗಳಿಂದ ಹತ್ತಿಗೆ ಆಮದು ತೆರಿಗೆಯನ್ನು ತೆಗೆದುಹಾಕಿದರೆ ಪರವಾಗಿಲ್ಲ. ಆದರೆ ಅಮೆರಿಕಾಕ್ಕೆ ಕನಿಷ್ಠ 11 ಪ್ರತಿಶತ ಆಮದು ತೆರಿಗೆ ಇರಬೇಕು. ಅವರು ಭಾರತದ ಮೇಲೆ ಶೇ.50 ತೆರಿಗೆ ವಿಧಿಸುತ್ತಿದ್ದರೂ, ನಮ್ಮ ದೇಶದ ಸರ್ಕಾರವು ಅಮೆರಿಕಾಕ್ಕೆ ತೆರಿಗೆ ವಿನಾಯಿತಿ ನೀಡುವ ಗುಲಾಮಗಿರಿಯು ಸ್ಪಷ್ಟವಾಗಿದೆ.

ಐಟಿ ವಲಯದ ಮೇಲೂ ಪರಿಣಾಮ

ಅಮೆರಿಕದ ತೆರಿಗೆ ನೀತಿಯು ತಂತ್ರಜ್ಞಾನ ವಲಯದ ಮೇಲೂ ಪರಿಣಾಮ ಬೀರುತ್ತದೆ. ಅಮೆರಿಕದ ಐಟಿ ವಲಯವನ್ನು ಉದ್ದೇಶಿಸಿ ಮಾತನಾಡುತ್ತಾ ಡೊನಾಲ್ಡ್ ಟ್ರಂಪ್, 'ಬೆಂಗಳೂರಿನಲ್ಲಿ ಐಟಿ ಕಾರ್ಖಾನೆಗಳನ್ನು ಸ್ಥಾಪಿಸಬಾರದು' ಎಂದು ಸ್ಪಷ್ಟವಾಗಿ ಹೆಸರುಗಳನ್ನು ಉಲ್ಲೇಖಿಸುತ್ತಾರೆ. ಡೊನಾಲ್ಡ್ ಟ್ರಂಪ್ ಮತ್ತು ಮೋದಿ ಇಬ್ಬರೂ ತಮ್ಮ ಸ್ನೇಹಕ್ಕೆ ನಿಷ್ಠರಾಗಿದ್ದಾರೆ.

ಇತ್ತೀಚಿನ ಸಂದರ್ಶನವೊಂದರಲ್ಲಿ ಅಮೆರಿಕದ ಯುದ್ಧ ಸಲಹೆಗಾರ ಹೇಳಿದ್ದು ಬಹಳ ಮುಖ್ಯ. ಮೋದಿ ಉಕ್ರೇನ್ ಯುದ್ಧವನ್ನು ನಡೆಸುತ್ತಿದ್ದಾರೆ ಎಂದು ಅವರು ಹೇಳಿದರು. ಮೋದಿ ಆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಆಪರೇಷನ್ ಸಿಂಧೂರ ದಾಳಿಯನ್ನು ನಿಲ್ಲಿಸಿದವರು ನಾನೇ ಎಂದು ಟ್ರಂಪ್ ಹೇಳಿದಾಗಲೂ, ಅದು ನಿಜವಲ್ಲ ಎಂದು ಹೇಳಿದರು ಆದರೆ, ಟ್ರಂಪ್ ಹೆಸರನ್ನು ಕೂಡ ಪ್ರಧಾನಿ ಮೋದಿ ಉಲ್ಲೇಖಿಸಲಿಲ್ಲ. ಈ ಬಗ್ಗೆ ಅವರನ್ನು ಪ್ರಶ್ನಿಸಿದಾಗ, ಅವರು ರಾಜ್ಯಸಭೆಯೊಳಗೆ ಬರಲಿಲ್ಲ.

ರೂಪಾಯಿ ಕುಸಿತ: 'ಘನತೆ'ಯ ಕುಸಿತ

2014ಕ್ಕಿಂತ ಮೊದಲು, ಭಾರತದ ರೂಪಾಯಿ ಡಾಲರ್‌ಗೆ 58ರಿಂದ 60ಕ್ಕೆ ಇಳಿದಾಗ, ಬಿಜೆಪಿಯ ಸುಷ್ಮಾ ಸ್ವರಾಜ್ ಅವರು ಭಾರತದ ಘನತೆ ಹೋಗಿದೆ ಎಂದು ಹೇಳಿದರು. ಈಗ ಭಾರತದ ರೂಪಾಯಿ ಡಾಲರ್‌ಗೆ 90ಕ್ಕೆ ಕುಸಿದಿದೆ. ಈಗ ಎಲ್ಲಾ 'ಘನತೆ' ಎಲ್ಲಿಗೆ ಹೋಗಿದೆ? ಬಿಜೆಪಿಯವರು ಮಾತನಾಡಲು ಏಕೆ ನಿರಾಕರಿಸುತ್ತಾರೆ?

ತಮಿಳುನಾಡಿನ ಮೇಲೆ ಪರಿಣಾಮ

ತಮಿಳುನಾಡು ಉತ್ಪಾದನಾ ರಾಜ್ಯ. ಆದ್ದರಿಂದ, ಅಮೆರಿಕದ ತೆರಿಗೆ ಇಲ್ಲಿ ಹೆಚ್ಚಿನ ಪರಿಣಾಮ ಬೀರುತ್ತದೆ. ಇದು ಉತ್ತರ ಪ್ರದೇಶ, ರಾಜಸ್ಥಾನ ಅಥವಾ ಅಸ್ಸಾಂ ಮೇಲೆ ಪರಿಣಾಮ ಬೀರುವುದಿಲ್ಲ. ಒಂದೆಡೆ, ಮೋದಿ ಟ್ರಂಪ್‌ಗೆ ಹೆದರುತ್ತಾರೆ, ಮತ್ತೊಂದೆಡೆ, ಅವರು ತಮಿಳುನಾಡಿಗೆ ಹೆದರುತ್ತಾರೆ. ನಾವು ನಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿದ್ದೇವೆ.

ಪರಿಹಾರಗಳು:

* ಪ್ರಸ್ತುತ ಬಿಕ್ಕಟ್ಟನ್ನು ನಿವಾರಿಸಲು ತಕ್ಷಣದ ಕ್ರಮಗಳು:
* ನಾವು ಕೆಟ್ಟ ಸಾಲದ ಮಾನದಂಡಗಳನ್ನು ಸಡಿಲಿಸಬೇಕು;
* ಜಿಎಸ್‌ಟಿಯನ್ನು ಮನ್ನಾ ಮಾಡಬೇಕು;

ಇವೆಲ್ಲವೂ ತಾತ್ಕಾಲಿಕ ಕ್ರಮಗಳು. ದೀರ್ಘಕಾಲೀನ ಪರಿಹಾರವೆಂದರೆ, ಭಾರತವು ತನ್ನದೇ ಆದ ರಾಜಕೀಯ ಶಕ್ತಿ ಮತ್ತು ವಿದೇಶಾಂಗ ನೀತಿಯಲ್ಲಿ ಬಲವಾದ ಬೆನ್ನೆಲುಬಿನೊಂದಿಗೆ ಕಾರ್ಯನಿರ್ವಹಿಸಬೇಕು.

ಟ್ರಂಪ್ ಸುಂಕ.....

ಪುಟ 13 ರಿಂದ

ಮೂಲಕವೇ ಸಾಧಿಸಬೇಕು ಎಂದೇನಿಲ್ಲ. ಸುಂಕ–ಭಯೋತ್ಪಾದನೆಯ ಮೂಲಕವೂ ಅದನ್ನು ಸಾಧಿಸಬಹುದು ಎಂಬುದನ್ನು ಸಾಮ್ರಾಜ್ಯಶಾಹಿಯು ಮುಯ್ಯಿ ತೀರಿಸುವ ರೀತಿಯಲ್ಲಿ ಎತ್ತಿ ತೋರಿಸುತ್ತಿದೆ.

ಈ ಸುಂಕಗಳಿಂದ ಕಲಿಯಬೇಕಾದ ಪಾಠವೆಂದರೆ, ಪ್ರಧಾನವಾಗಿ ಆಂತರಿಕ–ಮಾರುಕಟ್ಟೆ ಆಧರಿತ, ಸ್ವಾವಲಂಬನೆಯ, ನಿಯಂತ್ರಣ ನೀತಿಗಳ ಅಭಿವೃದ್ಧಿ ಕಾರ್ಯತಂತ್ರವು ವಸಾಹತೀಕರಣದಿಂದ ಹೊರಬರುವಲ್ಲಿ ಒಂದು ಅಗತ್ಯ ಪೂರಕ ಅಂಶವಾಗುತ್ತದೆ ಎಂಬುದು. ಭಾರತ ಮತ್ತು ಮೂರನೇ ಜಗತ್ತಿನ ಇತರ ದೇಶಗಳು ವಸಾಹತುಶಾಹಿಯಿಂದ ವಿಮೋಚನೆಗೊಂಡ ತಕ್ಷಣವೇ ಅರಿತುಕೊಂಡಿದ್ದವು. "ಬಹಿರ್ಮುಖಿ"ಯಾಗಿ ಕಾಣುವ ಅಭಿವೃದ್ಧಿ ಕಾರ್ಯತಂತ್ರವು, ಮೂರನೇ ಜಗತ್ತಿನ ದೇಶವೊಂದನ್ನು ಸಾಮ್ರಾಜ್ಯಶಾಹಿಯ 'ಹುಕುಂ'ಗಳಿಗೆ ಒಳಪಡಿಸುತ್ತದೆ ಏಕೆಂದರೆ ಅದು ಸಾಮ್ರಾಜ್ಯಶಾಹಿ ದೇಶಗಳ ಮಾರುಕಟ್ಟೆಯನ್ನು ಅವಲಂಬಿಸಿರುತ್ತದೆ.

ಇಲ್ಲಿ, ದೇಶವು ತನ್ನ ಆಹಾರ ಸ್ವಾವಲಂಬನೆಯನ್ನು ತ್ಯಜಿಸುವುದನ್ನು ಮತ್ತು ಅಮೆರಿಕದಿಂದ ಆಹಾರ ಧಾನ್ಯಗಳ ಆಮದಿನ ಮೇಲೆ ಅವಲಂಬಿತವಾಗುವುದನ್ನು ತಡೆದು ನಿಲ್ಲಿಸಿದ ಶ್ರೇಯಸ್ಸು ವರ್ಷಪೂರ್ತಿ ನಡೆದ ರೈತರ ಆಂದೋಲನಕ್ಕೆ ಸಲ್ಲುತ್ತದೆ. ಈ ಆಂದೋಲನಕ್ಕೆ ನಾವು ಕೃತಜ್ಞತೆ ಸಲ್ಲಿಸಬೇಕಾಗುತ್ತದೆ. ಏಕೆಂದರೆ, ಆಹಾರ ಧಾನ್ಯಗಳಿಗಾಗಿ ಅಮೆರಿಕದ ಆಮದುಗಳ ಮೇಲೆ ಅವಲಂಬನೆಯು ಭಾರತದ ಮೇಲೆ ತನ್ನ ಹತೋಟಿಯನ್ನು ಸಾಧಿಸುವಲ್ಲಿ ಸಾಮ್ರಾಜ್ಯಶಾಹಿಗೆ ಇನ್ನೂ ಒಂದು ಹೆಚ್ಚು ಶಕ್ತಿಶಾಲಿಯಾದ ಆಯುಧವಾಗುತ್ತಿತ್ತು. ಗಾಜಾದಲ್ಲಿ ನರಮೇಧದ ಒಂದು ಸಂಚನ್ನು ರೂಪಿಸಬಲ್ಲ ಮೆಟ್ರೋಪಾಲಿಟನ್ ಶಕ್ತಿಗಳು ತಮ್ಮ ಆಶಯಗಳಿಗೆ ವಿರುದ್ಧವಾಗಿ ವರ್ತಿಸಿದರೆ, ಭಾರತದಂತಹ ಮೂರನೇ ಜಗತ್ತಿನ ದೇಶಕ್ಕೆ ಆಹಾರ ಆಮದುಗಳನ್ನು ನಿರಾಕರಿಸುವ ಮೂಲಕ ಆಹಾರದ ಕೊರತೆಯನ್ನು ಉಂಟುಮಾಡಲು ಕೊಂಚವೂ ಅಳುಕುವುದಿಲ್ಲ.

ಅಭಿವೃದ್ಧಿ ಕಾರ್ಯತಂತ್ರದಲ್ಲಿ ಬದಲಾವಣೆ ಅಗತ್ಯ

ಆದ್ದರಿಂದ, ಭಾರತದಂತಹ ಒಂದು ದೇಶವು ತನ್ನ ಅಭಿವೃದ್ಧಿ ಕಾರ್ಯತಂತ್ರವನ್ನು ಬದಲಾಯಿಸಿಕೊಳ್ಳುವುದು ಅಗತ್ಯವಾಗುತ್ತದೆ. ಈ ಬದಲಾವಣೆಯನ್ನು ಹಳೆಯ ಆರ್ಥಿಕ ಮತ್ತು ಸಾಮಾಜಿಕ ನೀತಿಗಳಿಗೆ ಮರಳುವುದು ಎಂದು ಅರ್ಥೈಸಿಕೊಳ್ಳಬಾರದು. ಬದಲಿಗೆ, ಕೃಷಿ ಬೆಳವಣಿಗೆಯನ್ನು ಉತ್ತೇಜಿಸುವ ಮೂಲಕ (ಭೂ–ಸುಧಾರಣೆಗಳನ್ನು ಕೈಗೊಳ್ಳುವ ಮೂಲಕ), ದುಡಿಯುವ ಜನತೆಯ ಪರವಾಗಿ ವರಮಾನಗಳ ಮರುಹಂಚಿಕೆಯ ಮೂಲಕ ಮತ್ತು ಕಲ್ಯಾಣ ಪ್ರಭುತ್ವ ಕ್ರಮಗಳ ಭಾಗವಾಗಿ ಸಾಮಾಜಿಕ ವೇತನವನ್ನು ಹೆಚ್ಚಿಸುವ ಮೂಲಕ ಆಂತರಿಕ ಮಾರುಕಟ್ಟೆಯ ಗಾತ್ರವನ್ನು ಹೆಚ್ಚಿಸುವ ಒಂದು 'ನಿಯಂತ್ರಣ' ನೀತಿಗಳ ಕಾರ್ಯತಂತ್ರ ಎಂದು ಅರ್ಥೈಸಿಕೊಳ್ಳಬೇಕು.

ಈ ಕಾರ್ಯತಂತ್ರವನ್ನು ಆಗಸ್ಟ್ 15ರಂದು ಪ್ರಕಟಿಸಲಾದ ಸರಕು ಮತ್ತು ಸೇವಾ ತೆರಿಗೆ ರಿಯಾಯಿತಿಗಳೊಂದಿಗೆ ಮೋದಿ ಸರ್ಕಾರವು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಯಾರಾದರೂ ಭಾವಿಸಿದ್ದರೆ ಅದು ಅಸಂಬದ್ಧ ಮಾತಾಗುತ್ತದೆ. ಜಿಎಸ್‌ಟಿ ರಿಯಾಯಿತಿಗಳನ್ನು ಪ್ರಾಥಮಿಕವಾಗಿ ದುಡಿಯುವ ಜನರಿಗೆ ಮಾತ್ರವೇ ಒದಗಿಸಿಲ್ಲ ಮತ್ತು ಈ ರಿಯಾಯ್ತಿಗಳನ್ನು ಶ್ರೀಮಂತರ ಮೇಲೆ ತೆರಿಗೆ ಹೇರುವ ಮೂಲಕ ಸರಿದೂಗಿಸುತ್ತಿಲ್ಲ. ಈ ರಿಯಾಯಿತಿಗಳು ನಾನು ಹಿಂದಿನ ಲೇಖನದಲ್ಲಿ (ಸಂಚಿಕೆ 36 ನೋಡಿ) ಸೂಚಿಸಿದ್ದಕ್ಕಿಂತಲೂ ವಾಸ್ತವಿಕವಾಗಿ ಸ್ವಲ್ಪ ದೊಡ್ಡದಾಗಿವೆ (ಜಿಡಿಪಿಯ ಶೇ. 0.1 ರ ಬದಲು ಶೇ. 0.6 ಮತ್ತು 0.32 ಲಕ್ಷ ಕೋಟಿಗಳ ವೆಚ್ಚದ ಬದಲು 1.95 ಲಕ್ಷ ಕೋಟಿ ರೂ). ಆದರೂ, ಅವು ಇನ್ನೂ ಅತೀ ಅಲ್ಪವೇ. ಕಲ್ಯಾಣ ಪ್ರಭುತ್ವ ಕ್ರಮಗಳನ್ನು ಮುಂದಿಟ್ಟುಕೊಳ್ಳುವ ಒಂದು ಪರ್ಯಾಯ ಅಭಿವೃದ್ಧಿ ದಿಕ್ಪಥವನ್ನು ಕಾರ್ಯಗತಗೊಳಿಸಲು ಸರ್ಕಾರವು ಜಿಡಿಪಿಯ ಕನಿಷ್ಠ ಶೇ. 10ರಷ್ಟನ್ನಾದರೂ ಖರ್ಚು ಮಾಡಬೇಕಾಗುತ್ತದೆ.

ಜೊತೆಗೆ, ಟ್ರಂಪ್ ಹೇರಿದ ಸುಂಕಗಳಿಂದ ತೀವ್ರವಾಗಿ ತೊಂದರೆಗೊಳಗಾಗಲಿರುವ ಕಾರ್ಮಿಕರ ಸಂಕಷ್ಟಗಳನ್ನು ನಿವಾರಿಸಲು ಸರ್ಕಾರವು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಸಾಮ್ರಾಜ್ಯಶಾಹಿಯು ಸುಂಕಗಳನ್ನು ಅಸ್ತ್ರವಾಗಿಸಿಕೊಳ್ಳುತ್ತಿದೆ ಎಂಬುದನ್ನು ಗಮನಿಸಿದರೆ, ಸುಂಕಗಳು ಉಂಟುಮಾಡುವ ತೊಂದರೆಗಳನ್ನು ನಿವಾರಿಸಲು ರಫ್ತು ಸಬ್ಸಿಡಿಗಳಂತಹ ಕ್ರಮಗಳಷ್ಟೇ ಸಾಕಾಗುವುದಿಲ್ಲ. ಏಕೆಂದರೆ ಸುಂಕಗಳನ್ನು ಟ್ರಂಪ್ ಮತ್ತಷ್ಟು ಏರಿಸುತ್ತಾರೆ. ಆದಾಗ್ಯೂ, ಯುಎಸ್ ವಿರುದ್ಧವಾಗಿ ಚೀನಾ ಮತ್ತು ಬ್ರೆಜಿಲ್ ತೆಗೆದುಕೊಂಡ ಪ್ರತೀಕಾರದ ಸುಂಕಗಳ ಜೊತೆಗೆ ರಫ್ತು ಸಬ್ಸಿಡಿಗಳಂತಹ ಕ್ರಮಗಳನ್ನೂ ಸಹ ಪ್ರಯತ್ನಿಸಬಹುದು. ಅದಲ್ಲದೆ, ಸುಂಕಗಳಿಗೆ ಬಲಿಪಶುಗಳಾಗುವ ಸಾಧ್ಯತೆಯಿರುವ ಕೆಲಸಗಾರರಿಗೆ ಪರ್ಯಾಯ ಉದ್ಯೋಗಗಳನ್ನು ಹುಡುಕುವುದರ ಜೊತೆಗೆ ಪರ್ಯಾಯ ರಫ್ತು ಮಾರುಕಟ್ಟೆಗಳನ್ನು ಹುಡುಕುವ ಪ್ರಯತ್ನಗಳೂ ಸಹ ಕ್ರಿಯಾಶೀಲವಾಗಬೇಕು.

ಈ ನಿಟ್ಟಿನಲ್ಲಿ ಮೋದಿ ಸರ್ಕಾರವು ಏನನ್ನೂ ಮಾಡುತ್ತಿಲ್ಲ ಮಾತ್ರವಲ್ಲ, ವಾಸ್ತವವಾಗಿ ಅಮೆರಿಕವನ್ನು ಸಂತುಷ್ಟಗೊಳಿಸಲು ಭಾರತದ ರೈತರಿಗೆ ಹಾನಿಯನ್ನುಂಟುಮಾಡುವ ಅಮೆರಿಕದ ಸುಂಕ ರಹಿತ ಹತ್ತಿ ಆಮದುಗಳಿಗೆ ಅನುಮತಿ ನೀಡುವಂತಹ ಕೆಲವು ರಿಯಾಯಿತಿಗಳನ್ನು ನೀಡಲು ಪ್ರಯತ್ನಿಸುತ್ತಿದೆ. ಅದಕ್ಕಿಂತಲೂ ಮಿಗಿಲಾಗಿ, ಗ್ರಾಮೀಣ ಭಾರತದಲ್ಲಿ ಸಂಕಷ್ಟದಲ್ಲಿರುವವರಿಗೆ ಒಂದು ಆಸರೆಯಾಗಿರುವ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ವೆಚ್ಚವನ್ನು ಇಂತಹ ಒಂದು ವಿಷಮ ಪರಿಸ್ಥಿತಿಯಲ್ಲೂ ಕಡಿತಗೊಳಿಸುತ್ತಿದೆ. ●

ಭಾಗವತರ ಒಗಟುಗಳು

ಪುಟ 16 ರಿಂದ

ತೆಳುವಾಗುತ್ತಾ ಹೋಗಿದೆ ಎನ್ನುವುದು!

ಅಲ್ಪಸಂಖ್ಯಾತ ಸಮುದಾಯದ ವಿರುದ್ಧದ ಹಿಂಸೆಯಲ್ಲಿ

ಅಲ್ಪಸಂಖ್ಯಾತ ಸಮುದಾಯದ ವಿರುದ್ಧದ ಹಿಂಸೆಯಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಒಳಗೊಳ್ಳುವ ಕುರಿತು ಕೇಳಿದಾಗ ಭಾಗವತರು ಅದು ವಾಸ್ತವಿಕವಾಗಿ ಸತ್ಯವಲ್ಲ ಎಂದು ಪ್ರತಿಪಾದಿಸಿದರು, ಆದರೆ ದುಃಖದಿಂದ ಕೆಲವು ಹಿಂದೂಗಳು ಆ ರೀತಿಯ ಕ್ರಿಯೆಗಳಲ್ಲಿ ತೊಡಗಿಕೊಂಡಿದ್ದರೆ ಆಗ ಅದು ತಪ್ಪಾಗುತ್ತದೆ ಎಂದು ಹೇಳುವ ಮೂಲಕ ಅದರ ತೀವ್ರತೆಯನ್ನು ತಗ್ಗಿಸಿದರು. ಅಂದರೆ ಅದರ ಅರ್ಥ, ಹಿಂದೂಗಳು ದುಃಖ ಅಥವಾ ಕೋಪ ಮಾಡಿಕೊಂಡು ಅದನ್ನು ವ್ಯಕ್ತಪಡಿಸಲು ಮಸೀದಿಯನ್ನು ಧ್ವಂಸಮಾಡಿದರೆ ಅಥವಾ ಗೋಮಾಂಸ ಭಕ್ಷಣೆಯ ಆಧಾರರಹಿತ ವದಂತಿಯ ಮೇಲೆ ಗುಂಪು ಹಲ್ಲೆಯಂತಹ ಪಾಶವೀ ಹಿಂಸೆಯಲ್ಲಿ ತೊಡಗಿದರೆ, ಆಗ ಆರ್‌ಎಸ್‌ಎಸ್ ಅವರಿಗೆ ಛೀಮಾರಿ ಹಾಕುತ್ತದೆ ಅಷ್ಟೆ !

ಆಕಸ್ಮಿಕವಾಗಿ ಮಾಂಸ ತಿನ್ನುವ ಬಗೆಗಿನ ಪ್ರಶ್ನೆಯೊಂದಕ್ಕೆ ಭಾಗವತ್ ಅವರು 'ಕೆಲವರು ಏನು ತಿನ್ನುತ್ತಾರೆ ಎನ್ನುವುದು ಕಿರಿಕಿರಿಯಾಗಬಾರದು ಅಷ್ಟೆ' ಎಂದವರು ಜತೆಯಲ್ಲೇ 'ಎರಡೂ ಕಡೆಯವರು ಪರಸ್ಪರರ ಭಾವನೆಗಳನ್ನು ಗೌರವಿಸಬೇಕು; ಆಗ ಕಾನೂನು ಮಧ್ಯಪ್ರವೇಶಿಸಬೇಕಾದ ಅಗತ್ಯವಿರುವುದಿಲ್ಲ' ಎಂದೂ ಕೂಡ ಹೇಳಿದರು. ಅಂದರೆ ಅದರ ಅರ್ಥ –ಮುಸ್ಲಿಮರು ಹಿಂದೂಗಳ ಭಾವನೆಗಳನ್ನು ಗೌರವಿಸಬೇಕು – ಇಲ್ಲವೆಂದರೆ ಕಾನೂನು ಮತ್ತು ಸುವ್ಯವಸ್ಥೆಯ ಪ್ರಶ್ನೆ ಉದ್ಭವಿಸುತ್ತದೆ.

'ಮಾನವೀಯತೆ'ಯ ಹೆಸರಿನಲ್ಲಿ ಹಿಂದೂ 'ಸಂಸ್ಕೃತಿ'

ಆರ್‌ಎಸ್‌ಎಸ್ ಎಲ್ಲರನ್ನೂ ಒಳಗೊಳ್ಳುತ್ತದೆ ಮತ್ತು ಯಾರ ಬಗ್ಗೆಯೂ ಅಸಹಿಷ್ಣುತೆಯನ್ನು ಹೊಂದಿಲ್ಲ ಎಂದು ಹೇಳುವಾಗಲೇ, ಕೆಲವು ನಿರ್ದಿಷ್ಟ ಸಮಸ್ಯೆಗಳ ಬಗ್ಗೆ ಆರ್‌ಎಸ್‌ಎಸ್ ಆಲೋಚನೆಯ ಒಳಗೆ ನುಸುಳುವ ಉದಾಹರಣೆಯನ್ನು ಇಲ್ಲಿ ನೋಡಬಹುದು: ಶಿಕ್ಷಣದ ಬಗ್ಗೆ ಕೇಳಿದಾಗ ಶಿಕ್ಷಣದ ಉದ್ದೇಶ 'ಮೌಲ್ಯಗಳನ್ನು ಬೆಳೆಸುವುದು ಮತ್ತು ವ್ಯಕ್ತಿಯನ್ನು ನಿಜವಾದ ಮನುಷ್ಯನನ್ನಾಗಿ ಮಾಡಬೇಕು. ಎಲ್ಲ ಕಡೆಗಳಲ್ಲೂ ಮಿಷನರಿ ಶಾಲೆಗಳಲ್ಲಾಗಲೀ ಅಥವಾ ಮದರಸಾಗಳಲ್ಲಾಗಲೀ ನಮ್ಮ ಅಂದರೆ, ಹಿಂದೂಗಳ ಮೌಲ್ಯಗಳನ್ನು ಮತ್ತು ಸಂಸ್ಕೃತಿಯನ್ನು ಕಲಿಸಬೇಕು ಎಂದು ಭಾಗವತರು ಸ್ಪಷ್ಟಪಡಿಸಿದರು. ಅಂದರೆ, 'ಮೌಲ್ಯಗಳು' ಮತ್ತು 'ಮಾನವೀಯತೆ'ಯ ಹೆಸರಿನಲ್ಲಿ ಹಿಂದೂ 'ಸಂಸ್ಕೃತಿ'ಯನ್ನು ಕಲಿಸಲಾಗುತ್ತದೆ. ಈ ಹಾದಿಯನ್ನು ಅನುಸರಿಸುವ ಸಲುವಾಗಿ ಮೋದಿ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ತಂದಿದೆ ಎಂದು ಹೊಗಳಿದರು.

ಈ ರೀತಿಯಲ್ಲಿ ಭಾಗವತರ ಚಿಂತನೆಗಳು ತಾವಾಗಿಯೇ ಸತ್ಯವನ್ನು ಬಯಲುಮಾಡಿದವು ('ಧರ್ಮ ಮತ್ತು ದೇಶಕ್ಕಾಗಿ ಪ್ರೀತಿ' ಎಂಬ ಮಾತುಗಳೆಲ್ಲಾ ಟೊಳ್ಳಾದವು). ಸತ್ಯಸಂಗತಿ ಏನೆಂದರೆ, ದೇಶ, ನಂಬಿಕೆ ಮತ್ತು ಜನರ ಕುರಿತ ಮಧ್ಯಯುಗ ಹಾಗೂ ತಿರೋಗಾಮಿ ತಿಳುವಳಿಕೆಯ ಆಧಾರದ ನೂರು ವರ್ಷಗಳ ಹಿಂದಿನ ಕಾರ್ಯಸೂಚಿಯನ್ನೇ ಆರ್‌ಎಸ್‌ಎಸ್ ಮುಂದುವರಿಸುತ್ತಿರುವುದು. ಆಡುತ್ತಿರುವ ಉದಾತ್ತ ಮಾತುಗಳೆಲ್ಲಾ ಟೀಕೆಗಳನ್ನು ಶಮನಗೊಳಿಸುವುದು ಮತ್ತು ನಂಬಿಕಸ್ಥರನ್ನು ವಂಚಿಸುವುದಷ್ಟೆ! ಆದರೆ ಗಮನಿಸಬೇಕಾಗಿರುವುದು ಬಹಳ ಇದೆ.

ಬಗೆಯರಿಯದ ಸಂಧಿಗ್ಧತೆಗಳು

ಭಾಗವತರಾಗಲೀ ಅವರ ಹಿಂದಿನವರಾಗಲೀ ಬಗೆಹರಿಸಲಾಗದ ಒಗಟುಗಳಲ್ಲಿ ಅತ್ಯಂತ ದೊಡ್ಡ ಒಗಟೆಂದರೆ, ಜಾತಿ ಪದ್ಧತಿ ಅದೇಕೆ ಇನ್ನೂ ಬಗೆಹರಿಯಲಾಗದ ಸಮಸ್ಯೆಯಾಗಿಯೇ ಉಳಿದಿದೆ ಮತ್ತು ಅದರ ಸುತ್ತ ಆರ್‌ಎಸ್‌ಎಸ್ ಮುಖಂಡರು ಏಕೆ ಎಡವಿಬೀಳುತ್ತಿದ್ದಾರೆ ಹಾಗೂ ತಡಕಾಡುತ್ತಲೇ ಇದ್ದಾರೆ? ಹಿಂದೂಗಳನ್ನು ಒಗ್ಗೂಡಿಸುವುದು, ಅವರಲ್ಲಿ ವಿಶ್ವಾಸದ ಭಾವನೆ ಮೂಡಿಸುವುದು ಮತ್ತು ಸನಾತನ ಧರ್ಮ ಎಂದೂ ಕರೆಯಲಾಗುವ ಪ್ರಾಚೀನ ಹಿಂದೂ ತತ್ವಗಳ ಆಧಾರದಲ್ಲಿ ನಡೆಯುವ ಸಮಾಜವನ್ನು ಕಟ್ಟುವುದು ಆರ್‌ಎಸ್‌ಎಸ್‌ನ ಮೂಲ ಉದ್ದೇಶ. ಆದರೆ, ವಾಸ್ತವ ಬದುಕಿನಲ್ಲಿ, ಹಿಂದೂ ಸಮಾಜವು ಜಾತಿ ಹಾಗೂ ಉಪಜಾತಿಗಳ ನಿರಾಶಾದಾಯಕ ಒಡಕುಗಳಿಂದ ತುಂಬಿತುಳುಕುತ್ತಿದೆ. ಈ ಎರಡೂ ದೋಣಿಗಳ ಮೇಲೆ ಸವಾರಿ ಮಾಡಲು ಆರ್‌ಎಸ್‌ಎಸ್ ವ್ಯರ್ಥ ಪ್ರಯತ್ನ ನಡೆಸುತ್ತಿದೆ ಮತ್ತು ನಿರಂತರವಾಗಿ ವಿಫಲವಾಗಿದೆ. ಎಲ್ಲಾದರೂ ಕೋಮು ಸಮಸ್ಯೆ ಉದ್ಭವಿಸಿದರೆ ಆ ಪ್ರದೇಶದಲ್ಲಿ ಒಂದು ರೀತಿಯ ಐಕ್ಯತೆ ಮೂಡಿಸಲು ಅದು ಸಫಲವಾಗಬಹುದು – ಸಾಮಾನ್ಯವಾಗಿ ಅಪಾಯಕಾರಿ ಚಟುವಟಿಕೆಗಳನ್ನು ಕೆಳಜಾತಿಯವರು ಮಾಡಬೇಕಾಗುತ್ತದೆ. ಆದರೆ ಹಠಾತ್ತಾಗಿ ಜಾತಿ ತಾರತಮ್ಯ ಸಮಸ್ಯೆ ಉಂಟಾಗುತ್ತದೆ– ಅದು ಸಂಭವಿಸಿಯೇ ತೀರುತ್ತದೆ ಆದರೆ ಆ ಐಕ್ಯತೆ ಗಾಳಿಯಲ್ಲಿ ತೂರಿಹೋಗುತ್ತದೆ: ಸಾಮಾಜಿಕ ಗುಂಪುಗಳು ಜಗಳದಲ್ಲಿ ತೊಡಗುತ್ತವೆ. ಮೋದಿ ಮತ್ತು ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಬಿಜೆಪಿ ನೇತೃತ್ವದ ಮೈತ್ರಿಕೂಟದ ಮತಗಳ ನೆಲೆಯನ್ನು ವಿಸ್ತರಿಸುವ ಸಲುವಾಗಿ ಹಲವಾರು ಜಾತಿಯಾಧಾರಿತ ಪಕ್ಷಗಳ ಮುಖಂಡರುಗಳನ್ನು ಬೆಳಸುವುದರತ್ತ ಹೆಚ್ಚು ಗಮನ ಹರಿಸಲಾಗುತ್ತಿದೆ. ಈ ಬೆಳವಣಿಗೆಯನ್ನು, ವಿವಿಧ ಜಾತಿಗಳ ಮುಖಂಡರುಗಳನ್ನು ಪ್ರೋತ್ಸಾಹಿಸುವ ಈ ವಿಧಾನವನ್ನು ಭಾಗವತರು ಹಾಡಿ ಹೊಗಳಿದ್ದಾರೆ. ಆದರೆ ನಿರಂತರವಾಗಿ, ಈ ಜಾತಿ ಮೈತ್ರಿಕೂಟಗಳು ಆರ್‌ಎಸ್‌ಎಸ್ ಬೆಂಬಲಿತ ಹಿಂದೂ ಶ್ರೇಷ್ಠತೆಯ ವಿಚಾರವನ್ನು ಒಪ್ಪುವುದಿಲ್ಲ. ಸೈದ್ಧಾಂತಿಕವಾಗಿ ಆರ್‌ಎಸ್‌ಎಸ್ ಮುಖಂಡರು ಕೆಲವು ವೇಳೆ ಎರಡು ಧೃವಗಳ ನಡುವೆ ಓಲಾಡುತ್ತಾರೆ. ಉದಾಹರಣೆಗೆ: ಕೆಲವು ಬಾರಿ ಮೀಸಲಾತಿಯನ್ನು ಟೀಕಿಸುತ್ತಾರೆ ನಂತರ ಅದರ ಪರಿಣಾಮವನ್ನು ಎದುರಿಸಲು ತಿಂಗಳುಗಟ್ಟಲೆ ಸಮಯ ಹಾಳುಮಾಡಿಕೊಳ್ಳುತ್ತಾರೆ.

ಜಾತಿ ಆಧಾರಿತ ತಾರತಮ್ಯಗಳಿಗೆ ಉತ್ತರವಿಲ್ಲ

ಜಾತಿ ಆಧಾರಿತ ತಾರತಮ್ಯಗಳಿಗೆ ಆರ್‌ಎಸ್‌ಎಸ್‌ನಲ್ಲಿ ನಿಜವಾದ ಉತ್ತರವಿಲ್ಲ ಆದ್ದರಿಂದ ಈ ವೈರುಧ್ಯಗಳು ಹಿಗುತ್ತವೆ. ಆರಂಭದಲ್ಲಿ ವರ್ಣ (ಜಾತಿ) ವ್ಯವಸ್ಥೆಯು ಶ್ರಮದ ಸಹಜ ವಿಭಜನೆಯಾಗಿ ಹುಟ್ಟಿಕೊಂಡಿತು ಮತ್ತು ಅದು ಸಮಾಜಕ್ಕೆ ಸಹಾಯಕಾರಿಯಾಯಿತು ಎಂಬ ತಿಳುವಳಿಕೆಯನ್ನೇ ಆರ್‌ಎಸ್‌ಎಸ್ ಈಗಲೂ ಸಮರ್ಥಿಸುತ್ತದೆ. ಅವರ ಪ್ರಕಾರ ಸಮಯ ಕಳೆದಂತೆಲ್ಲಾ ಅದು ವಿಕೃತಗೊಳ್ಳುತ್ತದೆ. ವರ್ಣವ್ಯವಸ್ಥೆಯು ಪ್ರಾಯೋಗಿಕವಾಗಿ ಒಂದು ಗುಲಾಮ ಪದ್ದತಿ ಮತ್ತು ಅನಾಗರಿಕ ದಬ್ಬಾಳಿಕೆಯಾಗಿದೆ ಹಾಗೂ ಅದು ಶೋಷಣೆ, ಹಿಂಸೆ ಮತ್ತು ದಬ್ಬಾಳಿಕೆಯ ಆಧಾರದಲ್ಲಿ ಸೃಷ್ಟಿಯಾಗಿದೆ ಎಂಬ ಕಟ ಸತ್ಯವನ್ನು ಆರ್‌ಎಸ್‌ಎಸ್ ಈಗಲೂ ಒಪ್ಪುತಿಲ್ಲ. ಪಾವಿತ್ರ್ಯತೆ ಮತ್ತು ಅದರ ಉಲ್ಲಂಘನೆಯ ಪರಿಕಲ್ಪನೆಗಳು ಅದರಲ್ಲಿ ಅಂತರ್ಗತವಾಗಿವೆ. ಜಾತಿ ದಬ್ಬಾಳಿಕೆಯ ವಿರುದ್ಧ ಹೋರಾಡುವುದು ತನ್ನ ಗುರಿಯಾಗಬೇಕು, ಸುಧಾರಣೆ ಅಲ್ಲ ಆ ಪದ್ಧತಿಯೇ ಸರ್ವನಾಶವಾಗಬೇಕು ಎನ್ನುವುದನ್ನು ಆರ್‌ಎಸ್‌ಎಸ್ ಒಪ್ಪಬೇಕು. ದಲಿತರ ಮನೆಯಲ್ಲಿ ಆಗಾಗ ಊಟ ಮಾಡುವುದು ಅಥವಾ ದಲಿತ ವ್ಯಕ್ತಿಯೊಬ್ಬನಿಂದ ಒಂದು ಲೋಟ ನೀರನ್ನು ಕುಡಿಯುವುದು ಸಾಕಾಗುವುದಿಲ್ಲ. ಅದು ನಿಜ ಹೇಳಬೇಕೆಂದರೆ ಕೈಚಳಕವಷ್ಟೆ, ಗಮನ ಬೇರೆಡೆಗೆ ಸೆಳೆಯುವುದಷ್ಟೆ, ಆರ್‌ಎಸ್‌ಎಸ್ ಎಂದಿಗೂ ಜಾತಿ ಸರ್ವನಾಶಕ್ಕಾಗಿ ಒತ್ತಾಯಿಸುವುದಿಲ್ಲ. ಅದು ದೌರ್ಜನ್ಯಗಳ ವಿರುದ್ಧ ಸೊಲ್ಲೆತ್ತುವುದಿಲ್ಲ. ಅದರ ಸರ್ಕಾರಗಳು ಎಸ್.ಸಿ/ಎಸ್.ಟಿ ಸಮುದಾಯಗಳಿಗಾಗಿ ಮೀಸಲಿಟ್ಟ ನಿಧಿಯನ್ನು ವೆಚ್ಚ ಮಾಡುವುದಿಲ್ಲ ಕೂಡ. ಆದ್ದರಿಂದ ಅದು ಎಂದಿಗೂ ದಲಿತರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಇಷ್ಟ ಪಡುವುದಿಲ್ಲ

ಆದಕಾರಣ, ಜಾತಿ ಪೂರ್ವಾಗ್ರಹಗಳನ್ನು ಒಪ್ಪದಿರುವ ಕುರಿತು ಮತ್ತು ಅವುಗಳ ವಿರುದ್ಧ ಹೋರಾಡುವ ಅಗತ್ಯದ ಬಗ್ಗೆ ಭಾಗವತರ ಸಮರ್ಥನೆಗಳಲವೂ ಮತ್ತು ಅವುಗಳ ಬಗ್ಗೆ ಸಂಘದ ಬದ್ಧತೆಗಳೆಲ್ಲವೂ ನಿಯೋಜಕ ಮತ್ತು ದಿಕ್ಕು ತಪ್ಪಿಸುವಂಥಾದ್ದು, ವಾಸ್ತವದಲ್ಲಿ ಆರ್‌ಎಸ್‌ಎಸ್ ಒಂದು ಮೇಲ್ಜಾತಿ ಸಂಘಟನೆಯಾಗಿ ಕಾಣುತ್ತದೆ ಮತ್ತು ಅದು ಹಾಗೆಯೇ ವರ್ತಿಸುತ್ತದೆ. ಆ ಅನುಮಾನ ಎಷ್ಟು ಆಳವಾಗಿದೆಯೆಂದರೆ – ವಾಸ್ತವದ ನೆಲೆಯಾಗಿದೆಯೆಂದರೆ, ಸಂವಿಧಾನದ ಬದಲಾವಣೆಯ ಕುರಿತು ಮಾತನಾಡುವ ಬಿಜೆಪಿ/ಆರ್‌ಎಸ್‌ಎಸ್ ಪ್ರಯತ್ನಗಳನ್ನು 2024ರ ಚುನಾವಣೆಯಲ್ಲಿ ಮತದಾರರು ತಿರಸ್ಕರಿಸಿದ್ದಾರೆ. ಏಕೆಂದರೆ ಸಂವಿಧಾನದ ಸ್ಥಾಪಕ ಪಿತಾಮಹರಾದ ಬಾಬಾಸಾಹೆಬ್ ಅಂಬೇಡ್ಕರ್ ಅವರಿಗೆ ಮಾಡುತ್ತಿರುವ ಅವಮಾನ ಎಂದು ಮತದಾರರು ಬಗೆದರು. ಭಾಗವತರು ಆ ಭಾಷಣಗಳಲ್ಲಿ ವ್ಯಕ್ತಪಡಿಸಿದ ಚಿಂತನೆಗಳು ಯಾವುವೂ 21ನೇ ಶತಮಾನದಲ್ಲಿ ಭಾರತವು ಎದುರಿಸುತ್ತಿರುವ ಸವಾಲುಗಳಿಗೆ ಸರಿಗಟ್ಟುವಂತಿರಲಿಲ್ಲ. ನಿರುದ್ಯೋಗ (ಉದ್ಯಮಿಯಾಗಲು ಕಷ್ಟಪಟ್ಟು ದುಡಿಯಬೇಕು) ದಂತಹ ಆರ್ಥಿಕ ಸಮಸ್ಯೆಗಳಿಗೆ ಭಾಗವತರು ತೀರಾ ಸರಳ ಪರಿಹಾರ ನೀಡುತ್ತಿದ್ದರು. ಅವರ ಸಹೋದ್ಯೋಗಿ ಮೋದಿಯವರು ದೇಶದ ಆರ್ಥಿಕ ಸಾರ್ವಭೌಮತೆಯನ್ನು ಬಹುರಾಷ್ಟ್ರೀಯ ಬಂಡವಳಿಗರೊಂದಿಗೆ ಶಾಮೀಲಾಗಿರುವ ಸಂಗತಿಗೆ ಭಾಗವತರು ಕುರುಡಾಗಿದ್ದರು. ವಿದೇಶಿ ಬಂಡವಳಿಗರು ಹಾಗೂ ಅದರ ಸ್ವದೇಶಿ ಚಮಚಾಗಳು ದೇಶವನ್ನು ಅತ್ತಿತ್ತ ತಳ್ಳಾಡುತ್ತಿರುವಾಗ ಸ್ವದೇಶಿ ಮತ್ತು ಸ್ವಾವಲಂಬನೆ ಎಂಬ ಪದಗಳು ಕೇವಲ ಶಬ್ದಗಳಷ್ಟೆ ಆಗುತ್ತವೆ. ಪ್ರತಿಯೊಬ್ಬ ಭಾರತೀಯನೂ ಹಿಂದೂ ಎನ್ನುವ ಅವರ ಸಾಮಾಜಿಕ ಚಿಂತನೆಗಳು ಹೆಚ್ಚೆಂದರೆ ಹಾಸ್ಯಾಸ್ಪದ ಅನ್ನಬಹುದು. ಮತ್ತು ಭವಿಷ್ಯದ ಕೆಟ್ಟ ಕನಸಿನ ಮುನ್ಸೂಚನೆ ಎನ್ನಬಹುದು.

●

ವರದಕ್ಷಿಣೆ ಒಂದು ನಾಚಿಕೆಗೇಡು...

... ಪುಟ 4 ರಿಂದ

ಸ್ವಜಾತಿಯೊಳಗೇ ವಿವಾಹ ಪದ್ದತಿಯ ಪಾತ್ರ

ವರದಕ್ಷಿಣೆಯಲ್ಲಿ ಸ್ವಜಾತಿಯೊಳಗೆ ವಿವಾಹ ಮಾಡಿಕೊಳ್ಳುವ ಪದ್ದತಿಯು ಪ್ರಮುಖ ಪಾತ್ರ ವಹಿಸುತ್ತದೆ. ಸ್ವಜಾತಿಯೊಳಗೆ ವರನನ್ನು ಹುಡುಕುವ ಅನಿವಾರ್ಯತೆ ಮಾರುಕಟ್ಟೆ ದರವನ್ನು ಹೆಚ್ಚಿಸುತ್ತದೆ. ಅಂತರ್ಜಾತಿ ವಿವಾಹಗಳ ಸಂಖ್ಯೆ ಕಡಿಮೆ ಇರುವುದು, ಜಾತಿ ಆಧಾರಿತ ಅಪರಾಧಗಳು ಹೆಚ್ಚುತ್ತಿರುವ ಪರಿಸ್ಥಿತಿಯೇ ಜಾತಿ ಸಂಘಗಳ ಸಮ್ಮೇಳನಗಳಲ್ಲಿ, ಸಾಮಾಜಿಕ ಮಾಧ್ಯಮಗಳನ್ನು ಬಳಸುವುದರಿಂದ ಅವಳು ಹಾಳಾಗುತ್ತಾಳೆ; ವಿದ್ಯಾವಂತರಾಗಿದ್ದರೆ ಆ ಮನೆಯ ಹೆಣ್ಣನ್ನು ಮದುವೆಯಾಗಬಾರದು ಎಂಬ ಪ್ರತಿಗಾಮಿ ವಿಚಾರಗಳನ್ನು ಧೈರ್ಯವಾಗಿ ಮಾತನಾಡುತ್ತಾರೆ.

ಹೆಂಡತಿಯರನ್ನು ಆಸ್ತಿಯಂತೆ ನೋಡುವ ದೃಷ್ಟಿಕೋನ

ಸಹಜೀವಿಯನ್ನು ಹೊಡೆಯುವುದು, ದೈಹಿಕ ಹಿಂಸೆ ಮಾಡುವುದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು. ಕೆಲವೊಮ್ಮೆ ಪತಿ ತನ್ನನ್ನು ಹೊಡೆಯುತ್ತಾನೆ ಎಂದು ಮಹಿಳೆ ಹೇಳಿದರೆ, ಏಕೆ ಹೊಡೆದರು ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಅವನು ಯಾವುದೇ ಕಾರಣವಿಲ್ಲದೆ ಅವಳನ್ನು ಹೊಡೆದಿದ್ದಾನೆ. ಹೆಣ್ಣನ್ನು ಮದುವೆ ಮಾಡಿಕೊಂಡು, ತದನಂತರ ಅವಹೇಳನಕಾರಿಯಾಗಿ ಮಾತನಾಡುವ, ಕೀಳಾಗಿ ನಡೆಸಿಕೊಳ್ಳುವ, ಬೆಂಕಿ ಹಚ್ಚಿ ಸುಡುವ, ಕೊಲ್ಲುವ ಮತ್ತು ಹೊಡೆಯುವ ಅಧಿಕಾರ ಎಲ್ಲಿಂದ ಬರುತ್ತದೆ? "ನನ್ನ ಹೆಂಡತಿಯನ್ನು ನಾನು ಹೊಡೆದು ಕೊಲ್ಲುತ್ತೇನೆ, ಅದನ್ನು ಕೇಳಲು ನೀನು ಯಾರು? ಎಂದು ಹೇಳುವ ದುರಹಂಕಾರವನ್ನು ಇವರಿಗೆ ಯಾರು ನೀಡುತ್ತಾರೆ? ಇದು ಮಹಿಳೆಯರನ್ನು ಎರಡನೇ ದರ್ಜೆಯ ಸಾಮಾಜಿಕ ಸ್ಥಾನಮಾನದಲ್ಲಿ ಇರಿಸುವ ಮತ್ತು ಅವರ ಹೆಂಡತಿಯರನ್ನು ಆಸ್ತಿಯಂತೆ ನೋಡುವ ದೃಷ್ಟಿಕೋನವಾಗಿದೆ. ಕೌಟುಂಬಿಕ ಹಿಂಸಾಚಾರದಿಂದ ಮಹಿಳೆಯರ ರಕ್ಷಣಾ ಕಾಯ್ದೆ ಬಂದಿದ್ದೇ ಒಂದು ಇತಿಹಾಸ. ಅದು ಸುಮ್ಮನೆ ಬಂದಿದ್ದಲ್ಲ. ಒಂದು ದೊಡ್ಡ ಮಟ್ಟದ ಹೋರಾಟ ಅದು. ಬಿಜೆಪಿ ಸರ್ಕಾರದಲ್ಲಿ ಮುರಳಿ ಮನೋಹರ್ ಜೋಶಿ ಮಾನವ ಸಂಪನ್ಮೂಲ ಸಚಿವರಾಗಿದ್ದಾಗ, ನಿಯಮಿತ ಹೊಡೆತವಾಗಿದ್ದರೆ ಮಾತ್ರ ಹಿಂಸೆ ಎಂದು ಕಾನೂನಿನಲ್ಲಿ ವ್ಯಾಖ್ಯಾನಿಸಿದರು. ಇದನ್ನು ವಿರೋಧಿಸಿ ತೀವ್ರ ಪ್ರತಿಭಟನೆಗಳು ನಡೆದವು. ನಂತರ ಮಹಿಳೆಯರು ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳ ಸಲಹೆಯನ್ನು ತೆಗೆದುಕೊಂಡು, ಯುಪಿಎ ಸರ್ಕಾರವು ಸಮಗ್ರ ಕಾನೂನು ವ್ಯಾಖ್ಯಾನವನ್ನು ನೀಡಿತು. ದೈಹಿಕ, ಮಾನಸಿಕ, ಮೌಖಿಕ, ಆರ್ಥಿಕ ಮತ್ತು ಲೈಂಗಿಕ ಕಿರುಕುಳ ಎಂದು ವರ್ಗೀಕರಿಸಲಾಯಿತು. ಸರ್ಕಾರ ಮತ್ತು ಕಾನೂನು ನಮ್ಮ ಮನೆಗಳಿಗೆ ಇಣುಕುವುದು ಸರಿಯಲ್ಲ ಎಂಬ ವಾದಗಳಿದ್ದವು. ಅದನ್ನು ಮೀರಿ ಕಾನೂನು ತರಲಾಯಿತು. ವರದಕ್ಷಿಣೆ ದೌರ್ಜನ್ಯವು ಕೌಟುಂಬಿಕ ಹಿಂಸೆಯ ವ್ಯಾಖ್ಯಾನದ ಅಡಿಯಲ್ಲಿ ಬರುತ್ತದೆ.

ಮನುವಾದಿ ಸಿದ್ಧಾಂತ

ಹೆಣ್ಣನ್ನು ಗುಲಾಮರನ್ನಾಗಿ ಕಾಣುವ ಮನುವಾದಿ ಸಿದ್ಧಾಂತವು ಆಡಳಿತಾರೂಢ ಆರ್‌ಎಸ್‌ಎಸ್–ಬಿಜೆಪಿಯ ಸಿದ್ಧಾಂತವಾಗಿದೆ, ಅದು ನಮ್ಮ ಸಮಾಜವನ್ನು ಹಲವು ರೂಪಗಳಲ್ಲಿ ವ್ಯಾಪಿಸಿವೆ. ಆದ್ದರಿಂದ, ನಮ್ಮ ಹೋರಾಟವು ವ್ಯಾಪಕವಾಗಬೇಕು, ಎಲ್ಲಾ ವೇದಿಕೆಗಳಲ್ಲಿಯೂ ನಡೆಯಬೇಕು. ವರದಕ್ಷಿಣೆ ಪಡೆಯುವುದು ಒಂದು ಸ್ಥಾನಮಾನವಲ್ಲ, ಅದು ನಾಚಿಕೆಗೇಡಿನ ಸಂಗತಿ, ಅಪರಾಧ! ಐಷಾರಾಮಿ ಮದುವೆ ಅನಿವಾರ್ಯವಲ್ಲ! ವರದಕ್ಷಿಣೆಯನ್ನು ನಿರ್ಲಕ್ಷಿಸೋಣ. ಕುಟುಂಬ ಸಂಬಂಧಗಳನ್ನು ಪ್ರಜಾಪ್ರಭುತ್ವಗೊಳಿಸೋಣ!

ಲೇಖಕರು: ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘದ ರಾಷ್ಟ್ರೀಯ ಉಪಾಧ್ಯಕ್ಷೆ
(ಕನ್ನಡಕ್ಕೆ: ಸಿಚಿ)

NEW No. MAG(3)/NPP/205/2021-2022
JANASHAKTHI KANNADA VARA PATRIKE September 15-21, 2025 Price: Rs. 10/- Date of Publication: 12 September 2025 RNI No. KARKAN/2006/17926 Posted on 15-09-2025
Posted at BG PSO, BG - 560026 **Posted at Periodical Rate -** Rs. 2

ಪ್ರತಿಯೊಬ್ಬ ಭಾರತೀಯನೂ ಹಿಂದೂ ಎನ್ನುವ ಭಾಗವತರ ಸಾಮಾಜಿಕ ಚಿಂತನೆಗಳು ಹೆಚ್ಚೆಂದರೆ ಹಾಸ್ಯಾಸ್ಪದ ಅನ್ನಬಹುದು. ಭಾಗವತರಾಗಲೀ ಅವರ ಹಿಂದಿನವರಾಗಲೀ ಬಗೆಹರಿಸಲಾಗದ ಒಗಟುಗಳಲ್ಲಿ ಅತ್ಯಂತ ದೊಡ್ಡ ಒಗಟೆಂದರೆ, ಜಾತಿ ಪದ್ಧತಿ ಅದೇಕೆ ಇನ್ನೂ ಬಗೆಹರಿಯಲಾಗದ ಸಮಸ್ಯೆಯಾಗಿಯೇ ಉಳಿದಿದೆ ಮತ್ತು ಅದರ ಸುತ್ತ ಆರ್‌ಎಸ್‌ಎಸ್ ಮುಖಂಡರು ಏಕೆ ಎಡವಿಬೀಳುತ್ತಿದ್ದಾರೆ ಹಾಗೂ ತಡಕಾಡುತ್ತಲೇ ಇದ್ದಾರೆ? ಹಿಂದೂಗಳನ್ನು ಒಗ್ಗೂಡಿಸುವುದು, ಅವರಲ್ಲಿ ವಿಶ್ವಾಸದ ಭಾವನೆ ಮೂಡಿಸುವುದು ಮತ್ತು ಸನಾತನ ಧರ್ಮ ಎಂದೂ ಕರೆಯಲಾಗುವ ಪ್ರಾಚೀನ ಹಿಂದೂ ತತ್ತ್ವಗಳ ಆಧಾರದಲ್ಲಿ ನಡೆಯುವ ಸಮಾಜವನಸ್ನು ಕಟ್ಟುವುದು ಆರ್‌ಎಸ್‌ಎಸ್‌ನ ಮೂಲ ಉದ್ದೇಶ. ಆದರೆ, ವಾಸ್ತವ ಬದುಕಿನಲ್ಲಿ, ಹಿಂದೂ ಸಮಾಜವು ಜಾತಿ ಹಾಗೂ ಉಪಜಾತಿಗಳ ನಿರಾಶಾದಾಯಕ ಒಡಕುಗಳಿಂದ ತುಂಬಿತುಳುಕುತ್ತಿದೆ. ಈ ಎರಡೂ ದೋಣಿಗಳ ಮೇಲೆ ಸವಾರಿ ಮಾಡಲು ಆರ್‌ಎಸ್‌ಎಸ್ ವ್ಯರ್ಥ ಪ್ರಯತ್ನ ನಡೆಸುತ್ತಿದೆ ಮತ್ತು ನಿರಂತರವಾಗಿ ವಿಫಲವಾಗಿದೆ.

ಭಾಗವತರ ಒಗಟುಗಳು

ಸವೇರಾ
ಅನುವಾದ: ಟಿ.ಸುರೇಂದ್ರರಾವ್

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ರಾಷ್ಟ್ರೀಯವಾದಿ, ಉದಾರವಾದಿ, ಎಲ್ಲರನ್ನೂ ಒಳಗೊಳ್ಳುವ ಹಾಗೂ ನಿರ್ಮಲ ದೃಷ್ಟಿಕೋನ ಹೊಂದಿರುವ ಸಂಘಟನೆಯಾಗಿದ್ದು, ಭಾರತವನ್ನು ಇಡೀ ಮಾನವಕೋಟಿಯ ಶಾಂತಿ ಹಾಗೂ ಸಮದ್ಧಿಯ ಯುಗದತ್ತ ಕೊಂಡೊಯ್ಯಲು ಬಯಸುತ್ತದೆ ಎಂದು ಅದರ ಮುಖ್ಯಸ್ಥ ಮೋಹನ್ ಭಾಗವತ್ ಅವರು ತಮ್ಮ ಅತ್ಯಂತ ಉತ್ಸಾಹದ ಹಾಗೂ ದ್ವಂದ್ವಾರ್ಥದ ಮಾತನ್ನು ಆಡಿದರು. ಮುಂದಿನ ತಿಂಗಳು ಆರ್‌ಎಸ್‌ಎಸ್‌ಗೆ ನೂರು ವರ್ಷ ಪೂರ್ಣವಾಗುತ್ತಿರುವುದರ ಸಂಭ್ರಮಾಚರಣೆಯ ಕುರಿತು ದೆಹಲಿಯಲ್ಲಿ ಆಗಸ್ಟ್ 26 ರಿಂದ 28ರ ವರೆಗೆ ಮೂರು ದಿನಗಳು ನಡೆದ ಸಭೆಯ ಸಂದರ್ಭದಲ್ಲಿ ಅವರು ಮಾತನಾಡಿದರು. ಬಹಳ ಎಚ್ಚರದಿಂದ ಆಯ್ಕೆಮಾಡಲಾದ ರಾಜಧಾನಿಯ ವಿಧೇಯ ಬುದ್ಧಿಜೀವಿಗಳು – ಪತ್ರಕರ್ತರು, ಶಿಕ್ಷಣತಜ್ಞರು, ಮಾಜಿ ಅಧಿಕಾರಿಗಳು ಕೆಲವು ರಾಯಭಾರಿಗಳ ತಂಡದವರೂ ಮತ್ತಿತರರು ಆ ಸಭೆಯಲ್ಲಿ ಹಾಜರಿದ್ದರು.


ಭಾರತವು ಈಗಾಗಲೇ ಹಿಂದೂ ರಾಷ್ಟ್ರವಾಗಿದೆ; ಈಗಾಗಲೇ ಅಖಂಡ ಭಾರತ ಕೂಡ ಆಗಿದೆ: ಭಾರತದಲ್ಲಿ ವಾಸವಿರುವ ಎಲ್ಲರೂ ಆವರ ಆರಾಧನಾ ವಿಧಾನ ಯಾವುದೇ ಆಗಿದ್ದರೂ ಮತ್ತು ಅವರು ಮಾತೃಭೂಮಿಗೆ ಮತ್ತು ಸಂಸ್ಕೃತಿ ಹಾಗೂ ಪೂರ್ವಿಕರ ಬಗ್ಗೆ, ಗೌರವ ಹೊಂದಿದವರಾಗಿದ್ದರೆ ಅವರು ಹಿಂದೂಗಳಾಗಿದ್ದಾರೆ. ಹೀಗೆಂದು 1972ರಲ್ಲೇ ಉಡುಪಿಯಲ್ಲಿ ಸೇರಿದ್ದ ಸಮ್ಮೇಳನದಲ್ಲಿ ಧಾರ್ಮಿಕ ನೇತಾರರು ಘೋಷಣೆ ಮಾಡಿದ್ದಾರೆ ಎಂಬ ಕೆಲವು ಚಕಿತಗೊಳಿಸುವ ಹಕ್ಕಿನ ಮಾತುಗಳನ್ನೂ ಅವರು ಆಡಿದರು. ಹಿಂದೂ ಧರ್ಮದಲ್ಲಿ ಜಾತಿಯಾಧಾರಿತ ತಾರತಮ್ಯಗಳಿಗೆ ಆಸ್ಪದವಿಲ್ಲ ಮತ್ತು ಎಲ್ಲಾ ಜನರು ಅದರ ವಿರೋಧವಾಗಿದ್ದಾರೆ. ಇವೆಲ್ಲವನ್ನೂ ಒಳಗೊಳ್ಳುವಿಕೆ, ಸಹಿಷ್ಣುತೆ ಹಾಗೂ ಮಾನವೀಯತೆಯ ಕಂಪಿನೊಂದಿಗೆ ತುಂಬಲಾಗಿದೆ.

ಹೊಸ ದರ್ಶನವೊಂದನ್ನು ಘೋಷಿಸುತ್ತಿದ್ದಾರೆಯೇ?

ಅಂದರೆ ಭಾಗವತ್ ಅವರು ತಮ್ಮ ಭಾಷಣದ ಶೀರ್ಷಿಕೆಯಲ್ಲಿ ಬರೆದಂತೆ ಹೊಸ ದಿಗಂತಗಳು– ಅಥವಾ ಆರ್‌ಎಸ್‌ಎಸ್‌ನ ಹೊಸ ದರ್ಶನವೊಂದನ್ನು ಘೋಷಿಸುತ್ತಿದ್ದಾರೆಯೇ? ಅಥವಾ ಆರ್‌ಎಸ್‌ಎಸ್‌ನ ಒಂದು ಶತಮಾನದ 'ಸೇವೆ' ಮತ್ತು "ತ್ಯಾಗದ ನಂತರವೂ ಅದನ್ನು ಬೆಂಬಲಿಸದ, ಹಿಂದೂಗಳನ್ನು ಒಳಗೊಂಡಂತೆ ಭಾರತದ ದೊಡ್ಡ ಜನವಿಭಾಗದವರ ಮೇಲೆ ಪ್ರಭಾವಬೀರುವ ಒಂದು ರೀತಿಯ ತಂತ್ರ ಅದಾಗಿರಬಹುದೆ? ಅಥವಾ ಮೋದಿ ನೇತೃತ್ವದ ಆಡಳಿತವು ಬಹಳ ಕಾಲ ಅನುಸರಿಸಿದ ಧರ್ಮಾಂಧ ನೀತಿಗಳನ್ನು ಮರೆಮಾಚಿ ಆ ಆಳ್ವಿಕೆಯನ್ನೇ ಶಾಶ್ವತಗೊಳಿಸಲು ಸಹಾಯಮಾಡುವ ಪ್ರಯತ್ರದ ಭಾಗವಾಗಿ ಕೇವಲ ಆರ್‌ಎಸ್‌ಎಸ್ ವರಿಷ್ಠರ ಗೊಂದಲದ ಆಲೋಚನೆ ಮಾತ್ರವೇ ಅದಾಗಿರಬಹುದೇ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಮೂರನೇ ದಿನ ನಡೆದ ಸಂಘಟಿತ ಪ್ರಶ್ನಿತರ ಕಲಾಪದಲ್ಲಿ ಮತ್ತು ಬೇರೆ ಕಡೆಗಳಲ್ಲಿ ಭಾಗವತರು ಮಾಡಿದ ಭಾಷಣಗಳಲ್ಲೂ ಭಾಗಶಃ ಕಾಣಬಹುದು. ಸಂಘ ಪರಿವಾರದ ಕಾರ್ಯಾಚರಣೆಗಳಲ್ಲಂತೂ ಖಂಡಿತಾ ಕಾಣಬಹುದು. ಆ ಒಗಟುಗಳನ್ನು ಬಿಡಿಸಲು ಸ್ವಲ್ಪ ಪ್ರಯತ್ನ ಮಾಡೋಣ.

ಅವರ ಮಾತುಗಳಿಂದಲೇ ಸತ್ಯ ಬಯಲು ಮಾಡೋಣ

ಮೂರನೇ ದಿನದ ಪ್ರಶ್ನೋತರ ಕಲಾಪದಲ್ಲಿ ಭಾಗವತರು ತಮ್ಮ ಎಂದಿನ ನಾಗರೀಕತೆಯ ಮಹತ್ವಾಕಾಂಕ್ಷೆಗಳ ಅಪರೂಪದ ಹಾದಿಯನ್ನು ತೊರೆಯಬೇಕಾಯಿತು ಮತ್ತು ದೇಶದಲ್ಲಿ ದಿನನಿತ್ಯ ನಡೆಯುವ ವಿದ್ಯಮಾನಗಳ ಬಗ್ಗೆ ಮಾತನಾಡಿ ಕೈಹೊಲಸು ಮಾಡಿಕೊಳ್ಳಬೇಕಾಯಿತು. ಸತ್ಯ ತಾನೇ ತಾನಾಗಿ ಹೊರಬಂತು. ಉದಾಹರಣೆಗೆ ವಾರಣಾಸಿಯ ಕಾಶಿ ವಿಶ್ವನಾಥ ಮಂದಿರ ಹಾಗೂ ಕೃಷ್ಣ ಜನ್ಮಭೂಮಿಯಾಗಿರುವ ಮಥುರಾವನ್ನು 'ವಿಮೋಚನೆ' ಮಾಡಬೇಕೆಂಬ ಬೇಡಿಕೆ ಕುರಿತ ಸಂಘದ ಧೋರಣೆಯ ಬಗ್ಗೆ ಕೇಳಿದಾಗ ಅದನ್ನು ಸಾಧಿಸಲು ಹೋರಾಟಗಳನ್ನು ಆರಂಭಿಸಲಾಗುತ್ತದೆ



ಎಂದು ಘೋಷಿಸಿದರು. ಈ ಹೋರಾಟಗಳಲ್ಲಿ ಆರ್‌ಎಸ್‌ಎಸ್ ನೇರವಾಗಿ ಭಾಗಿಯಾಗುವುದಿಲ್ಲ, ಸದಸ್ಯರು ಹೋರಾಡಲು ಮುಕ್ತರಾಗಿರುತ್ತಾರೆ ಎಂದು ಹೇಳಿದರು.

"ರಾಮ ಮಂದಿರ ನಮ್ಮ ಬೇಡಿಕೆಯಾಗಿತ್ತು ಮತ್ತು ನಾವು ಆ ಚಳವಳಿಯನ್ನು ಬೆಂಬಲಿಸಿದೆವು. ಆದರೆ ಇತರ ಚಳವಳಿಗಳಲ್ಲಿ ಆರ್‌ಎಸ್‌ಎಸ್ ಈಗ ಪಾಲ್ಗೊಳ್ಳುವುದಿಲ್ಲ. ಈಗಲೂ ಹಿಂದೂಗಳ ಮನಸ್ಸಿನಲ್ಲಿ ಕಾಶಿ, ಮಥುರಾ ಮತ್ತು ಅಯೋಧ್ಯಾ ಬಗ್ಗೆ ಆಳವಾದ ಮಹತ್ವ ಇದೆ. ಎರಡು ಜನ್ಮಭೂಮಿಗಳು ಮತ್ತೊಂದು ವಾಸಸ್ಥಳ. ಹಿಂದೂ ಸಮಾಜ ಹಂಬಲ ವ್ಯಕ್ತಪಡಿಸುವುದು ಸಹಜವಾದದ್ದು" ಎಂದರು ಭಾಗವತರು.

ತಾನು ಮುಖ್ಯಸ್ತನಾಗಿರುವ ಸಂಘಟನೆ ಆರ್‌ಎಸ್‌ಎಸ್ ಪ್ರತಿನಿಧಿಸುತ್ತದೆ ಎಂಬುದು ಮಾತ್ರವಲ್ಲ, ಅವರ ತಪ್ಪು ತಿಳುವಳಿಕೆಯಾದ ಇಡೀ ಹಿಂದೂ ಸಮುದಾಯ ಕೂಡ ಒಳಗೊಳ್ಳುವಿಕೆ, ತಾಳ್ಮೆ ಹಾಗೂ ಮಾನವೀಯತೆಯ ಮೌಲ್ಯಗಳಿಗೆ ಬದ್ಧ, ಸಂವಿಧಾನಕ ಬದ್ಧ, ದೇಶದ ಕಾನೂನಿಗೆ ಬದ್ಧ ಎಂಬ ಅವರ ಮಾತನ್ನು ಒಂದೇ ಹೊಡೆತದಲ್ಲಿ ಅವರೇ ನುಚ್ಚು ನೂರು ಮಾಡಿದರು. ಸ್ವಾತಂತ್ರ್ಯದ ಸಂದರ್ಭದಲ್ಲಿ ಧಾರ್ಮಿಕ ಪ್ರದೇಶಗಳ ಒಡೆತನದ ಪ್ರಶ್ನೆ ಏನಿತ್ತೋ ಅದನ್ನು ಮರುಪರಿಶೀಲಿಸುವ ಪ್ರಶ್ನೆ ಎತ್ತುವುದನ್ನು 'ಆರಾಧನಾ ಸ್ಥಳಗಳ ಕಾಯಿದೆ, 1991' ಸ್ಪಷ್ಟವಾಗಿ ನಿಷೇಧಿಸುತ್ತದೆ. ಆದಾಗ್ಯೂ, 'ಹಿಂದೂಗಳು ಏನನ್ನಾದರೂ ಬಯಸಿದರೆ ಅವರ ಬಯಕೆಯನ್ನು ಈಡೇರಿಸಬೇಕು' ಎಂಬ ಅದೇ ಹಳೇ ವಾದವನ್ನು ಭಾಗವತರು ಮುಂದಿಡುತ್ತಾರೆ. ಆರ್‌ಎಸ್‌ಎಸ್ ಸದಸ್ಯರು ಹೋರಾಟಗಳನ್ನು ಮುಂದುವರಿಸಲಿ ಎಂಬುದನ್ನು ಕೂಡ ಬಹಳ ಎಚ್ಚರದಿಂದ ಅವರು ಅನುಮತಿಸುತ್ತಾರೆ.

ಸಹ ಸಂಘಟನೆಗಳ ಮುಖ್ಯ ಸ್ಥಾನದಲ್ಲಿರುವವರು ಆರ್‌ಎಸ್‌ಎಸ್‌ನವರೇ

ವಿಶ್ವ ಹಿಂದೂ ಪರಿಷತ್ತಿನಂತಹ ಹಲವಾರು ಸಹ ಸಂಘಟನೆಗಳು ಆರ್‌ಎಸ್‌ಎಸ್‌ನ ಆದೇಶದಂತೆಯೇ ನಡೆಯುತ್ತವೆ ಎನ್ನುವ ಸತ್ಯ ಎಲ್ಲರಿಗೂ ಗೊತ್ತಿದೆ ಮತ್ತು ಅದನ್ನು ಆರ್‌ಎಸ್‌ಎಸ್ ಕೂಡ ಒಪ್ಪಿಕೊಳ್ಳುತ್ತದೆ. ಆ ಸಹಸಂಘಟನೆಗಳ ಮುಖ್ಯ ಸ್ಥಾನದಲ್ಲಿರುವ ಸದಸ್ಯರು ಆರ್‌ಎಸ್‌ಎಸ್‌ನವರೇ ಆಗಿರುತ್ತಾರೆ ಎನ್ನುವುದೂ ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ನಿಜ ಹೇಳಬೇಕೆಂದರೆ, ಪ್ರತಿ ವರ್ಷವೂ ಎಲ್ಲಾ 32 ಸಹ ಸಂಘಟನೆಗಳ ಪ್ರತಿನಿಧಿಗಳು ಸಮನ್ವಯ ಸಮಿತಿಯ ಸಭೆಯಲ್ಲಿ ಭಾಗವಹಿಸುತ್ತಾರೆ ಮತ್ತು ಆ ಸಭೆಯಲ್ಲಿ ಆರ್‌ಎಸ್‌ಎಸ್‌ನ ಪೂರ್ಣಪ್ರಮಾಣದ ನಾಯಕತ್ವ ಅಲ್ಲಿ ಹಾಜರಿದ್ದು, ಎಲ್ಲಾ ಚಟುವಟಿಕೆಗಳ ಪರಾಮರ್ಶೆ ನಡೆಯುತ್ತದೆ ಮತ್ತು ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಲಾಗುತ್ತದೆ. ಈ ವರ್ಷ ಜೋದ್‌ಪುರದಲ್ಲಿ ಆ ಸಮನ್ವಯ ಸಭೆ ನಡೆಯುತ್ತಿದೆ. ಆ ಸಭೆಯಲ್ಲಿ ವಿಹೆಚ್‌ಪಿ ಮುಖಂಡರಲ್ಲದೇ, ಇತರ ಎಲ್ಲಾ ಸಹ ಸಂಘಟನೆಗಳ ಮುಖ್ಯಸ್ಥರೂ ಹಾಜರಿರುತ್ತಾರೆ. ಆದಕಾರಣ, ಭಾಗವತರು ಈ ಮೇಲೆ ತಿಳಿಸಿದಂತೆ ಆ ಸಹ ಸಂಘಟನೆಗಳಿಗೆ ಹಸಿರು ನಿಶಾನೆ ತೋರುತ್ತಿದ್ದಾರೆ.

ಮೂರು ಮಕ್ಕಳನ್ನು ಪಡೆಯಬೇಕು!!

ಜನಸಂಖ್ಯೆ ನಿಯಂತ್ರಣ ಕುರಿತು ಮಾತನಾಡಿದ ಭಾಗವತರು ಮತಾಂತರ ಹಾಗೂ ಒಳನುಸುಳುವಿಕೆಗಳು ಜನಸಂಖ್ಯಾ ಅಸಮತೋಲನಗಳನ್ನು ಸೃಷ್ಟಿ ಮಾಡಿರುವ ಕಾರಣ, ಸಮತೋಲನ ಕಾಯ್ದುಕೊಳ್ಳಲು ಪ್ರತಿ ಕುಟುಂಬವು ಮೂರು ಮಕ್ಕಳನ್ನು ಪಡೆಯಬೇಕು ಎಂಬ ವಿಲಕ್ಷಣ ಸಲಹೆಯನ್ನು ನೀಡಿದರು. ಇದರ ಹಿಂದಿರುವ ತರ್ಕವಾದರೂ ಏನು? ಮತ್ತೆ ಅದೇ ನೂರು ವರ್ಷಗಳ ಹಿಂದಿನ ಹಳೆಯ ವಾದ: ಮುಸ್ಲಿಂ ಜನಸಂಖ್ಯೆಯು ಹಿಂದೂ ಜನಸಂಖ್ಯೆಯನ್ನು ಹಿಂದಿಕ್ಕುತ್ತದೆ ಎನ್ನುವುದು ಜನಸಂಖ್ಯೆ ನಿಯಂತ್ರಣದ ಬಗ್ಗೆ ಆರ್‌ಎಸ್‌ಎಸ್ ಯಾವಾಗಲೂ ಎಚ್ಚರಿಕೆಯ ಧೋರಣೆಯನ್ನೇ ಅನುಸರಿಸುತ್ತದೆ. ಹಿಂದೂಗಳು ವಿನಯದಿಂದ ನಿಯಂತ್ರಣವನ್ನು ಅಳವಡಿಸಿಕೊಳ್ಳುತ್ತಾರೆ, ಮುಸ್ಲಿಮರು ಅದನ್ನು ಅನುಸರಿಸುವುದೇ ಇಲ್ಲ ಎಂಬ ತರ್ಕ ಅವರದು. ಮುಸ್ಲಿಮರ ಫಲವಂತಿಕೆ ದರವು ಪ್ರಸ್ತುತ ಇತರ ಸಮುದಾಯದವರಂತೆಯೇ ಇಳಿಯುತ್ತಿದೆ ಮತ್ತು ವೇಗವಾಗಿ ಇಳಿಯುತ್ತಿದೆ ಎಂದೂ ಭಾಗವತರು ಒಪ್ಪುತ್ತಾರೆ: ಆದರೆ ಆಳವಾಗಿ ಬೇರೂರಿರುವ ಹಾಗೂ ಆಧಾರರಹಿತವಾದ ಭಯವನ್ನು ಬಿಟ್ಟುಬಿಡಲು ಭಾಗವತರಿಗೆ ಸಾಧ್ಯವಾಗುತ್ತಿಲ್ಲ ಏಕೆಂದರೆ ಮುಸ್ಲಿಮರು ಹಿಂದೂಗಳನ್ನು ಹಿಂದಕ್ಕೆ ಹಾಕಿ ಬೆಳೆದು ಬಿಡುತ್ತಾರೆ ಎಂದು ಆರ್‌ಎಸ್‌ಎಸ್ ಸದಸ್ಯರ ತಲೆಯಲ್ಲಿ ಹುಗಿದುಹೋಗಿರುವ ಆಧಾರವಿಲ್ಲದ ಭಯವನ್ನು ತೆಗೆದುಹಾಕಲಾಗುತ್ತಿಲ್ಲ.

ಒಳನುಸುಳುವಿಕೆ ಪ್ರಶ್ನೆ ಕುರಿತು

ಒಳನುಸುಳುವಿಕೆ ಪ್ರಶ್ನೆ ಕುರಿತು ಭಾಗವತರು ಈ ಹಿಂದೆ ಹೇಳಿರುವಂತೆ "ಅಖಂಡ ಭಾರತ"ದಲ್ಲಿ ನೆಲೆಸಿರುವ ಎಲ್ಲರ ಜೀವತಳಿ (ಡಿಎನ್‌ಎ) ಒಂದೇ ಆಗಿರುವಾಗ, ಒಳನುಸುಳುವಿಕೆಯನ್ನು ಏಕೆ ತಡೆಯಬೇಕು ಎಂದು ಕೇಳಲಾಯಿತು. ಅದಕ್ಕೆ ಭಾಗವತರು ತಮ್ಮ ಹಳೆಯ ವಾದದ ಮರೆಯಲ್ಲಿ ಅವಿತುಕೊಳ್ಳಲು ಬಯಸಿದರು ಮತ್ತು 'ದೇಶದ ಕಾನೂನನ್ನು ಎತ್ತಿ ಹಿಡಿಯಬೇಕು' ಎಂದು ಹೇಳಿದರು. (ಕಾಶಿ, ಮಥುರಾ ಮುಂತಾದ ಪ್ರಕರಣಗಳಲ್ಲಿ ದೇಶದ ಕಾನೂನನ್ನು ಎತ್ತಿ ಹಿಡಿಯುವ ಮಾತನಾಡದೆ ಜನರ ನಂಬಿಕೆಯನ್ನು ಗೌರವಿಸಬೇಕು ಎಂದಿದ್ದನ್ನು ನೆನಪಿಸಿಕೊಳ್ಳಿ) ರೋಹಿಂಗ್ಯಾಗಳು ಹಾಗೂ ಬಾಂಗ್ಲಾದೇಶಿಗಳು ಎಂದು ಆರ್‌ಎಸ್‌ಎಸ್ ನಡೆಸಿದ ಅಪಪ್ರಚಾರದಿಂದ ಪ್ರೇರಿತರಾದ ಜನರು ಇತ್ತೀಚೆಗೆ ದೇಶದ ಹಲವಾರು ಪ್ರದೇಶಗಳಲ್ಲಿ ಬಂಗಾಳಿಗಳನ್ನು ಹೆದರಿಸಿ ಹೊಡೆದೋಡಿಸಿದ ಪ್ರಕರಣಗಳ ಕುರಿತು ಕೇಳಿದಾಗ ಭಾಗವತರು ಏನು ಹೇಳಲೂ ನಿರಾಕರಿಸಿದರು. ಮೋದಿ ಸರ್ಕಾರ ಜಾರಿಗೆ ತಂದ ಪೌರತ್ವ ತಿದ್ದುಪಡಿ ಕಾಯಿದೆಯು ನೆರೆಹೊರೆಯ ಎಲ್ಲಾ ದೇಶಗಳಿಂದ ಬರುವ ಮುಸ್ಲಿಮರ ಹೊರತಾದ ವಲಸಿಗರಿಗೆ ಪೌರತ್ವವನ್ನು ದಯಪಾಲಿಸುತ್ತದೆ ಎಂಬ ಮಾತಿಗೂ ಭಾಗವತರು ಮೌನವನ್ನೇ ಉತ್ತರವಾಗಿ ನೀಡಿದರು. ಈ ಎಲ್ಲಾ ಉದಾಹರಣೆಗಳಿಂದ ಸಾಬೀತಾಗಿದ್ದು ಏನೆಂದರೆ ಭಾಗವತರ ಮುಸ್ಲಿಂ ವಿರೋಧಿ ನಿಲುವು

ಪುಟ 15 ನೋಡಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**

ಪುಟ 11 ಕ್ಕೆ ಪುಟ 12 ರಿಂದ

ಪುಟ 11 ಕ್ಕೆ

ಪುಟ 12 ಕ್ಕೆ

ಪುಟ ಕ್ಕೆ

ಪುಟ 12 ರಿಂದ

ಪುಟ 5 ಕ್ಕೆ

ಗುರುಶಾಂತ ಎಸ್.ವೈ.

ಪುಟ 16ಕ್ಕೆ

–ಗುರುರಾಜ ದೇಸಾಯಿ

ಪುಟ 12 ರಿಂದ

ಸಿ.ಸಿದ್ದಯ್ಯ



ಡಾ. ಕೆ.ಪ್ರಕಾಶ್

¤¯ÉÆÃvÀà¸ÀÄ

ಆರ್. ರಾಮಕೃಷ್ಣ

ಭಾಗ 1

❑

❍⇱⬈⬊⇡

⬈⬊

ì ⬊

❍⇦⇨⬤❖❑■◖●❍

–ನವೀನ್ ಸೂರಿಂಜೆ

⬈

●

●

ವಸಂತರಾಜ ಎನ್.ಕೆ